₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 16.08.2024 ಸಂಪುಟ: 09 ಸಂಚಿಕೆ: 234 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಒಲಿಂಪಿಕ್ಸ್ ವೀರರಿಂದ ಪ್ರಧಾನಿ ಮೋದಿ ಭೇಟಿ

ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಆಟಗಾರರು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿದ ಬಳಿಕ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದರು. ಈ ವೇಳೆ ಎರಡು ಕಂಚು ಗೆದ್ದು ಇತಿಹಾಸ ಬರೆದ ಮನು ಭಾಕರ್ ಅವರು, ಮೋದಿ ಅವರಿಗೆ ತಾವು ಕ್ರೀಡಾಕೂಟದಲ್ಲಿ ಬಳಸಿದ ಪಿಸ್ತೂಲ್ ಅನ್ನು ತೋರಿಸಿ ಅದರ ಬಗ್ಗೆ ವಿವರಣೆ ನೀಡಿದರು.

## ದಾರಿದೀಪೋಕ್ತಿ

ಯಾರದ್ದೇ ಜತೆ ಸಂಬಂಧ ಚೆನ್ನಾಗಿದ್ದಾಗ ಎಲ್ಲ ವಿಷಯಗಳನ್ನು ನಮ್ಮ ಹತ್ತಿರ ಹೇಳುತ್ತಾರೆ. ಒಮ್ಮೆ ಸಂಬಂಧ ಕೆಟ್ಟಿತು ಅನ್ನಿ, ಆಗ ನಮ್ಮ ವಿಷಯವನ್ನು ಎಲ್ಲರ ಹತ್ತಿರವೂ ಹೇಳುತ್ತಾ ಹೋಗುತ್ತಾರೆ. ಒಂದು ಕಾಲಕ್ಕೆ ಉತ್ತಮ ಸಂಬಂಧ ಇತ್ತು ಎಂಬುದನ್ನೂ ಮರೆತುಬಿಡುತ್ತಾರೆ. ಸಂಬಂಧ ಕೆಟ್ಟಾಗಲೂ ಒಂದು ಶಿಸ್ತನ್ನು ಕಾಪಾಡಿಕೊಳ್ಳಬೇಕು.

## ವಕ್ರತುಂಡೋಕ್ತಿ

ಎಲ್ಲರೆದುರು ಹೇಳುವ ಹಸಿ ಸುಳ್ಳು ಅಂದ್ರೆ ನಾನು ಟೀಕೆಯನ್ನು ಮುಕ್ತವಾಗಿ ಸ್ವಾಗತಿಸುತ್ತೇನೆ ಎಂದು ಹೇಳುವುದು.

## ಪುಟ ತೆರೆದಂತೆ...

ಅಣೆಕಟ್ಟು ಎಂಬ ಟಿಕ್‌ಟಿಕ್ ಟೈಮ್ ಬಾಂಬ್!
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಮಾನ್ಯತೆಯೇ ದೊರಕದ ಟ್ರಿಬ್ಯುನಲ್ ಅದು!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

## ಮಾತಂದ್ರೆ ಮಾತು

ಇದು ಬಿಜೆಪಿ ಬಂಡಾಯ ಅಂತಾ ಯಾರೂ ಮಾಧ್ಯಮದವರು ಸುದ್ದಿ ಮಾಡಬೇಡಿ. ಕೈ ಮುಗಿದು ಹೇಳ್ತಿದ್ದೇನೆ, ನಮ್ಮದು ಬಿಜೆಪಿ ನಿಷ್ಠಾವಂತರ ಗುಂಪು ಅಂತಾ ಹೇಳಿ.

-ಬಸನಗೌಡ ಯತ್ನಾಳ
ಶಾಸಕ

### ಕೆಂಪುಕೋಟೆ ಮೇಲೆ ಸತತ 11ನೇ ಬಾರಿ ಧ್ವಜಾರೋಹಣ ನೆರವೇರಿಸಿದ ಪ್ರಧಾನಿ ಮೋದಿ

# ಜಾತ್ಯತೀತ ನಾಗರಿಕ ಸಂಹಿತೆ ಜಾರಿ: ಮೋದಿ

**ದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪು ಕೋಟೆಯ ಆವರಣದಿಂದ 78ನೇ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದಲ್ಲಿ 'ಏಕರೂಪ ನಾಗರಿಕ ಸಂಹಿತೆ' ಜಾರಿಗೆ ಕರೆ ನೀಡಿದರು.

ಕೆಂಪುಕೋಟೆ ಮೇಲೆ ಸತತ 11ನೇ ಬಾರಿ ಧ್ವಜಾರೋಹಣ ನೆರವೇರಿಸಿದ ಪ್ರಧಾನಿ ಮೋದಿ, 98 ನಿಮಿಷಗಳ ಸುದೀರ್ಘ ಭಾಷಣ ಮಾಡಿದರು. 'ಏಕರೂಪ ನಾಗರಿಕ ಸಂಹಿತೆ'ಯನ್ನು ಜಾರಿಗೆ ತರುವುದು ಮತ್ತು 'ತಾರತಮ್ಯದ ಕೋಮು ನಾಗರಿಕ ಸಂಹಿತೆ'ಯನ್ನು ತೊಡೆದುಹಾಕುವುದು ಅತ್ಯಗತ್ಯ ಎಂದು ಪ್ರಧಾನಿ ಹೇಳಿದರು.

**ಏಕರೂಪ ನಾಗರಿಕ ಸಂಹಿತೆ:** ಏಕರೂಪ ನಾಗರಿಕ ಸಂಹಿತೆಯ ಕುರಿತು ಸುಪ್ರೀಂಕೋರ್ಟ್ ಆಗಾಗ ಚರ್ಚಿಸಿ ನಿರ್ದೇಶನಗಳನ್ನು ನೀಡಿದೆ. ಪ್ರಸ್ತುತ ನಾಗರಿಕ ಸಂಹಿತೆ ತಾರತಮ್ಯ ಮತ್ತು ಕೋಮುವಾದ ಎಂದು ಅನೇಕ ಜನರು ಭಾವಿಸುತ್ತಾರೆ. ಸಂವಿಧಾನ ರಚನೆಕಾರರ ಆಶಯಗಳನ್ನು ಪ್ರತಿಬಿಂಬಿಸುವ ಏಕರೂಪ ನಾಗರಿಕ ಸಂಹಿತೆಯ ಅನುಷ್ಠಾನವನ್ನು ಸಂವಿಧಾನ ಮತ್ತು ಸುಪ್ರೀಂಕೋರ್ಟ್ ಎರಡೂ ಬೆಂಬಲಿಸುತ್ತಿದೆ. ಆದ್ದರಿಂದ ಈ ಉದ್ದೇಶವನ್ನು ಈಡೇರಿಸುವ ಮಹತ್ವವಿದೆ. ಆಧುನಿಕ ಸಮಾಜಕ್ಕೆ ಸೂಕ್ತವಲ್ಲದ ಧರ್ಮದ ಆಧಾರದ ಮೇಲೆ ದೇಶವನ್ನು ವಿಭಜಿಸುವ ಕಾನೂನುಗಳನ್ನು ತೆಗೆದುಹಾಕಬೇಕು. ಧಾರ್ಮಿಕ ತಾರತಮ್ಯವನ್ನು ಪರಿಹರಿಸಲು 'ಸೆಕ್ಯುಲರ್ ಸಿವಿಲ್ ಕೋಡ್' ಜಾರಿಗೆ ಈ ಸಮಯವಾಗಿದೆ ಎಂದರು.

**ಒಂದು ರಾಷ್ಟ್ರ ಒಂದು ಚುನಾವಣೆ:** ಆಗಾಗ ನಡೆಯುವ ಚುನಾವಣೆಗಳು ದೇಶದ ಪ್ರಗತಿಗೆ ಅಡ್ಡಿಯಾಗುತ್ತವೆ. 'ಒಂದು ರಾಷ್ಟ್ರ, ಒಂದು ಚುನಾವಣೆ' ಗುರಿಯನ್ನು ಸಾಧಿಸಲು ಎಲ್ಲರೂ ಒಗ್ಗೂಡಬೇಕು. ದೇಶಾದ್ಯಂತ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ರಾಜಕೀಯ ಸ್ಥಿರತೆ ಮತ್ತು ಆಡಳಿತಾತ್ಮಕ ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆ. ಕೆಲವು ಬಿಜೆಪಿ ಆಡಳಿತದ ರಾಜ್ಯಗಳು ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಶ್ರಮಿಸುತ್ತಿದ್ದರೂ, ಕೇಂದ್ರವು ರಾಷ್ಟ್ರೀಯವಾಗಿ ಅದರ ಅನುಷ್ಠಾನಕ್ಕೆ ಇದುವರೆಗೆ ಯಾವುದೇ ಶಾಸನಾತ್ಮಕ ಕ್ರಮವನ್ನು ಕೈಗೊಂಡಿಲ್ಲ. ಕಳೆದ ವರ್ಷವೇ ಕಾನೂನು ಆಯೋಗ ಅದಕ್ಕಾಗಿ ಸಮಾಲೋಚನೆ ಆರಂಭಿಸಿತ್ತು. ಭಾರತದ 140 ಕೋಟಿ ನಾಗರಿಕರು ಒಗ್ಗಟ್ಟಿನ ಸಂಕಲ್ಪದೊಂದಿಗೆ ಹೆಗಲಿಗೆ ಹೆಗಲುಕೊಟ್ಟು ನಡೆದರೆ ಸಮೃದ್ಧ ಮತ್ತು ಅಭಿವೃದ್ಧಿ ಹೊಂದಿದ ದೇಶದ ಗುರಿಯನ್ನು ಸಾಧಿಸಬಹುದು ಎಂದು ಮೋದಿ ಪ್ರತಿಪಾದಿಸಿದರು.

ಕೆಂಪುಕೋಟೆ ಮೇಲೆ ಸತತ 11ನೇ ಬಾರಿ ಧ್ವಜಾರೋಹಣ ನೆರವೇರಿಸಿದ ಬಳಿಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಭಿಕರತ್ತ ಕೈ ಬೀಸಿದರು.

### ಪ್ರಧಾನಮಂತ್ರಿ ಹೇಳಿದ್ದು

- 2047ರ ವಿಕಸಿತ ಭಾರತ 140 ಕೋಟಿ ಜನರ ಸಂಕಲ್ಪ
- ಹೊಸ ಕ್ರಿಮಿನಲ್ ಕಾನೂನುಗಳಲ್ಲಿ ಶಿಕ್ಷೆಗಿಂತ ನ್ಯಾಯಕ್ಕೆ ಆದ್ಯತೆ
- 2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತ ಸಿದ್ಧ
- ಮುಂದಿನ 5 ವರ್ಷಗಳಲ್ಲಿ 75,000 ವೈದ್ಯಕೀಯ ಸೀಟು ಸೃಷ್ಟಿ
- ಭಾರತವನ್ನು ಬಲಪಡಿಸಲು ದೊಡ್ಡ ಸುಧಾರಣೆಗಳಿಗೆ ಬದ್ಧ
- ವಿಶ್ವದಲ್ಲಿ ಭಾರತಕ್ಕೆ ಈಗ ಸುವರ್ಣ ಸಮಯಾವಕಾಶ ಇದೆ
- ಮೆಡಿಕಲ್ ಕಾಲೇಜು ವಿದ್ಯಾರ್ಥಿನಿ ಹತ್ಯೆ ಖಂಡನೀಯ
- ಬಾಂಗ್ಲಾ ಹಿಂಸಾಚಾರ; ಹಿಂದೂಗಳ ಸುರಕ್ಷತೆಗೆ ಕ್ರಮ
- ಒಲಿಂಪಿಕ್ಸ್ ಪದಕ ವಿಜೇತರಿಂದ ಮೋದಿಗೆ ವಿಶೇಷ ಉಡುಗೊರೆ

ನಾವು ಕಳೆದ 75 ವರ್ಷಗಳಿಂದ ಕೋಮು ನಾಗರಿಕ ಸಂಹಿತೆಯಡಿ ಬದುಕಿದ್ದೇವೆ. ಈಗ ದೇಶವು ಜಾತ್ಯತೀತ ನಾಗರಿಕ ಸಂಹಿತೆಯನ್ನು ಹೊಂದುವುದು ಅಗತ್ಯವಾಗಿದೆ. ಆಗ ಮಾತ್ರ ಧರ್ಮ ಆಧಾರಿತ ತಾರತಮ್ಯ ಕೊನೆಗೊಳ್ಳುತ್ತದೆ.

- ನರೇಂದ್ರ ಮೋದಿ
ಪ್ರಧಾನಿ

### ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಸಿಎಂ ಸ್ಪಷ್ಟನೆ

# ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲಲ್ಲ

**ಬೆಂಗಳೂರು:** ರಾಜ್ಯ ಸರಕಾರದ ಮಹತ್ವದ ಯೋಜನೆಗಳಾಗಿರುವ ಪಂಚಗ್ಯಾರಂಟಿಗಳನ್ನು ಮುಂದುವರಿಸುವ ಬಗ್ಗೆ ಸಚಿವ ಸಂಪುಟದಲ್ಲಿ ಪರ-ವಿರೋಧ ಪರಾಮರ್ಶೆಗಳು ಆರಂಭವಾಗಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ನಿಲ್ಲಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಸಂಪುಟದ ಕೆಲ ಸಚಿವರು ಗ್ಯಾರಂಟಿ ಯೋಜನೆಯನ್ನು ಪರಾಮರ್ಶೆಗೊಳಿಸಬೇಕು ಎಂದು ಹೇಳಿದ್ದರು. ಈ ಎಲ್ಲ ಚರ್ಚೆಗಳಿಗೆ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಸ್ಪಷ್ಟನೆ ನೀಡಿರುವ ಸಿದ್ದರಾಮಯ್ಯ ಅವರು, 'ಯಾವುದೇ ಕಾರಣಕ್ಕೂ ಪಂಚಗ್ಯಾರಂಟಿಗಳನ್ನು ಮೊಟಕುಗೊಳಿಸುವುದಿಲ್ಲ' ಎಂದು ಒತ್ತಿ ಹೇಳಿದ್ದಾರೆ. ಈ ಮೂಲಕ ಗ್ಯಾರಂಟಿ ಯೋಜನೆಗಳ ಮುಂದುವರಿಕೆ ಬಗ್ಗೆ ಎದ್ದಿದ್ದ ಗೊಂದಲಗಳಿಗೆ ಭಾಷಣದ ಮೂಲಕವೇ ಉತ್ತರ ನೀಡಿದ್ದಾರೆ. → 4

ದೇಶಕ್ಕೆ ನಮ್ಮ ಸಂವಿಧಾನವೇ ಶ್ರೀರಕ್ಷೆಯಾಗಿದೆ. ಸಾಮಾಜಿಕ ಪ್ರಜಾಪ್ರಭುತ್ವ ಇಲ್ಲದ ರಾಜಕೀಯ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಿಲ್ಲ. ಇಲ್ಲದಿದ್ದರೆ ನೆರೆಹೊರೆಯ ದೇಶಗಳಲ್ಲಿ ತಲೆದೋರಿರುವ ಪ್ರಕ್ಷುಬ್ಧ ಪರಿಸ್ಥಿತಿ ಇಲ್ಲಿಯೂ ಎದುರಾಗಿ ಬಿಡಬಹುದು ಎಂಬ ಎಚ್ಚರಿಕೆ ನಮ್ಮೆಲ್ಲರಲ್ಲಿ ಇರಬೇಕಾಗುತ್ತದೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

### ಸಿಎಂ ಭಾಷಣದ ಮುಖ್ಯಾಂಶಗಳು

- ಖಾಲಿಯಿರುವ 15428 ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲಾಗುವುದು
- 2023-24ನೇ ಸಾಲಿನಲ್ಲಿ ರಾಜ್ಯಕ್ಕೆ 54,427 ಕೋಟಿ ವಿದೇಶಿ ಬಂಡವಾಳ ಹೂಡಿಕೆಯಾಗಿದೆ
- ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ
- ಸಾಮಾಜಿಕ ಭದ್ರತೆ ಯೋಜನೆಯಲ್ಲಿ 13 ಸಾವಿರ ಕೋಟಿ ರು. ಮಾಸಾಶನ ನೀಡಲಾಗುತ್ತಿದೆ
- ಭೂ ಕುಸಿತದ ಅಪಾಯದ ಗ್ರಾಮಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲಾಗುತ್ತಿದೆ

## ಕಾಳಿ ನದಿಗುರುಳಿದ ಲಾರಿ ಮೇಲಕ್ಕೆ

**ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಕೊಡಿಬಾಗ್ ಬ್ರಿಡ್ಜ್ ಬಳಿ ಕಾಳಿ ನದಿಗೆ ಬಿದ್ದಿದ್ದ ಲಾರಿಯನ್ನು ಸತತ ಕಾರ್ಯಾಚರಣೆ ಮೂಲಕ ರಕ್ಷಣಾ ಸಿಬ್ಬಂದಿಗಳು ಮೇಲಕ್ಕೆತ್ತಿದ್ದಾರೆ. ಮಳೆ ಪ್ರಮಾಣ ತಗ್ಗಿದ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ 9 ಗಂಟೆಯಿಂದ ಐಆರ್‌ಬಿ ಹಾಗೂ ಜಿಲ್ಲಾಡಳಿತದಿಂದ ಜಂಟಿ ಕಾರ್ಯಾಚರಣೆ ನಡೆಸಲಾಯಿತು. ಹೀಗಾಗಿ ಸ್ಥಳದಲ್ಲಿ ಪೊಲೀಸರು, ಅಧಿಕಾರಿಗಳು ಬೀಡು ಬಿಟ್ಟಿದ್ದರು. ಆಗಸ್ಟ್ 7ರಂದು ಸೇತುವೆ ಕುಸಿದಾಗ ಕಾಳಿ ನದಿಗೆ ಲಾರಿ ಉರುಳಿ ಬಿದ್ದಿತ್ತು. ತಮಿಳುನಾಡು ಮೂಲದ ಸೆಂಥಿಲ್ ಒಡೆತನದ ಲಾರಿಯನ್ನು 2 ಕ್ರೇನ್, 3 ಟೋಯಿಂಗ್ ವೆಹಿಕಲ್ ತಂಡದ ಸಹಕಾರದಿಂದ ಈಶ್ವರ ಮಲ್ಪೆ ತಂಡ ಮೇಲಕ್ಕೆತ್ತಿದೆ. ಜಿಲ್ಲಾಡಳಿತದ ಅಧಿಕಾರಿಗಳು ಸೇರಿ 100ಕ್ಕೂ ಜನರ ಪ್ರಯತ್ನ ಸಫಲವಾಗಿದೆ.

## ಬಾಂಗ್ಲಾ ಹಿಂದೂಗಳ ಕಲ್ಯಾಣ ನಮ್ಮ ದೇಶದ ಹೊಣೆ: ಭಾಗವತ್

**ನಾಗ್ಪುರ:** ಬಾಂಗ್ಲಾದಲ್ಲಿ ವಾಸಿಸುವ ಹಿಂದೂಗಳನ್ನು ವಿನಾಕಾರಣ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಷ್ಟ್ರಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಬಾಂಗ್ಲಾದೇಶದಲ್ಲಿ ಹಿಂದೂಗಳು ಯಾವುದೇ ಅನ್ಯಾಯ ಮತ್ತು ದೌರ್ಜನ್ಯಗಳನ್ನು ಎದುರಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಭಾರತದ್ದಾಗಿದೆ. ಅವರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದರು. ಮುಂಬರುವ ಪೀಳಿಗೆಯು 'ಸ್ವತಂತ್ರ'(ಸ್ವಾತಂತ್ರ್ಯ)ದ 'ಸ್ವಾ'ವನ್ನು ರಕ್ಷಿಸುವ ಕರ್ತವ್ಯ ಹೊಂದಿದೆ. ಏಕೆಂದರೆ ಜಗತ್ತಿನಲ್ಲಿ ಯಾವಾಗಲೂ ಇತರ ದೇಶಗಳ ಮೇಲೆ ಪ್ರಾಬಲ್ಯ ಸಾಧಿಸಲು ಬಯಸುವ ಜನ ಇರುತ್ತಾರೆ. ಹೀಗಾಗಿ ನಾವು ಜಾಗರೂಕರಾಗಿರಬೇಕು ಮತ್ತು ಅವರಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು ಎಂದರು.

## ಹಾಸನ: ಸಾಲಬಾಧೆಗೆ ಸಿಲುಕಿ ಕುಟುಂಬದ ಮೂವರ ಆತ್ಮಹತ್ಯೆ

**ಹಾಸನ:** ಸಾಲಬಾಧೆ ತಾಳಲಾರದೆ ಚನ್ನರಾಯಪಟ್ಟಣದ ಕೆರೆಬೀದಿಯ ಒಂದೇ ಕುಟುಂಬದ ಮೂವರು ಹೇಮಾವತಿ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶ್ರೀನಿವಾಸ್ (43) ಶ್ವೇತಾ (36) ಹಾಗೂ ನಾಗಶ್ರೀ (13) ಮೃತ ದುರ್ದೈವಿಗಳು. ಶ್ರೀನಿವಾಸ್ ಕಾರು ಚಾಲಕರಾಗಿದ್ದು, ಪತ್ನಿ ಶ್ವೇತಾ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ವಿವಿಧೆಡೆ ಸಾಲ ಪಡೆದಿದ್ದ ಶ್ರೀನಿವಾಸ್ ಅದನ್ನು ಮರುಪಾವತಿಸಲಾಗದೆ ಪರಿತಪಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

## ಜೆಸಿಬಿಯಿಂದ ಮಣ್ಣು ಸುರಿದ ಚಾಲಕ: ಮಹಿಳೆ ಸಾವು

**ರಾಯಚೂರು:** ನಗರದ ಜನತಾ ಕಾಲೊನಿಯ ಬಡಾವಣೆಯಲ್ಲಿ ಗುರುವಾರ ಮುಂಜಾನೆ ಬಯಲು ಶೌಚಕ್ಕೆ ಹೋಗಿದ್ದ ಮಹಿಳೆಯ ಮೇಲೆ ಜೆಸಿಬಿ ಯಂತ್ರದಿಂದ ಸುರಿದ ಮಣ್ಣುಬಿದ್ದು ಆಕೆ ಮೃತಪಟ್ಟಿದ್ದಾರೆ. ತಾಯಮ್ಮ (32) ಮೃತ ಮಹಿಳೆ. ಖಾಲಿ ನಿವೇಶನದಲ್ಲಿ ಜಾಲಿ ಗಿಡಗಳು ಬೆಳೆದಿದ್ದರಿಂದ ಮನೆಯ ಮಾಲೀಕರ ಸೂಚನೆ ಮೇರೆಗೆ ಜೆಸಿಬಿ ಚಾಲಕ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿ ಮಣ್ಣು ಸುರಿಯತ್ತಿದ್ದಾಗ ಬಹಿರ್ದೆಸೆ ಮಾಡುತ್ತಿದ್ದ ಮಹಿಳೆಯ ಮೇಲೆ ಮಣ್ಣು ಬಿದ್ದಿದ್ದು, ಮಹಿಳೆ ಮೃತಪಟ್ಟಿದ್ದಾರೆ.

## ಸಿಡಿಲಿಗೆ ಮೂವರು ಯುವ ಹಾಕಿ ಆಟಗಾರರು ಬಲಿ

**ರಾಂಚಿ:** ರಾಂಚಿಯಿಂದ ಸುಮಾರು 135 ಕಿ.ಮೀ ದೂರದಲ್ಲಿರುವ ಸಿಮ್ಡೆಗಾದಲ್ಲಿ ಬುಧವಾರ ಸಂಜೆ ಸಿಡಿಲು ಬಡಿದು ಮೂವರು ಉದಯೋನ್ಮುಖ ಹಾಕಿ ಆಟಗಾರರು ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ. ಎನೋಶ್, ಸೆನನ್ ಡ್ಯಾಂಗ್, ನಿರ್ಮಲ್ ಹೋರೋ ಮೃತರು. ಕ್ಲೆಮೆಂಟ್ ಬಾಗೇ, ಜೈಲೇಶ್ ಬಾಗೇ, ಸಲೀಂ ಬಾಗೇ, ಪೀಟರ್ ಬಾಗೇ, ಪತಿರಾಮ್ ಬಾಗೇ ಗಾಯಗೊಂಡಿದ್ದಾರೆ. ತುಟಿಕಲ್ ಪಂಚಾಯತ್‌ನ ಝೂಪ್ವಾದಲ್ಲಿ ಆಟಗಾರರು ಹಾಕಿ ಸ್ಪರ್ಧೆಗೆ ತಯಾರಿ ನಡೆಸುತ್ತಿದ್ದಾಗ ಈ ಘಟನೆ ನಡೆದಿದೆ.

## ಅಸ್ಸಾಂನಲ್ಲಿ ತಪ್ಪಿದ ಅವಘಡ 19 ಕಡೆ ಉಲ್ಫಾ ಬಾಂಬ್

**ಗುವಾಹಟಿ:** ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ನಮ್ಮ ಪ್ರತಿಭಟನೆ ವ್ಯಕ್ತಪಡಿಸಲು ಅಸ್ಸಾಂನ 19 ಕಡೆ ಬಾಂಬ್ ಇಟ್ಟಿದ್ದೆವು. ಆದರೆ, ತಾಂತ್ರಿಕ ದೋಷದಿಂದ ಅವುಗಳು ಸ್ಫೋಟಗೊಂಡಿಲ್ಲ ಎಂದು ಅಸ್ಸಾಂನ ದಂಗೆಕೋರ ಗುಂಪು ಉಲ್ಫಾ ಇಂಡಿಪೆಂಡೆಂಟ್ ತಿಳಿಸಿದೆ. ಗುವಾಹಟಿಯ 8 ಪ್ರದೇಶ ಸೇರಿ 19 ಸ್ಥಳಗಳಲ್ಲಿ ಬಾಂಬ್ ಇಡಲಾಗಿದೆ ಎಂದು ಬೆಳಗ್ಗೆ 11.30ರ ಸುಮಾರಿಗೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದು, ಬಾಂಬ್ ಇರಿಸಲಾಗಿರುವ ಪ್ರದೇಶಗಳ ಚಿತ್ರಗಳನ್ನೂ ನಿಷೇಧಿತ ಸಂಘಟನೆ ಹಂಚಿಕೊಂಡಿದೆ.

### ಪ್ರತಿಭಟನಾಕಾರರ ಸೋಗಿನಲ್ಲಿ ಕಟ್ಟಡಕ್ಕೆ ನುಗ್ಗಿದ ದುಷ್ಕರ್ಮಿಗಳ ಗುಂಪು

## ಆರ್ಜಿಕರ್ ಆಸ್ಪತ್ರೆ ಧ್ವಂಸ; 9 ಜನರ ಸೆರೆ

**ಕೋಲ್ಕತ್ತ:** ಇಲ್ಲಿನ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಆವರಣಕ್ಕೆ ಬುಧವಾರ ಮಧ್ಯರಾತ್ರಿಯ ಬಳಿಕ ನುಗ್ಗಿದ ದುಷ್ಕರ್ಮಿಗಳು, ಆಸ್ಪತ್ರೆಯ ಕಟ್ಟಡ, ವೈದ್ಯಕೀಯ ಯಂತ್ರೋಪಕರಣ, ಪೀಠೋಪಕರಣ, ಔಷಧ ಮತ್ತು ಇತರ ವೈದ್ಯಕೀಯ ಸಲಕರಣೆಗಳನ್ನು ಧ್ವಂಸಗೊಳಿಸಿದ್ದಾರೆ.

ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ಮಹಿಳೆಯರು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಸುಮಾರು 40 ಜನರ ಗುಂಪು ಪ್ರತಿಭಟನಕಾರರ ಸೋಗಿನಲ್ಲಿ ಏಕಾಏಕಿ ಆಸ್ಪತ್ರೆಯ ಆವರಣಕ್ಕೆ ನುಗ್ಗಿದರು. ಅವರು ಆಸ್ಪತ್ರೆಯ ಕೌಂಟರ್‌ಗಳ ಗಾಜುಗಳನ್ನು ಪುಡಿಗಟ್ಟಿದರು. ತುರ್ತು ವಿಭಾಗ ಸೇರಿದಂತೆ ಕೆಲ ವಾರ್ಡ್‌ಗಳಿಗೆ ನುಗ್ಗಿ ಯಂತ್ರೋಪಕರಣಗಳಿಗೆ ಹಾನಿ ಮಾಡಿ, ಹಾಸಿಗೆಗಳನ್ನು ನಾಶಪಡಿಸಿದ್ದಾರೆ.

ವಿವರಪುಟ → 8

- ದುಷ್ಕರ್ಮಿಗಳ ಕೈಯಲ್ಲಿ ಛಿದ್ರವಾದ ಆಸ್ಪತ್ರೆಯ ಐಸಿಯು
- ಪೊಲೀಸರಿಗೆ ಕಲ್ಲೇಟು, ಅಶ್ರುವಾಯು ಪ್ರಯೋಗ
- ಪೊಲೀಸರ ಒಂದು ವಾಹನ, 2 ದ್ವಿಚಕ್ರ ವಾಹನಕ್ಕೆ ಹಾನಿ
- ಮಮತಾ ಬ್ಯಾನರ್ಜಿ ರಾಜೀನಾಮೆಗೆ ಆಗ್ರಹಿಸಿ ಇಂದು ರ್‍ಯಾಲಿ

ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮೇಲೆ ಬುಧವಾರ ಮಧ್ಯರಾತ್ರಿಯ ಬಳಿಕ ದಾಳಿ ನಡೆಸಿದ ದುಷ್ಕರ್ಮಿಗಳು ವಿವಿಧ ವಾರ್ಡ್‌ಗಳನ್ನು ಧ್ವಂಸಗೊಳಿಸಿರುವುದು.

## ರಾಜ್ಯದಲ್ಲಿ ಎರಡು ದಿನ ಭಾರಿ ಮಳೆ

**ಬೆಂಗಳೂರು:** ರಾಜ್ಯದ ಮಲೆನಾಡು, ಕರಾವಳಿ ಹಾಗೂ ಉತ್ತರ ಒಳನಾಡು ಭಾಗದ ಹಲವು ಜಿಲ್ಲೆಗಳಲ್ಲಿ ಶುಕ್ರವಾರ ಮತ್ತು ಶನಿವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಶುಕ್ರವಾರ ನಾಲ್ಕು ಜಿಲ್ಲೆಗಳಿಗೆ ಆರೆಂಜ್ ಹಾಗೂ 12 ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

- 4 ಜಿಲ್ಲೆಗಳಿಗೆ ಆರೆಂಜ್, 12 ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಣೆ

ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಇದೆ. ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಬಳ್ಳಾರಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಹಾಸನ, ತುಮಕೂರು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಸೂಚನೆ ಕೊಡಲಾಗಿದೆ. ಹಾಸನ, ಕೊಡಗು, ಮೈಸೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಶನಿವಾರ ಯೆಲ್ಲೊ ಅಲರ್ಟ್ ಸೂಚನೆ ನೀಡಲಾಗಿದೆ. ಬೆಂಗಳೂರಿನಲ್ಲಿ 2 ದಿನವೂ ಹಗಲು ವೇಳೆ ಮೋಡಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಧಾರಾಕಾರ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

## ಡಿಕೆ ಜತೆ ವೇದಿಕೆ ಹಂಚಿಕೊಂಡ ಸಿಪಿವೈ

### ಟಿಕೆಟ್ ನೀಡದಿದ್ದರೆ ಬಿಜೆಪಿಗೆ ಗುಡ್‌ಬೈ ಹೇಳುವ ಮುನ್ಸೂಚನೆ

**ಚನ್ನಪಟ್ಟಣ:** ಮುಂಬರುವ ಚನ್ನಪಟ್ಟಣ ವಿಧಾನಸಭೆ ಉಪಚುನಾವಣೆಯಲ್ಲಿ ಎನ್‌ಡಿಎ ಟಿಕೆಟ್‌ಗೆ ಪಟ್ಟು ಹಿಡಿದಿರುವ ಸಿ.ಪಿ. ಯೋಗೇಶ್ವರ್ ಇಲ್ಲಿನ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಜತೆ ವೇದಿಕೆ ಹಂಚಿಕೊಳ್ಳುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

ಎನ್‌ಡಿಎ ಟಿಕೆಟ್ ಸಿಗದೇ ಹೋದರೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವೆ ಎಂದು ಪರೋಕ್ಷವಾಗಿ ಪಕ್ಷಕ್ಕೆ ಎಚ್ಚರಿಕೆ ನೀಡಿದ್ದ ಸಿಪಿವೈ ಇದೀಗ ಕಾಂಗ್ರೆಸ್ ಸೇರುವ ಸಾಧ್ಯತೆಗಳ ಬಗ್ಗೆ ಸುಳಿವು ನೀಡಿದ್ದಾರೆ.

ಬಿಜೆಪಿ ಟಿಕೆಟ್ ನಿರಾಕರಿಸಿದರೆ ಕಾಂಗ್ರೆಸ್ ಸೇರ್ಪಡೆಯಾಗಿ ಚುನಾವಣೆಯಲ್ಲಿ ಅಭ್ಯರ್ಥಿಯಾಗಲಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಚನ್ನಪಟ್ಟಣಕ್ಕೆ ನಾನೇ ಅಭ್ಯರ್ಥಿ ಎಂದು ಹೇಳುವ ಮೂಲಕ ಡಿಸಿಎಂ ಡಿಕೆಶಿ ಕಾಂಗ್ರೆಸ್ ಅಭ್ಯರ್ಥಿಯ ಬಗ್ಗೆ ಸುಳಿವು ಬಿಟ್ಟುಕೊಡಲಿಲ್ಲ. ಎಚ್.ಡಿ.ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಡಿಕೆಶಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು.

''ಜಿಲ್ಲೆಯ ಪ್ರತಿನಿಧಿಯಾಗಿ ಚನ್ನಪಟ್ಟಣದ ಮನೆಮಗನಾಗಿ ಇಲ್ಲಿಗೆ ಬಂದು ಧ್ವಜಾರೋಹಣ ಮಾಡಿದ್ದೇನೆ. ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಿಸುವುದು ನನ್ನ ಆದ್ಯತೆ. ಸ್ವಾತಂತ್ರ್ಯ ದಿನಾಚರಣೆಯಂದು ಬಂದು ಬಾವುಟ ಹಾರಿಸಿ ಅರ್ಧಕ್ಕೆ ಹೋಗುವುದು ಧ್ವಜಕ್ಕೆ ಮಾಡಿದ ಅಪಮಾನ. ಅದೇ ರೀತಿ ಮತ ಹಾಕಿ ಆಯ್ಕೆ ಮಾಡಿದ ಜನರನ್ನು ಅರ್ಧಕ್ಕೆ ಕೈ ಬಿಟ್ಟು ಹೋಗುವುದೂ ಕೂಡ ಜನರಿಗೆ ಮಾಡುವ ಅಪಮಾನ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರಿಗೆ ಪರೋಕ್ಷವಾಗಿ ಟಾಂಗ್ ನೀಡಿದರು.

### ಭೂಮಿ ವಶಕ್ಕೆ ಪಡೆದ ಬಳಿಕ ಏನೂ ನೆಡದೇ ಖಾಲಿ ಬಿಡುತ್ತಿರುವ ಅಧಿಕಾರಿಗಳು
### ಕೆಲವೆಡೆ ಅಕೇಷಿಯಾ ನೆಟ್ಟು ಭೂಮಿ ಹಾಳು ಮಾಡುತ್ತಿದ್ದಾರೆಂಬ ಆರೋಪ

# ಜಮೀನು ತೆರವು; ಫಲ ಭೂಮಿ ಸವಕಳಿನತ್ತ

ವಿಶ್ವವಾಣಿ ವಿಶೇಷ

**ಬೆಂಗಳೂರು:** ಅರಣ್ಯ ಇಲಾಖೆಯ ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ರೈತರನ್ನು ಒಕ್ಕಲೆಬ್ಬಿಸುವ 'ಸಾಹಸ' ತೋರುತ್ತಿರುವ ಅಧಿಕಾರಿಗಳು, ದರ್ಪ ತೋರಿ ರೈತರನ್ನು ಒಕ್ಕಲೆಬ್ಬಿಸಿದ ಬಳಿಕ ತೆರವುಗೊಳಿಸಿದ ಜಮೀನನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡದೇ, ಫಲವತ್ತಾದ ಭೂಮಿಯನ್ನು ಸವಕಳಿನತ್ತ ತಳ್ಳುತ್ತಿದ್ದಾರೆ ಎನ್ನುವ ಗಂಭೀರ ಆರೋಪಗಳು ಕೇಳಿಬರುತ್ತಿದೆ.

ಹೌದು, ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಸೂಚನೆ ಮೇರೆಗೆ ಸಣ್ಣಸಣ್ಣ ಹಿಡುವಳಿದಾರರನ್ನು ಟಾರ್ಗೆಟ್ ಮಾಡಿ ಅರಣ್ಯ ಇಲಾಖೆ ಅಧಿಕಾರಿಗಳು ಒಕ್ಕಲೆಬ್ಬಿಸುತ್ತಿದ್ದಾರೆ. ಈ ರೀತಿ ಒಕ್ಕಲೆಬ್ಬಿಸಿದ ಬಳಿಕ, ಆ ಜಮೀನಿನಲ್ಲಿ ಬೆಳೆದಿರುವ ಕಾಫಿ, ಅಡಕೆ, ತೆಂಗು ಸೇರಿದಂತೆ ಹಲವು ಸಸಿ, ಮರಗಳನ್ನು ಬುಡ ಸಮೇತ ಕಿತ್ತು ಹಾಕುತ್ತಿದ್ದಾರೆ. ಈ ರೀತಿ ಕಿತ್ತು ಹಾಕಿದ ಬಳಿಕ, ಆ ಭೂಮಿಯನ್ನು ಹಾಗೆಯೇ ಬಿಟ್ಟು ಅಧಿಕಾರಿಗಳು ತೆರಳುತ್ತಾರೆ. ಇದರಿಂದ ಬೆಳೆ ನಾಶದೊಂದಿಗೆ ಭೂಮಿಯ ಸವಕಳಿಯೂ ಶುರುವಾಗುತ್ತದೆ ಎನ್ನುವ ಆತಂಕವನ್ನು ಅನೇಕರು ವ್ಯಕ್ತಪಡಿಸುತ್ತಿದ್ದಾರೆ.

ಜಮೀನು ತೆರವಿಗೆ ಬರುವ ಅರಣ್ಯಾಧಿಕಾರಿಗಳು, ಕೇವಲ ಬೇಲಿಯನ್ನು ಹಾಕುವುದು ಸೂಕ್ತ. ಏಕೆಂದರೆ, ತೆರವುಗೊಳಿಸಿರುವ ಕ್ರಮವನ್ನು ಪ್ರಶ್ನಿಸಿ ಬಹುತೇಕ ರೈತರು ಕೋರ್ಟ್ ಮೆಟ್ಟಿಲೇರುತ್ತಾರೆ. ಒಂದು ವೇಳೆ ನ್ಯಾಯಾಲಯದಲ್ಲಿ, ರೈತರ ಪರ ತೀರ್ಪು ಬಂದು ಭೂಮಿಯನ್ನು ನೀಡಬೇಕಾದರೆ, ಖಾಲಿ ಭೂಮಿ ಮಾತ್ರ ಸಿಗುತ್ತದೆ. ಆ ಸಮಯದಲ್ಲಿ ದಶಕಗಳ ಕಾಲ ಹದಗೊಳಿಸಿ, ಬೆಳೆ ಬೆಳೆದ ರೈತರು ಮತ್ತೊಮ್ಮೆ ಹೊಸದಾಗಿ ಕೃಷಿ ಆರಂಭಿಸಬೇಕಾಗುತ್ತದೆ. → 4

### ಹೆಚ್ಚಿದ ಅಕೇಷಿಯಾ ಹಾವಳಿ

ಅರಣ್ಯ ಇಲಾಖೆಯ ಅರಣ್ಯ ಹೆಚ್ಚಿಸುವ ನಿಟ್ಟಿನಲ್ಲಿ ಸಸಿಗಳನ್ನು ನೆಡಲು ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತದೆ. ಒತ್ತುವರಿ ತೆರವುಗೊಂಡ ಭೂಮಿಯಲ್ಲಿಯೂ, ಕೆಲವೊಂದಷ್ಟು ಕಡೆ ಅಕೇಷಿಯಾ ಸಸಿಗಳನ್ನು ಹಾಕಲಾಗುತ್ತಿದೆ. ಅಕೇಷಿಯಾ ಮರಗಳಿಂದ ಭೂಮಿ ಫಲವತ್ತತೆ ಹೆಚ್ಚುವ ಬದಲು, ಬಂಜರು ಭೂಮಿಯಾಗುತ್ತದೆ ಎನ್ನುವ ಹಲವು ಸಂಶೋಧನೆಗಳು ಸಾಬೀತುಪಡಿಸಿವೆ. ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ಸುಲಭಕ್ಕೆ ಸಿಗುವ ಅಕೇಷಿಯಾ ಬೆನ್ನಿ ಬಿದ್ದಿರುವುದು ಏಕೆ? ಭೂಮಿಯನ್ನು ಫಲವತ್ತತೆ ಮಾಡಬೇಕು ಅಥವಾ ಅರಣ್ಯ ಬೆಳೆಸಬೇಕು ಎನ್ನುವ ಧ್ಯೇಯವಿದ್ದರೆ ಅಕೇಷಿಯಾಕ್ಕೆ ಏಕೆ ಪ್ರೋತ್ಸಾಹಿಸಬೇಕು? ಈ ಮರಗಳನ್ನು ನೆಡುವ ಬದಲು ರೈತರಿಗೆ ಜಮೀನು ಮಾಡಿಕೊಂಡಿರಲು ಅವಕಾಶ ನೀಡಿದರೆ, ಭೂಮಿಯ ಫಲವತ್ತತೆಯಾದರೂ ಉಳಿಯುತ್ತದೆ ಎನ್ನುವುದು ರೈತರ ಅಭಿಪ್ರಾಯವಾಗಿದೆ.



### ದೊಡ್ಡದಾಗಿರುವ ಸ್ಟಾಪ್ ಲಾಗ್ ಗೇಟ್‌ನ ಅಳತೆ

# ಕ್ರಸ್ಟ್‌ಗೇಟ್ ಅಳವಡಿಕೆಗೆ ತೊಡಕು ದಿನದ ಮಟ್ಟಿಗೆ ತಾತ್ಕಾಲಿಕ ಸ್ಥಗಿತ

**ಕೊಪ್ಪಳ:** ತುಂಗಭದ್ರಾ ಜಲಾಶಯದ 19ನೇ ಗೇಟ್ ಕೊಚ್ಚಿ ಹೋಗಿ ಐದು ದಿನಗಳಾಗಿದ್ದು, ಗುರುವಾರ ಆರಂಭಗೊಂಡಿದ್ದ ಜಲಾಶಯಕ್ಕೆ ತಾತ್ಕಾಲಿಕ ಗೇಟ್ ಅಳವಡಿಸುವ ಕಾರ್ಯ ಸ್ಥಗಿತಗೊಂಡಿದೆ. ಗೇಟ್‌ನ ಅಳತೆಯಲ್ಲಿ ವ್ಯತ್ಯಾಸ ಕಂಡು ಬಂದ ಹಿನ್ನೆಲೆ, ಎರಡು ಮೂರು ಬಾರಿ ಪ್ರಯತ್ನಿಸಿ ತಜ್ಞರು ವಿಫಲರಾಗಿದ್ದಾರೆ.

ಸ್ಟಾಪ್ ಲಾಗ್ ಗೇಟ್ ಕೂರಿಸುವಾಗ ಸಣ್ಣ ಮಟ್ಟದ ತಾಂತ್ರಿಕ ಸಮಸ್ಯೆ ಎದುರಾಗಿತ್ತು. ಈ ವೇಳೆ ನೀರಿಗಿಳಿದು ತಾಂತ್ರಿಕ ಸಿಬ್ಬಂದಿ ಸಮಸ್ಯೆ ಸರಿಪಡಿಸಿ ಕೆಲಸ ಆರಂಭಿಸಿದ್ದರು. ಅಲ್ಲದೇ ಎರಡು ಬೃಹತ್ ಕ್ರೇನ್‌ಗಳ ಮೂಲಕ ಸ್ಟಾಪ್ ಲಾಗ್ ಗೇಟ್ ಇಳಿಸಿ, ಇದೇ ಮಾದರಿಯಲ್ಲಿ 5 ಎಲಿಮೆಂಟ್‌ಗಳನ್ನು ಇಳಿಸಿ ಕೂರಿಸುವ ಯೋಜನೆ ಹಾಕಿಕೊಂಡಿದ್ದರು. 'ಇದೊಂದು ದೊಡ್ಡ ಚಾಲೆಂಜ್ ಆಗಿದ್ದು, ಇದೇ ಮೊದಲ ಬಾರಿಗೆ ಈ ರೀತಿ ಪ್ರಯತ್ನ ಮಾಡುತ್ತಿದ್ದೇವೆ. ಮೊದಲ ಎಲಿಮೆಂಟ್ ಅಳವಡಿಕೆ ಯಶಸ್ವಿಯಾದಲ್ಲಿ 25 ಟಿಎಂಸಿ ನೀರು ಜಲಾಶಯದಿಂದ ಹೊರಹೋಗುವುದನ್ನು ತಪ್ಪಿಸಿದಂತಾಗುತ್ತದೆ. ಈ ಮಧ್ಯೆ ನಾಳೆ (ಗುರುವಾರ) ಹೊತ್ತಿಗೆಲ್ಲಾ ಶುಭ ಸುದ್ದಿ ಕೊಡುತ್ತೇನೆ' ಎಂದು ಡ್ಯಾಂ ಗೇಟ್ ನಿಪುಣ ಕನ್ನಯ್ಯ ನಾಯ್ಡು ಭರವಸೆ ನೀಡಿದ್ದರು. ಆದರೆ ಇದೀಗ ಯೋಜನೆ ತಾತ್ಕಾಲಿಕವಾಗಿ ಸ್ಥಗಿತವಾಗಿದೆ.

ಕಾರ್ಯಾಚರಣೆಯಲ್ಲಿ 80ಕ್ಕೂ ಹೆಚ್ಚು ಸಿಬ್ಬಂದಿ ಪಾಲ್ಗೊಂಡಿದ್ದರು. ಸ್ಥಳದಲ್ಲೇ ಬೀಡು ಬಿಟ್ಟಿರುವ ತಜ್ಞ ಕನ್ನಯ್ಯ ನಾಯ್ಡು ನೇತೃತ್ವದ ತಂಡ ಈ ಕಾರ್ಯವನ್ನು ಶುಕ್ರವಾರ ಮುಂದುವರಿಸಲಿದೆ.

ಕಿತ್ತು ಹೋಗಿರುವ ಕ್ರಸ್ಟ್ ಗೇಟ್‌ನ ಜಾಗದಲ್ಲಿ ತುಂಡಾಗಿ ಉಳಿದಿದ್ದ ಚೈನ್‌ನಿಂದ ಕಾರ್ಯಾಚರಣೆಗೆ ಸ್ವಲ್ಪ ಹಿನ್ನಡೆ ಆಗಿದೆ. ಈಗ ಚೈನ್ ಹೊರಗೆ ತೆಗೆಯಲಾಗಿದೆ. ಗೇಟ್‌ನ ಪ್ಲೇಟ್‌ಗಳನ್ನು 2 ಭಾಗವಾಗಿಸಿ, ಆ.15 ರಂದು ಕ್ರೇನ್ ಮೂಲಕ ಅಳವಡಿಕೆ ಕಾರ್ಯ ನಡೆಯಲಿದೆ.

- ಶಿವರಾಜ ತಂಗಡಗಿ ಸಚಿವ

## ಫನ್‌ತರಂಗ

- ರಘುಪತಿ ಶೃಂಗೇರಿ -

5 ಕೆಜಿ ಆಲೂಗೆಡ್ಡೆ ಲಂಚ ಕೇಳಿದ ಪೊಲೀಸ್ ಅಮಾನತು



## ಸಮಾಚಾರ ಸಣ್ಣದಲ್ಲ

### 78ನೇ ಸ್ವಾತಂತ್ರ್ಯೋತ್ಸವ

**ಚಿತ್ರದುರ್ಗ:** 78ನೇ ಭಾರತ ಸ್ವಾತಂತ್ರ್ಯೋತ್ಸವ ದಿನಾಚರಣೆ ಪ್ರಯುಕ್ತ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಭವನದಲ್ಲಿ ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ರಾಷ್ಟ್ರ ಧ್ವಜರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿಬ್ಬಂದಿಗಳಾದ ಪಿ.ಎಂ.ವೇಣುಗೋಪಾಲ, ಜಿ. ವೆಂಕಟೇಶ್, ಎಸ್.ಚಂದ್ರಶೇಖರ್, ಎಂ. ಜೆ.ಬೋರೇಶ, ಆರ್.ತಿಮ್ಮಶೆಟ್ಟಿ, ಅಂಜಿನ ಮೂರ್ತಿ, ಅಪ್ರೆಂಟಿಸ್ ತರಬೇತಾರ್ಥಿ ಸಿ.ಕಾಟೇಶ್ ಇದ್ದರು.

### ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ಚಿಕ್ಕಮಗಳೂರು:** 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಜಿಲ್ಲಾ ಗುತ್ತಿಗೆದಾರರ ಸಂಘದ ಸದಸ್ಯರುಗಳ ಮಕ್ಕಳಿಗೆ ಶೈಕ್ಷಣಿಕ ಸಾಲಿನ ಎಸ್.ಎಸ್. ಎಲ್.ಸಿ. ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದವರಿಗೆ ಸಂಘದಿಂದ ಗುರುವಾರ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಘದ ಕಚೇರಿಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕೆ.ಎಸ್. ಶಾಂತೇಗೌಡ ಪ್ರತಿವರ್ಷವು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದ್ದು ಈ ಬಾರಿ ವಿದ್ಯಾ ರ್ಥಿಗಳಾದ ಸಮರ್ಥ್ ಕೃಷ್ಣ, ಎಂ.ಚೇತನ್, ಅಲೈನ್ ಜೋಹರ, ಅಮ್ರೀನ್ ಫಾತಿಮ, ಸಾಗರ್ ಇವರಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಸಂಘದ ಕಾರ್ಯ ದರ್ಶಿ ಬಿ.ಎಂ.ಪುಟ್ಟಸ್ವಾಮಿ ಸಹ ಕಾರ್ಯದರ್ಶಿ ಕೆ.ವಿ. ಮಂಜುನಾಥ್, ಖಜಾಂಚ ಸಿ.ಎಸ್.ಖಲಂ ಧರ್, ನಿರ್ದೇಶಕರುಗಳಾದ ಎಸ್.ಎಂ. ಮಂಜೇಗೌಡ, ವೆಪ್ಲಿಪಿಂ ಟೋ, ಟಿ.ಎಂ.ನಾಸೀರ್, ಬಿ.ಎನ್.ಮಂಜು ನಾಥ್, ಎಂ.ಎ.ರವಿಕುಮಾರ್, ಕೆ.ಎನ್. ದೊಡ್ಡೇಗೌಡ, ಸಿವಿಲ್ ಇಂಜಿನಿಯರ್ ಅಸೋಸಿಯೇಷನ್ ಸಂಘದ ಜಿ.ರಮೇಶ್, ಬಿ.ಸಿ.ಗಂಗಾಧರ್ ಇ ದ್ದರು.

### ಒಳಗುತ್ತಿಗೆ ಆಧಾರದ ಮೇಲೆ ನೇಮಕಕ್ಕೆ ಒತ್ತಾಯ

**ಚಿಕ್ಕಮಗಳೂರು:** ಹೊರಗುತ್ತಿಗೆ ನೌಕರರುಗಳನ್ನು ಒಳಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ಅವರಿಗೆ ಗುರುವಾರ ಕಾಂಗ್ರೆಸ್ ಮು ಖಂಡ ಕೆ.ಭರತ್ ಮನವಿ ಸಲ್ಲಿಸಿ ಒತ್ತಾಯಿಸಿದರು.

ಬಳಿಕ ಮಾತನಾಡಿದ ಕೆ.ಭರತ್ ಕಳೆದ ಎರಡು ದಶಕಗಳಿಂದ ಮೆಸ್ಕಾಂ, ಚೆಸ್ಕಾಂ ಹಾಗೂ ಎಸ್ಕಾಂ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರುಗಳಿಗೆ ವಿದ್ಯುತ್ ಇಲಾ ಖೆಗಳಲ್ಲಿ ನಾನಾ ರೀತಿಯಾದ ಗುತ್ತಿಗೆ ಪಡೆದಂತಹ ಗುತ್ತಿಗೆದಾರರು, ಕಂಪನಿಗಳು ಹೊರಗುತ್ತಿಗೆ ನೌಕರರು ಗಳಿಗೆ ಯಾವುದೇ ಮುನ್ಸೂಚನೆ ನೀಡದೇ, ಅನುಭವ ಪರಿಗಣಿಸದೇ ಏಕಾಏಕಿ ಕೆಲಸದಿಂದ ಕೈಬಿಡಲಾಗಿದೆ ಎಂದರು.

ಅನೇಕ ವರ್ಷಗಳಿಂದ ಕಾಲ ಗುತ್ತಿಗೆ ಕಂಪನಿಗಳು ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಂತೆ ಈ ಗುತ್ತಿಗೆ ನೌಕರರಿಗೆ ಸರಿಯಾದ ವೇತನ ನೀಡಿಲ್ಲ. ಕೆಲಸದ ಸಮಯದಲ್ಲಿ ಅನಾಹುತಗಳು ಸಂಭವಿಸಿದರೆ ನೌಕರರಿಗೆ ಯಾವುದೇ ಪರಿಹಾರಗಳನ್ನು ನೀಡಿರುವುದಿಲ್ಲ ಎಂದು ಹೇಳಿದರು.

ವಿ+
ಸೋಮವಾರ

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ.
ಸಿ. ಆರ್.ಮಿಸ್.ನಂ: 502/2024

ಅರ್ಜಿದಾರರು : ವಿಶ್ವ @ ವಿಶ್ವನಾಥ ತಂದೆ ಬಸವರಾಜಪ್ಪ ವಯಸ್ಸು ಸುಮಾರು 23 ವರ್ಷ, ವಾಸ : ಜನತಾ ಕಾಲೋನಿ ಭಾನುವಳ್ಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

–ವಿರುದ್ಧ: –

ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ಅಜ್ಜಿಯಾದ ಹೂವಕ್ಕ ಕೋಂ ಹನುಮಂತಪ್ಪ " ಇವರು ದಿನಾಂಕ ; 13–10–2021 ರಂದು ಹರಿಹರ ತಾಲ್ಲೂಕು, ಭಾನುವಳ್ಳಿ ಗ್ರಾಮದ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಅದೇಶಿಸಲು ಕೋರಿ ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರು ಇದ್ದಲ್ಲಿ ದಿನಾಂಕ; 20–09–2024 ರಂದು ಬೆಳಿಗ್ಗೆ 11–00 ಗಂಟೆಗೆ ತಾವಾಗಲಿ, ವಕೀಲರ ಮುಖಾಂತರವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:–13–08–2024 ರಂದು ನೀಡಲಾಗಿದೆ.

ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಸಿವಿಲ್ & ಪ್ರದ,ನ್ಯಾ,ದಂ, ನ್ಯಾಯಾಲಯ, ಹರಿಹರ.

ಅರ್ಜಿದರಾರ ಪರ ವಕೀಲರು
**ನಾಗರಾಜ ಎಂ.**
ಸ್ಥಳ : ಹರಿಹರ ದಿನಾಂಕ: 13–08–2024

# ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿಗಳ ಅನುಷ್ಠಾನ

## ದಾವಣಗೆರೆ ಜಿಲ್ಲೆಯ ಕೆರೆಗಳ ಭರ್ತಿಗೆ ಮಾಸ್ಟರ್ ಪ್ಲಾನ್ | ಸಚಿವ ಎಸ್.ಎಸ್.ಮಲ್ಲಿಕಾರ್ಜುನ್

**ದಾವಣಗೆರೆ:** ಸರಕಾರ ರಾಜ್ಯದ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ಯಶಸ್ವಿಯಾಗಿದ್ದು, ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳೊಂದಿಗೆ ಜನಸಾಮಾನ್ಯರಿಗಾಗಿ ಅನೇಕ ಯೋಜನೆ, ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡಿದೆ ಎಂದು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ 78 ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳನ್ನು ಜನತೆಗೆ ತಲುಪಿಸುವಲ್ಲಿ ರಾಜ್ಯ ಸರಕಾರ ಯಶಸ್ವಿಯಾಗಿದ್ದು ಇದಕ್ಕಾಗಿ ಸಾವಿರಾರು ಕೋಟಿ ವೆಚ್ಚ ಮಾಡಿದೆ.

ದಾವಣಗೆರೆ ಜಿಲ್ಲೆಗೆ ಶಕ್ತಿ ಯೋಜನೆಗಾಗಿ ಇಲ್ಲಿಯವರೆಗೆ 662 ಕೋಟಿ, ಅನ್ನಭಾಗ್ಯದಡಿ 10 ಕೆಜಿ ಅಕ್ಕಿಯಲ್ಲಿ 5 ಕೆಜಿ ನಗದು ಪಾವತಿಸುತ್ತಿದ್ದು ಇದಕ್ಕಾಗಿ ಪ್ರತಿ ತಿಂಗಳು 3.41 ಲಕ್ಷ ಜಿಲ್ಲೆಯ ಕಾರ್ಡ್‌ದಾರರಿಗೆ ಪ್ರತಿ ತಿಂಗಳು 19.66 ಕೋಟಿ ಪಾವತಿಸುತ್ತಿದ್ದು ಇಲ್ಲಿವರೆಗೆ 228 ಕೋಟಿ ಪಾವತಿಸಿದೆ. ಗೃಹ ಜ್ಯೋತಿಯಡಿ 4.27 ಲಕ್ಷ

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ 78 ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಾತನಾಡಿದರು.

ಗ್ರಾಹಕರ ವಿದ್ಯುತ್ ಬಿಲ್ ಪಾವತಿಗಾಗಿ 282 ಕೋಟಿ ನೀಡಲಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 3.55 ಲಕ್ಷ ಯಜಮಾನಿಯರಿಗೆ ಜೂನ್‌ವರೆಗೆ 662 ಕೋಟಿ ಪಾವತಿಸಲಾಗಿದೆ. ಯುವನಿಧಿಯಡಿ 9035 ಪದವಿ ಹಾಗೂ ಡಿಪ್ಲೊಮಾದಾರರಿಗೆ ನಿರುದ್ಯೋಗ ಭತ್ಯೆಯಾಗಿ 2.70 ಕೋಟಿ ನೀಡಲಾಗಿದ್ದು ಇದು ದಾವಣಗೆರೆ ಜಿಲ್ಲೆಯ ಪ್ರಗತಿಯಾಗಿದೆ. ಆದರೆ ಈ ಯೋಜನೆಗಳನ್ನು ಪರಿಷ್ಕರಿಸಲಾಗುತ್ತಿದೆ ಎಂಬ ಗುಮಾನಿಗಳಿದ್ದು ಯಾವುದೇ ಪರಿಷ್ಕರಣೆ ಸರ್ಕಾರದ ಮುಂದಿಲ್ಲ, ಯೋಜನೆಗಳು ಸಫಲವಾಗಿ ಅನುಷ್ಠಾನವಾಗುತ್ತಿವೆ ಎಂದರು.

ಹೊನ್ನಾಳಿ ತಾಲೂಕಿನ 23 ಹಾಗೂ ಹರಿಹರ ತಾಲೂಕಿನ ಒಂದು ಕೆರೆಗೆ ನೀರು ತುಂಬಿಸಲು ರೂ. 52 ಕೋಟಿ ವೆಚ್ಚದ ಯೋಜನೆ , ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕಿನ 26 ಕೆರೆಗಳಿಗೆ ನೀರು ತುಂಬಿಸಲು ರೂ. 100 ಕೋಟಿ ವೆಚ್ಚದ ಯೋಜನೆ,

### 31 ಕೆರೆಗಳಿಗೆ ನೀರು ಬಿಡುಗಡೆ

**ತುಂಗಾಭದ್ರಾ ನದಿ ಮೂಲದಿಂದ ಹರಿಹರ ತಾಲೂಕು ದೀಟೂರು ಬಳಿಯಿಂದ ಏತ ನೀರಾವರಿ ಮೂಲಕ ಜಗಳೂರು ತಾಲೂಕಿನ 51 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಲ್ಲಿ 31 ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಬಾಕಿ ಉಳಿದ ಕೆರೆಗಳಿಗೂ ನೀರು ಹರಿಸಲು ಕಾಮಗಾರಿ ಮುಂದುವರೆದಿದೆ ಎಂದು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.**

ಸಾಸ್ವೆಹಳ್ಳಿ ಏತನೀರಾವರಿ ಯೋಜನೆ ಮೂಲಕ ಚನ್ನಗಿರಿ, ಹೊನ್ನಾಳಿ ಹಾಗೂ ದಾವಣಗೆರೆ ತಾಲ್ಲೂಕುಗಳಲ್ಲಿನ ಒಟ್ಟು 96 ಗ್ರಾಮಗಳ 102 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಈ ಕಾಮಗಾರಿ ಬಹುತೇಕ ಮುಕ್ತಾಯದ ಹಂತಕ್ಕೆ ತಲುಪಿದ್ದು, ಕೆಲವೇ ದಿನಗಳಲ್ಲಿ ಚಾಲನೆಗೊಳ್ಳಲಿದೆ ಎಂದರು.

ಎಲ್ಲಾ ಕೆರೆ ತುಂಬಿಸಲು ಮಾಸ್ಟರ್ ಪ್ಲಾನ್: ಮಳೆಗಾಲದಲ್ಲಿ ಜಿಲ್ಲೆಯಲ್ಲಿನ ಎಲ್ಲಾ ಕೆರೆಗಳನ್ನು ಭರ್ತಿ ಮಾಡುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಳದ ಜೊತೆಗೆ ರೈತರ ಕೃಷಿಚಟುವಟಿಕೆಗಳಿಗೆ ಸಾಕಷ್ಟು ಲಾಭವಾಗಲಿರುವುದರಿಂದ ಮಾದರಿ ಯೋಜನೆಯಾಗಿ ಪರಿಗಣಿಸಲು ಯೋಜನೆ ತಯಾರಿಸಲು ಉದ್ದೇಶಿಸಲಾಗಿದೆ ಎಂದರು.

ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಒತ್ತು ನೀಡಿದ್ದು ಖಾತರಿಯಡಿ 13.32 ಮಾನವ ದಿನ ಸೃಜಿಸಿ 46.220 ಕುಟುಂಬಗಳಿಗೆ ಕೆಲಸ ನೀಡಿ 44.85 ಕೋಟಿ ನೀಡಲಾಗಿದೆ. ಮತ್ತು ಕಾಲುವೆಗಳಲ್ಲಿನ ಹೂಳು ತೆಗೆಯುವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ನಗರ ಮತ್ತು ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ 200 ಕೋಟಿ ಮತ್ತು ನಗರೋತ್ಥಾನ 4 ರಲ್ಲಿ 59.50 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೊಂಡು ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ ಎಂದರು

ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ದೂಡಾ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ, ಮೇಯರ್ ವಿನಾಯಕ್ ಬಿ.ಹೆಚ್, ಪೊಲೀಸ್ ಮಹಾನಿರೀಕ್ಷಕರಾದ ಬಿ.ರಮೇಶ್, ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ರಕ್ಷಣಾಧಿಕಾರಿ ಉಮಾಪ್ರಶಾಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಹಾಗೂ ವಿವಿಧ ಪಾಲಿಕೆ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ಹೊಳಲ್ಕೆರೆ ಉಸ್ಮಾನಿಯಾ ಮೆಕ್ಯಾನಿಕ್ಸ್ ಗ್ರೂಪ್‌ನಿಂದ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ರಷ್ಯಾದ ಉಲ್ಯಾನೋಸ್ಕ್ ಆರೋಗ್ಯ ವಿಶ್ವವಿದ್ಯಾಲಯದಲ್ಲಿ ಎಂಬಿಬಿಎಸ್ ಪೂರೈಸಿರುವ ಪ್ರತಿಭೆ ಮೊಹಮ್ಮದ್ ಜೈದ್ ಸೇರಿದಂತೆ ಹಲವಾರು ಸಾಧಕರನ್ನು ಸನ್ಮಾನಿಸಲಾಯಿತು.

## ಅಯ್ಯನಕೆರೆಗೆ ಬಾಗಿನ ಅರ್ಪಣೆ

**ಚಿಕ್ಕಮಗಳೂರು:** ಇತಿಹಾಸ ಪ್ರಸಿದ್ಧ ಅಯ್ಯನಕೆರೆ ಕೋಡಿಬಿದ್ದ ಹಿನ್ನಲೆಯಲ್ಲಿ ರಾಜ್ಯ ಅನ್ನದಾತ ರೈತ ಸಂಘದ ಮಹಿಳಾ ಘಟಕದಿಂದ ಗುರುವಾರ ಕೆರೆಗೆ ಬಾಗಿನ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸರೋಜ ಬಸವರಾಜ್, ಸದಸ್ಯರುಗಳಾದ ಶ್ರೀದೇವಿ, ಶಶಿಕಲಾ, ವತ್ಸಲಾ, ಪ್ರೇಮ, ಶಶಿಕಲಾ, ಲಕ್ಷ್ಮೀ ಮತ್ತಿತರರು ಹಾಜರಿದ್ದರು.

## ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿ: ಶಾಸಕ

**ಮೊಳಕಾಲ್ಮೂರು:** ತಾಲೂಕಿನ ವಿಧಾನಸಭಾ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಯೇ ನಮ್ಮ ಪ್ರಮುಖ ಗುರಿಯಾಗಿದೆ ಎಂದು ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಎನ್.ವೈ. ಗೋಪಾಲಕೃಷ್ಣರವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ 78ನೇ ಭಾರತ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಆಶಯದಂತೆ ಸಾರ್ವಜನಿಕರ ಉತ್ತಮ ಬದುಕಿಗೆ ಆಸರೆಯಾಗುವ ನಿಟ್ಟಿನಲ್ಲಿ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಯಕ್ರಮಗಳನ್ನು ಕೈಗೊತ್ತಿಕೊಳ್ಳುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನಮ್ಮ ಪ್ರಮುಖ ಗುರಿಯಾಗಿದೆ ಎಂದು ತಿಳಿಸಿದರು

ಮೊಳಕಾಲ್ಮೂರು ಪಟ್ಟಣದ ಸಂತೆ ಮೈದಾನದ ಮೂಲಭೂತ ಸಮಸ್ಯೆಗಳ ಪರಿಹಾರವಾಗಿ ಒಂದು ಕೋಟಿಗೂ ಅಧಿಕ ಅನುದಾನವನ್ನು ಮಂಜೂರು ಮಾಡಿಸಿದ್ದು ಮೊಳಕಾಲ್ಮೂರು ಪಟ್ಟಣದ ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ನಿವೇಶನ ಹಾಗೂ ಅನುದಾನವನ್ನು ಮಂಜೂರಾತಿ ಮಾಡಿಸಲಾಗಿದೆ ಮುಂಬರುವ ದಿನಗಳಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪೂರಕವಾಗುವ ನಿಟ್ಟಿನಲ್ಲಿ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ

ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ 78ನೇ ಭಾರತ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದ ಧ್ವಜಾರೋಹಣ ನೆರವೇರಿಸಿ ಶಾಸಕರಾದ ಎನ್.ವೈ.ಗೋಪಾಲಕೃಷ್ಣರವರು ಮಾತನಾಡಿದರು.

ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸುವುದೇ ನಮ್ಮ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು

78ನೇಯ ಭಾರತ ಸ್ವಾತಂತ್ರೋತ್ಸವ ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳಿಂದ ಅಯೋಗಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಂತ ಮಹತ್ವಪೂರ್ಣವಾದ ಮತ್ತು ಉತ್ತಮ ಸಂದೇಶವನ್ನು ಸಾರುವಂತಹ ಕಾರ್ಯಕ್ರಮ ವಾಗಿದ್ದು ಇಂತಹ ಕಾರ್ಯಕ್ರಮಗಳು ಸ್ವಾತಂತ್ರ ಸಂಗ್ರಾಮದ ಹೋರಾಟದ ಪರಿಯನ್ನು ಸಾರ್ವಜನಿಕರಿಗೆ ಉತ್ತಮ ಸಂದೇಶವನ್ನು ತಿಳಿಸುವಂತಹ ಕಾರ್ಯಕ್ರಮಗಳಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಟಿ ಜಗದೀಶ್, ಅಧಿಕಾರಿಗಳಾದ ವಸಂತ.ವಿ.ಅಸೋದೆ, ಹೆಚ್ ಹನುಮಂತಪ್ಪ, ಪಿ. ಪಾಲಯ್ಯ, ನಿರ್ಮಲಾದೇವಿ, ಪಾಂಡುರಂಗಪ್ಪ, ಕರಾನೌ ಅಧ್ಯಕ್ಷ ಎಸ್ ಈರಣ್ಣ, ಶಿಕ್ಷಕರಾದ ಬಿ ಓಬಣ್ಣ, ಸಿಡಿಪಿಓ ನವೀನ್ ಕುಮಾರ್, ಅರಣ್ಯ ಅಧಿಕಾರಿಗಳಾದ ಶ್ರೀಹರ್ಷ, ಬಾಬು ಬಿ ಆರ್ ಸಿ ತಿಪ್ಪೇಸ್ವಾಮಿ, ಹರೀಶ್, ಎಸ್ ಖಾದರ್, ಅಬ್ದುಲ್ಲಾ, ಜಿ ಪ್ರಕಾಶ್, ಟಿಕೆ ಕಲೀಮುಲ್ಲಾ, ಬಿ ಸತ್ಯನಾರಾಯಣ, ಅಬ್ದುಲ್ ಸುಭಾನ್ ಸಾಬ್, ನಂಜಪ್ಪ ನಾಯಕ, ಬಿಜಿಕೆರೆ ನಾಗಭೂಷಣ, ಕೊಂಡಾಪುರ ಪರಮೇಶಿ ಎರ್ಜೇನಹಳ್ಳಿ ನಾಗರಾಜ ಮುಂತಾದವರು ಉಪಸ್ಥಿತರಿದ್ದರು.

## ಕರ್ತವ್ಯದಲ್ಲಿ ನಿರ್ಲಕ್ಷ್ಯ: ಕ್ರಮದ ಎಚ್ಚರಿಕೆ

ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ '78 ನೇ ಸ್ವಾತಂತ್ರ್ಯ ದಿನಾಚರಣೆ ' ಸಮಾರಂಭದ ಅಧ್ಯಕ್ಷತೆ ವಹಿಸಿ ಶಾಸಕ ಬಿ.ಜಿ.ಗೋವಿಂದಪ್ಪ ಅವರು ಮಾತನಾಡಿದರು.

**ಹೊಸದುರ್ಗ:** ತಾಲೂಕು ಮಟ್ಟದ ಎಲ್ಲಾ ಇಲಾಖೆಯಲ್ಲಿಯೂ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಆದರೂ ಕೆಲವರು ಇನ್ನೂ ಉದಾಸೀನತೆ ತೋರುತ್ತಿದ್ದಾರೆ. ಇದು ಹೀಗೆಯೇ ಮುಂದುವರೆದರೆ ಅಂತಹವರ ವಿರುದ್ಧ ಕ್ರಮಕ್ಕೆಗೊಳ್ಳಲಾಗುವುದು ಎಂದು ಶಾಸಕ ಬಿ.ಜಿ.ಗೋವಿಂದಪ್ಪ ಅವರು ಎಚ್ಚರಿಕೆ ನೀಡಿದರು.

ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ '78 ನೇ ಸ್ವಾತಂತ್ರ್ಯ ದಿನಾಚರಣೆ ' ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, 7ನೇ ವೇತನ ಆಯೋಗ ಜಾರಿ ಮಾಡಿ, ನಮ್ಮ ಸರಕಾರ ನೌಕರರಿಗೆ ಸ್ಪಂದಿಸಿದೆ. ಅದೇ ರೀತಿ ನೌಕರರು ಸ್ವಾರ್ಥದ ಕೆಲಸ ಬಿಟ್ಟು, ಸರಕಾರದ ಪ್ರತಿ ಯೋಜನೆಯೂ ಪ್ರತಿ ಮನೆಯ ಸದಸ್ಯರಿಗೂ ತಲುಪುವಂತೆ ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿ, ಸಾರ್ವಜನಿಕರನ್ನು ಪ್ರೀತಿ, ಗೌರವದಿಂದ ಕಾಣಬೇಕು ಎಂದು ಸೂಚಿಸಿದರು.

ಸ್ವಾತಂತ್ರ್ಯ ದಿನಾಚರಣೆ ಪ್ರತಿಯೊಬ್ಬ ಭಾರತೀಯರಿಗೂ ಸಡಗರ ಸಂಭ್ರಮದ ದಿನ. ಈ ಬಾರಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿದ್ದು, ಹಳ್ಳಕೊಳ್ಳ ನದಿಗಳು ಮೈದುಂಬಿ ಜಲಾಶಯಗಳು ಭರ್ತಿಯಾಗಿ ಹರಿಯುತ್ತಿವೆ. ಇದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಮನುಷ್ಯ ಪ್ರಕೃತಿಯ ವಿರುದ್ಧ ಹೋಗದೆ, ಅದನ್ನು ಉಳಿಸಿ ಬೆಳೆಸುವ ಕಾರ್ಯಮಾಡಬೇಕು. ಶಾಲಾ ಕಾಲೇಜುಗಳಲ್ಲಿ ಬಿಡುವಿನ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಕ್ಕಳಿಗೆ ಪರಿಚಯ ಮಾಡಿಕೊಡಬೇಕು. ನಿತ್ಯವೂ ಹೋರಾಟಗಾರರ ಸ್ಮರಣೆ ಮಾಡಬೇಕು. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿತು, ದೇಶಕ್ಕೆ ಸತ್ಪ್ರಜೆಗಳಾಗಬೇಕು ಎಂದು ಕಿವಿಮಾತು ಹೇಳಿದರು.

ಧ್ವಜಾರೋಹಣ ನೆರವೇರಿಸಿ ತಹಸೀಲ್ದಾರ್ ತಿರುಪತಿ ಪಾಟೀಲ್ ಮಾತನಾಡಿದರು. ವೇದಿಕೆಯಲ್ಲಿ ತಾ.ಪಂ. ಇಒ ಸುನೀಲಕುಮಾರ್, ನೌಕರ ಸಂಘದ ಅಧ್ಯಕ್ಷ ಆರ್.ಗಂಗಾಧರ್, ಕಸಾಪ ಅಧ್ಯಕ್ಷ ಬಿ.ಪಿ.ಓಂಕಾರಪ್ಪ, ಮೈಲಾರಪ್ಪ, ಪುರಸಭೆ ಮುಖ್ಯಾಧಿಕಾರಿ ತಿಮ್ಮರಾಜು, ಸೋಮಶೇಖರಯ್ಯ, ಯುವಉದ್ಯಮಿ ಸದ್ಗುರು ಪ್ರದೀಪ್ ಡಿ.ಎಸ್, ಪುರಸಭೆ ಸದಸ್ಯರು ಹಾಗೂ ಅಧಿಕಾರಿಗಳು ಹಾಜರಿದ್ದರು.

## ಅಭಿವೃದ್ಧಿಯಿಂದ ಮಾದರಿ ಕ್ಷೇತ್ರವಾಗಿಸುವ ಗುರಿ

**ಚನ್ನಗಿರಿ:** ಉತ್ತಮ ಆಡಳಿತ ನಡೆಸಲು ನಮ್ಮನ್ನು ಜನರು ಆರಿಸಿದ್ದಾರೆ. ಎಲ್ಲರ ಅಭಿವೃದ್ಧಿಯನ್ನು ಬಯಸುವ ಕರ್ನಾಟಕದಲ್ಲಿ ಚನ್ನಗಿರಿಯನ್ನು ಮಾದರಿ ತಾಲೂಕಾಗಿ ಇನ್ನಷ್ಟು ಪ್ರಬಲಗೊಳಿಸಲಾಗುವುದು ಎಂದು ಶಾಸಕರಾದ ಬಸವರಾಜು ವಿ.ಶಿವಗಂಗಾ ತಿಳಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ 78 ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ನಮ್ಮ ಮೊದಲ ಆದ್ಯತೆ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿ ಹರಡುವ, ಸಾಮರಸ್ಯ ಕದಡುವ ಯತ್ನ ಮತ್ತು ಮತೀಯ ಗೂಂಡಾಗಿರಿ ಹೆಸರಿನಲ್ಲಿ ನಡೆಯುವ ಅನೈತಿಕ ದಬ್ಬಾಳಿಕೆಯನ್ನು ಖಂಡಿತ ಸಹಿಸುವುದಿಲ್ಲ ಎಂದರು.

ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಕರ್ನಾಟಕ ಎರಡನೆಯ ಸ್ಥಾನದಲ್ಲಿದ್ದು, ಸುಮಾರು 4 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಕೇಂದ್ರಕ್ಕೆ ಪಾವತಿಸುತ್ತಿದೆ. ಆದರೆ, ನಮಗೆ ವಾಪಸ್ ದೊರೆಯುತ್ತಿರುವುದು 50 ಸಾವಿರ ಕೋಟಿ ಮಾತ್ರ. ನ್ಯಾಯಯುತವಾಗಿ ದೊರೆಯುವ ಸಂಪನ್ಮೂಲಗಳು ಕೇಂದ್ರದಿಂದ ಮರಳಿ ಬಂದರೆ ನಮ್ಮದು ಅತ್ಯಂತ

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ 78 ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಶಾಸಕರಾದ ಬಸವರಾಜು ವಿ.ಶಿವಗಂಗಾ ಅವರು ಮಾತನಾಡಿದರು.

ಶ್ರೀಮಂತ ರಾಜ್ಯವಾಗಲಿದೆ ಎಂದರು .

ತಾಲೂಕಿನ 6 ಪ್ರೌಢಶಾಲೆಗಳಲ್ಲಿ ಎಸ್ ಎಸ್ ಎಲ್ ಸಿ ಮಕ್ಕಳಿಗೆ ರಾತ್ರಿಶಾಲೆಯ ವಿಶೇಷ ತರಗತಿಗಳ ಕರ್ಯಕ್ರಮವು ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗೆ ಸಹಕಾರಿಯಾಗಿದ್ದು, ಈ ಶಾಲೆಗಳಲ್ಲಿ ಶೇ.90ರಷ್ಟು ಫಲಿತಾಂಶ ಬಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ.

ಅಮೃತಪುರ ಉಬ್ರಾಣಿ ಏತ ನೀರಾವರಿ ಯೋಜನೆಯ ಪಂಪ್ ಸೆಟ್ ಗಳನ್ನು ದುರಸ್ತಿಗೊಳಿಸಿ ಮರು ಚಾಲನೆ ನೀಡಿ ನನ್ನ ಕನಸಿನ ಕೆರೆ ತುಂಬಿಸುವ ಯೋಜನೆಗೆ ಚಾಲನೆ ನೀಡಲಾಗಿದೆ. ನನೆಗುದಿಗೆ ಬಿದ್ದಿರುವ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿ ಕೆರೆಗಳನ್ನು ತುಂಬಿಸಲು ಶತ ಪ್ರಯತ್ನ ಮಾಡಲಾಗುತ್ತಿದೆ ಎಂದರು. ಕರ್ನಾಟಕದಲ್ಲಿ ಅತಿ ಹೆಚ್ಚು ಅಡಿಕೆ ಬೆಳೆಯುವ ನಾಡು ನನ್ನ ಕ್ಷೇತ್ರ ಚನ್ನಗಿರಿ ಸುಮಾರು 90,000 ಎಕರೆ ಪ್ರದೇಶದಲ್ಲಿ ಇಲ್ಲಿನ ರೈತರು ಅಡಿಕೆ ಬೆಳೆಯುತ್ತಿದ್ದು ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಭವಿಷ್ಯದಲ್ಲಿ ಅಡಿಕೆ ವಿವಿಧ ಉದ್ದೇಶಗಳ ಬಳಕೆಗೆ ಅನುಕೂಲ ವಾಗುವ ದೃಷ್ಟಿಯಿಂದ ಅಡಿಕೆ ಸಂಶೋಧನಾ ಕೇಂದ್ರ ಸ್ಥಾಪನೆಗೆ ಸರ್ಕಾರದ ಮೇಲೆ ಒತ್ತಡ ತರಲು ಸತತ ಪ್ರಯತ್ನ ಮಾಡುತ್ತಿದ್ದೇನೆ. ಈ ವೇಳೆ ಪ್ರಭಾರ ತಹಶೀಲ್ದಾರ್ ರುಕ್ಮಿಣಿ ಬಾಯಿ, ಡಿವೈಎಸ್‌ಪಿ ರುದ್ರಪ್ಪ ಎಸ್ ಉಜ್ಜನಕೊಪ್ಪ , ಇಒ ಉತ್ತಮ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

## ವಿವಿಧತೆಯಲ್ಲಿ ಏಕತೆ ಕಾಣುವ ದೇಶ ಭಾರತ: ಶಾಸಕ

**ಜಗಳೂರು:** ವಿವಿಧತೆಯಲ್ಲಿ ಏಕತೆ ಕಾಣುವ ದೇಶ ನಮ್ಮ ಭಾರತ ಎಂದು ಶಾಸಕ ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಬಯಲು ರಂಗಮಂದಿರದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ 77 ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಪ್ರಪಂಚದಲ್ಲಿ ವಿವಿಧ ಧರ್ಮ ಸಂಸ್ಕೃತಿ, ವಿವಿಧಉಡುಗೆ,ತೊಡುಗೆಆಚಾರ, ವಿಚಾರವನ್ನು ಅಳವಡಿಸಿಕೊಂಡು ಪಾಲಿಸಿಕೊಂಡು ಅನೇಕತೆಯಲ್ಲಿಏಕತೆಯನ್ನುಕಾಣುವದೇಶ ಭಾರತ. ಇಂತಹದೇಶಕ್ಕೆ ಸ್ವಾತಂತ್ರ್ಯ ಸುಲಭವಾಗಿ ಲಭಿಸಲಿಲ್ಲ ಸಾವಿರಾರು ದೇಶ ಭಕ್ತರ ಹೋರಾಟ ಬಲಿದಾನದ ಮೂಲಕ ಲಭಿಸಿದೆ ಎಂದರು. ಈ ಸಂದರ್ಭದಲ್ಲಿಪ,ಪಂ ಸದಸ್ಯರಾದರಮೇಶ್, ಮಂಜುನಾಥ್, ದೇವರಾಜ್, ತಿಪ್ಪೇಸ್ವಾಮಿ,ಮಂಜಮ್ಮ, ವಿಶಾಲಾಕ್ಷಿ, ಲಲಿತ, ಎಸ್ಟಿ ಘಟಕದರಾಜ್ಯಾಧ್ಯಕ್ಷ ಕೆ ಪಿ ಪಾಲಯ್ಯ, ಪ್ರಧಾನಕಾರ್ಯದರ್ಶಿ ಎಂ ಡಿ ಕೀರ್ತಿಕುಮಾರ್, ಕಾಂಗ್ರಸ್ ಎಸ್ಸಿ ಘಟಕದತಾಲೂಕುಅಧ್ಯಕ್ಷ ಮಹೇಶ್ವರಪ್ಪ, ಪಪಂ ಮುಖ್ಯಾಧಿಕಾರಿ ಲೋಕ್ಯನಾಯ್ಕ್, ಬಿಇಒ ಹಾಲಮೂರ್ತಿ, ತಾಪಂಕಾರ್ಯನಿರ್ವಾಹಕಅಧಿಕಾರಿ ಕೆಂಚಪ್ಪ, ಸಿಪಿಐ ಶ್ರೀನಿವಾಸ್‌ರಾವ್, ಶಿಕ್ಷಕರಾದ ತಿಪ್ಪೇಸ್ವಾಮಿ ಸೇರಿದ್ದಂತೆ ಹಲವರುಕಾರ್ಯಕ್ರಮದಲ್ಲಿದ್ದರು.

## ಗ್ಯಾರಂಟಿ ಯೋಜನೆ ಮುಂದುವರಿಕೆ: ಸಚಿವ

**ಚಿತ್ರದುರ್ಗ:** ಸರಕಾರವು ಜನರ ಸರ್ವತೋಮುಖ ಏಳಿಗೆಗಾಗಿ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ನಿರಾತಂಕವಾಗಿ ಸಾಗುತ್ತಿದ್ದು, ಮುಂದೆಯೂ ಯಾವುದೇ ಅಡ್ಡಿಯಿಲ್ಲದೆ ಸಾಗುವ ಭರವಸೆಯನ್ನು ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಡಿ.ಸುಧಾಕರ್ ನೀಡಿದರು. ಜಿಲ್ಲಾಡಳಿತ ವತಿಯಿಂದ ಆಯೋಜಿಸಲಾದ 78ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಚಿತ್ರದುರ್ಗ ಜಿಲ್ಲೆಯಲ್ಲಿ ಅನ್ನಭಾಗ್ಯ ಯೋಜನೆಯಡಿ 4.50 ಲಕ್ಷ, ಗೃಹಜ್ಯೋತಿ ಯೋಜನೆಯಡಿ 3.71 ಲಕ್ಷ, ಗೃಹಲಕ್ಷ್ಮೀ ಯೋಜನೆಯಡಿ 3.81 ಲಕ್ಷ, ಯುವನಿಧಿ ಯೋಜನೆಯಡಿ 4726 ಹಾಗೂ ಶಕ್ತಿ ಯೋಜನೆಯಡಿ 2.60 ಕೋಟಿ ಮಹಿಳೆಯರು ಸದುಪಯೋಗ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅಧ್ಯಕ್ಷತೆ ವಹಿಸಿದ್ದರು. ಸಂಸದ ಗೋವಿಂದ ಎಂ.ಕಾರಜೋಳ ಘನ ಉಪಸ್ಥಿತಿ ವಹಿಸಿದ್ದರು. ಆದಿಜಾಂಬವ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಜಿ.ಎಸ್.ಮಂಜುನಾಥ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಜಿಲ್ಲಾಧಿಕಾರಿ ಟಿ. ವೆಂಕಟೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಎಸ್. ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜೆ.ಕುಮಾರಸ್ವಾಮಿ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ನೌಕರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಇದ್ದರು.

## ತ್ಯಾಗ, ಬಲಿದಾನದ ಸಂಕೇತ ಸ್ವಾತಂತ್ರ್ಯ

**ಚಳ್ಳಕೆರೆ:** ದೇಶದ ಗಡಿಯಲ್ಲಿ ಸೈನಿಕರು ಪ್ರಾಣತ್ಯಾಗ ಮಾಡಿ ದೇಶವನ್ನು ರಕ್ಷಣೆ ಮಾಡಿದ್ದಾರೆ, ಸ್ವಾತಂತ್ರ್ಯೋತ್ಸವವು ರಾಷ್ಟ್ರಕ್ಕೆ ಮಹತ್ವದ ದಿನಾಚರಣೆ. ದೇಶವು ಮಹಾನ್ ನಾಯಕರ ತ್ಯಾಗ ಬಲಿದಾನ ಹೋರಾಟದ ಮೂಲಕ ದಾಸ್ಯದ ಸಂಕೋಲೆಯಿಂದ ಹೊರ ಬಂದ ಅಪೂರ್ವ ದಿನವಾಗಿದೆ ಎಂದು ಶಾಸಕ ಟಿ.ರಘುಮೂರ್ತಿ ಹೇಳಿದರು.

ಅವರು ನಗರದ ಬಿಸಿನೀರು ಮುದ್ದಪ್ಪ ಪ್ರೌಢಶಾಲಾ ಆವರಣದಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು. ಸ್ವಾತಂತ್ರ್ಯ ದಿನಾಚರಣೆ ಎಂದರೆ ಶಿಸ್ತಿನ ಆಚರಣೆ. ಶಿಸ್ತನ್ನು ಸಂತೋಷವಾಗಿ ಆಚರಿಸುವುದು ಈ ದಿವಸವಾಗಿದೆ, ಆದರೆ ಶಾಲಾ ಮಕ್ಕಳಿಲ್ಲದ ಸ್ವಾತಂತ್ರ್ಯ ದಿನಾಚರಣೆಯನ್ನು ಇಂದು ನಾವು ಆಚರಣೆ ಮಾಡುತ್ತಿದ್ದೆವೆ, ಇಂದು ಪ್ರತಿಯೊಬ್ಬರು ವಿದ್ಯಾವಂತರಾಗಬೇಕು. ಚಳ್ಳಕೆರೆಯ ಬರಗಾಲ ಪೀಡಿತ ಪ್ರದೇಶ ಇಲ್ಲಿ ಹೆಚ್ಚಿನದಾಗಿ ಮಳೆ ಬಂದರೆ ಮಾತ್ರ ಜನ ಜೀವನ ಹಸನಾಗುತ್ತದೆ ಎಂದರು. ಪ್ರಾಸ್ತವಿಕವಾಗಿ ಮಾತನಾಡಿದ ತಹಸೀಲ್ದಾರ್ ರೇಹಾನ್ ಪಾಷ



ಚಳ್ಳಕೆರೆ ನಗರದ ಬಿಸಿನೀರು ಮುದ್ದಪ್ಪ ಪ್ರೌಢಶಾಲಾ ಆವರಣದಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಶಾಸಕ ಟಿ.ರಘುಮೂರ್ತಿ ಮಾತನಾಡಿದರು.

ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆ ದೇಶದ ತುಂಬೆಲ್ಲ ಮನೆಮಾಡಿದೆ ಅಂದು ಬ್ರಿಟೀಷರು ಭಾರತಕ್ಕೆ ಬಂದು, ನಮ್ಮವರ ಸಾಮಾಜಿಕ ಸ್ಥಿತಿಗತಿ ಯನ್ನು ಅಧ್ಯಯಿಸಿ ಭಾರತಕ್ಕೆ ಬೇಕಾದ ಒಡೆದು ಆಳುವ ತಂತ್ರವನ್ನು ಅನ್ವಯಿಸುತ್ತ ಹೋದರು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ರಾಘವೇಂದ್ರ, ಬಿ.ಟಿ.ರಮೇಶ್‌ಗೌಡ, ವಿಶುಕುಮಾರ್, ಕೆ.ವೀರಭದ್ರಪ್ಪ, ವಿರುಪಾಕ್ಷ, ಜಯಣ್ಣ, ವಿ.ವೈ.ಪ್ರಮೋದ್, ಶ್ರೀನಿವಾಸ್, ಮಂಜುಳಪ್ರಸನ್ನ, ನಿರ್ಮಲ, ಕವಿತಾ, ಸುಜಾತ್, ಸಾಕಮ್ಮ, ನಾಗವೇಣಿ, ಸುಮಭರಮಯ್ಯ, ಹಳೆನಗರದ ವೀರಭದ್ರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಶಿದರ್, ಸುರೇಶ್, ಖಾದರ್, ಪರೀದ್ ಖಾನ್, ಚಳ್ಳಕೆರೆಪ್ಪ, ಮಾಜಿ ಜಿಪಂ.ಸದಸ್ಯ ಬಿ.ಪಿ.ಪ್ರಕಾಶ್‌ಮೂರ್ತಿ, ಗಾಯಕ ಮುತ್ತುರಾಜ್, ಇಒ ಶಶಿಧರ್, ಡಿವೈಎಸ್‌ಪಿ ಬಿಟಿ.ರಾಜಣ್ಣ, ವೃತ್ತ ನಿರೀಕ್ಷಕ ಆರ್‌ಎಫ್ ದೇಸಾಯಿ, ಪೌರಾಯುಕ್ತ ಜಗರೆಡ್ಡಿ, ಬಿಇಒ. ಕೆ.ಎಸ್.ಸುರೇಶ್, ಎಇಇ ಕಾವ್ಯ, ಅಬಕಾರಿ ನಿರೀಕ್ಷಕ ನಾಗರಾಜ್ ಇದ್ದರು.

## ಮಹನೀಯರಿಂದ ದೇಶಕ್ಕೆ ಸ್ವಾತಂತ್ರ್ಯ

**ಹಿರಿಯೂರು:** ಸ್ವಾತಂತ್ರ್ಯಕ್ಕಾಗಿ ಶ್ರಮಿಸಿ ಪ್ರಾಣ ತ್ಯಾಗ ಬಲಿದಾನದ ಮೂಲಕ ಸ್ವಾತಂತ್ರ್ಯ ಬರುವಂತೆ ಮಾಡಿದ ಮಹಾನಿಯರನ್ನು ಸ್ಮರಿಸಿಯೋಣ ಎಂದು ತಹಸೀಲ್ದಾರ್ ರಾಜೇಶ್ ಕುಮಾರ್ ಹೇಳಿದರು. ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲ್ಲೂಕು ಆಡಳಿತ ತಾಲ್ಲೂಕು ಪಂಚಾಯಿತಿ ನಗರಸಭೆ ವತಿಯಿಂದ 78 ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಸ್ವಾತಂತ್ರ್ಯ ದೇಶ ವಾಸಿಗಳಿಗೆ ಮತ್ತು ದೇಶಭಕ್ತರಿಗೆ ಸ್ವಾತಂತ್ರ್ಯ ದಿನವು ಬಹಳ ಮುಖ್ಯವಾಗಿದೆ. 200 ವರ್ಷಗಳ ಬ್ರಿಟಿಷ್ ಆಳ್ವಿಕೆಯ ನಂತರ ನಾವು ಪಡೆದ ಸ್ವಾತಂತ್ರ್ಯ ಸ್ಫೂರ್ತಿದಾಯಕ .ಈ ಸಮಯದಲ್ಲಿ ದೇಶದ ಎಲ್ಲರಲ್ಲೂ ಸಹ ಸಂತಸ ಮನೆ ಮಾಡಿರುತ್ತದೆ. ಏಕೆಂದರೆ ಈ ದಿನವು ಮಾತೃಭೂಮಿಯ ಮೇಲಿನ ಪ್ರೀತಿ ಮತ್ತು ಹೆಮ್ಮೆಯನ್ನು ತೋರಿಸುವಂತಹ ದಿನವಾಗಿದೆ ಎಂದರು.ತಾಲೂಕಿನಲ್ಲಿ ಸುಮಾರು 2064 ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ.ಸುಮಾರು 68338 ಗೃಹ ಲಕ್ಷ್ಮಿ ಯೋಜನೆಯ ಫಲಾನುಭವಿಗಳು ಡಿಬಿಟಿ ಮೂಲಕ ಹಣ ನೀಡಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ್ ಇಓ.ಸತೀಶ್ ಕುಮಾರ್ ,ಬಿಇಒ ತಿಪ್ಪೇಸ್ವಾಮಿ,ಡಿವೈಎಸ್ಪಿ ಚೈತ್ರ, ವಿವಿಧ ಇಲಾಖೆಗಳ ಅಧಿಕಾರಿಗಳು,ನಗರಸಭಾ ಸದಸ್ಯರುಗಳು , ರೈತ ಮುಖಂಡರು ದೈಹಿಕ ಶಿಕ್ಷಣ ಶಿಕ್ಷಕರರು,ಶಾಲಾ ಶಿಕ್ಷಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು,ವಿದ್ಯಾರ್ಥಿಗಳು ಸಾರ್ವಜನಿಕರು ಹಾಜರಿದ್ದರು.

## ಸಮಾಚಾರ ಸಣ್ಣದಲ್ಲ

### ಉರ್ದು ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ

**ಚಿಕ್ಕಮಗಳೂರು:** ನಗರದ ತಮಿಳು ಕಾಲೋನಿಯ ಉರ್ದು ಶಾಲೆಯಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸೈಯದ್ ಜಮೀಲ್ ಅಹ್ಮದ್ 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಗುರುವಾರ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಅಲ್-ಅಮೀನ್ ಶಾಲೆಯ ಉಪಾಧ್ಯಕ್ಷ ಅಲ್ತಾಮಾಶ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

### ಬಹುಮಾದರಿ ಶಿಕ್ಷಣ ಉತ್ತಮ ಫಲಿತಾಂಶ

**ಮಂಗಳೂರು:** ತಮ್ಮ ವಿದ್ಯಾರ್ಥಿಗಳಿಗೆ ಬಹು-ಮಾದರಿ ಶಿಕ್ಷಣವನ್ನು ನೀಡುವ ಶಾಲೆಗಳು ಪಠ್ಯ ಪುಸ್ತಕಗಳಂತಹ ಸಾಂಪ್ರದಾಯಿಕ ರೂಪಗಳನ್ನು ಮಾತ್ರ ಬಳಸುವ ಶಾಲೆಗಳಿಗಿಂತ ಉತ್ತಮ ಸಾಧನೆ ಮಾಡಿರುವುದು ಭಾರತದ ಪ್ರಮುಖ ಸ್ಕೂಲ್ ಎಜ್ಯುಟೆಕ್ ಸಂಸ್ಥೆಯಾದ ಲೀಡ್ ಗ್ರೂಪ್ ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆ. ಭಾರತದಲ್ಲಿ ಪ್ರಸ್ತುತ ಶಾಲಾ ಶಿಕ್ಷಣದ ಸ್ಥಿತಿಯನ್ನು ವಿಶ್ಲೇಷಿಸುವ 'ದಿ ಪಲ್ಸ್ ಆಫ್ ಸ್ಕೂಲ್ ಲೀಡರ್ಸ್ ಸರ್ವೆ' ಎಂಬ ಹೊಸ ಅಧ್ಯಯನ ವರದಿ ಬಿಡುಗಡೆ ಮಾಡಿದ್ದು, ರಾಷ್ಟ್ರವ್ಯಾಪಿ ಸಮೀಕ್ಷೆಯು ಸುಮಾರು 1.7 ಲಕ್ಷ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವ 500 ಕ್ಕೂ ಅಧಿಕ ಖಾಸಗಿ ಶಾಲೆಗಳ ರೇಟಿಂಗಳನ್ನು ಆಧರಿಸಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಲೀಡ್ ಗ್ರೂಪ್ ಸಿಇಒ ಮತ್ತು ಸಹ-ಸಂಸ್ಥಾಪಕ ಸುಮೀತ್ ಮೆಹ್ತಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

### ಮತ್ತೇ ಕಡಲಿಗಿಳಿದ ದೋಣಿಗಳು

**ಉಡುಪಿ:** ಕಳೆದ ಎರಡು ತಿಂಗಳ ಕಾಲ ಸ್ಥಗಿತಗೊಂಡಿದ್ದ ಯಾಂತ್ರಿಕ ಮೀನುಗಾರಿಕೆ ಇದೀಗ ಮತ್ತೆ ಚಾಲನೆ ದೊರೆತಿದೆ. ಕರಾವಳಿಯ ಬಂದರಿನಲ್ಲಿ ಮೀನುಗಾರಿಕೆ ಇಲ್ಲದೇ ಲಂಗಾರು ಹಾಕಿದ್ದ ಬೋಟುಗಳು ಬುಧವಾರ ಕಡಲಿಗಿಳಿದಿದ್ದು, ಮೀನುಗಾರಿಕೆ ಚಟುವಟಿಕೆ ಚುರುಕುಗೊಂಡಿದೆ. ಆ.1ರಿಂದ ಯಾಂತ್ರಿಕ ಮೀನುಗಾರಿಕೆ ಅವಕಾಶವಿದ್ದಾಗ್ಯೂ, ಗಾಳಿ ಮಳೆಯ ಕಾರಣದಿಂದ ಬೋಟುಗಳು ನೀರಿಗೆ ಇಳಿದಿರಲಿಲ್ಲ. ಮಲ್ಪೆ ಮೀನುಗಾರರ ಸಂಘದ ವತಿಯಿಂದ ಆ. 19ರಂದು ಸಮುದ್ರಪೂಜೆ ನಡೆಯಲಿದೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

## ದ.ಕ ಜಿಲ್ಲಾ ಮಟ್ಟದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ

# ಉದ್ಯೋಗಾವಕಾಶ: ಮಂಗಳೂರಿನಲ್ಲಿ ಟೌನ್‌ಶಿಪ್

**ಮಂಗಳೂರು:** ರಾಜ್ಯದಲ್ಲಿ ಸುಸ್ಥಿರ ಮೂಲ ಸೌಕರ್ಯ ಮತ್ತು ಉದ್ಯೋಗಾವಕಾಶಗಳನ್ನು ಸೃಜಿಸುವಂತಹ ಆಕರ್ಷಕ ನಗರಗಳ ಅಭಿವೃದ್ಧಿಯ ನಿಟ್ಟಿನಲ್ಲಿ ಮಂಗಳೂರು ನಗರದ ಸಮೀಪದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ ಎಂದು ದಕ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಮಳೆಯ ಸಿಂಚನದ ನಡುವೆ ನೆಹರೂ ಮೈದಾನದಲ್ಲಿ ಗುರುವಾರ ನಡೆದ ದ.ಕ ಜಿಲ್ಲಾ ಮಟ್ಟದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಸಂದೇಶ ನೀಡಿದರು.

2024 ನೇ ಸಾಲಿನ ಮುಂಗಾರು ಅವಧಿಯನ್ನು ಜಿಲ್ಲಾಡಳಿತ ವತಿಯಿಂದ ಸಮರ್ಪಕವಾಗಿ ನಿರ್ವಹಣೆ ಮಾಡಲಾಗಿರುತ್ತದೆ. ಜಿಲ್ಲೆಯಲ್ಲಿ ಇದುವರೆಗೂ ವಾಡಿಕೆಗಿಂತ ಶೇ.14 ಹೆಚ್ಚು ಮಳೆಯಾಗಿದೆ. ಮಳೆಯಿಂದಾಗಿ ಜೂನ್ 2024 ರಿಂದ ಇದೂವರೆಗೂ ಒಟ್ಟು 665 ಮನೆಗಳು ಹಾನಿಯಾಗಿದ್ದು, ಒಟ್ಟು 1.21 ಕೋಟಿ ರು. ಪರಿಹಾರವನ್ನು ಮನೆಹಾನಿ ಸಂತ್ರಸ್ತ ಫಲಾನುಭವಿಗಳಿಗೆ ಪಾವತಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯಲ್ಲಿ 53 ಕೋಟಿ ರು. ವೆಚ್ಚದಲ್ಲಿ 12 ಮಾಡ್ಯುಲರ್ ಶಸ್ತ್ರ ಚಿಕಿತ್ಸಾ ಕೊಠಡಿಗಳನ್ನು ಒಳಗೊಂಡ ಹೊಸ ಸರ್ಜಿಕಲ್ ಬ್ಲಾಕ್ ನಿರ್ಮಿಸಲಾಗಿದೆ. ವೆನ್‌ಲಾಕ್ ಆಸ್ಪತ್ರೆಯಲ್ಲಿ 35 ಹಾಸಿಗೆಗಳ ಡಯಾಲಿಸಿಸ್ ಕೇಂದ್ರ, ಜೇರಿಯಾಟ್ರಿಕ್ ವಾರ್ಡ್, ಕ್ಯಾಥ್ ಲಾಬ್ ನಿರ್ಮಾಣ ಪ್ರಗತಿಯಲ್ಲಿದೆ. ಇದಲ್ಲದೇ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಬ್ಲಾಕ್ ಮಂಜೂರು ಮಾಡಲಾಗಿದೆ. ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ 1326 ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ಅವರು ಹೇಳಿದರು.

ಇದಕ್ಕೂ ಮೊದಲು ಪೊಲೀಸ್ ವಾದ್ಯವೃಂದ, ಸಂಚಾರಿ ಪೊಲೀಸ್, ಅಬಕಾರಿ ಇಲಾಖೆ, ಗೃಹ ರಕ್ಷಕ ದಳ, ಆರ್ ಎಸ್ ಪಿ ಬಾಲಕ- ಬಾಲಕಿಯರ ತಂಡ, ಸ್ಕೌಟ್ಸ್ ಮತ್ತು ಗೈಡ್ಸ್, ಭಾರತ ಸೇವಾ ದಳ ತಂಡಗಳು ಸೇರಿದಂತೆ ಒಟ್ಟು 16 ತಂಡಗಳಿಂದ ಸಚಿವರು ಗೌರವರಕ್ಷೆ ಸ್ವೀಕರಿಸಿದರು. ವಿದ್ಯಾರ್ಥಿಗಳು, ಪೊಲೀಸ್ ತಂಡಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು.

ಮೇಯರ್ ಸುಧೀರ್ ಶೆಟ್ಟಿ , ಸಂಸದ ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಅಪರ ಜಿಲ್ಲಾಧಿಕಾರಿ ಡಾ . ಸಂತೋಷ್ ಕುಮಾರ್, ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್, ಪಶ್ಚಿಮ ವಲಯ ಐಜಿಪಿ ಬೋರಲಿಂಗಯ್ಯ, ಜಿಪಂ ಸಿಇಒ ಡಾ. ಆನಂದ್ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಜಿಲ್ಲಾ ಮಲೇರಿಯಾ ಅಧಿಕಾರಿ ನವೀನ್ ಚಂದ್ರ ಕುಲಾಲ್, ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ಇದ್ದರು.

ದಕ್ಷಿಣ ಕನ್ನಡ ಜಿಲ್ಲಾಡಳಿತ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ದ.ಕನ್ನಡ ಡ್ರಾಮಾ ಜೂನಿಯರ್ಸ್ ಸೀಸನ್ 5 ವಿಜೇತೆ ಕು. ರಿಷಿಕಾ ಕುಂದೇಶ್ವರ ಮತ್ತು ಕು. ಸನ್ನಿಧಿ ಕಶೆಕೋಡಿ ಅವರನ್ನು ಡೆಂಘೀ ಕುರಿತ ಆರೋಗ್ಯ ಜಾಗೃತಿ ಅಭಿಯಾನ (ರೀಲ್ಸ್) ಕ್ಕಾಗಿ ಸನ್ಮಾನಿಸಲಾಯಿತು.

### ಜಗತ್ತಿನಾದ್ಯಂತ ಅಲ್ಪಸಂಖ್ಯಾತರ ರಕ್ಷಣೆ

ನಮ್ಮ ನೆರೆಯ ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಭಾರತೀಯರಾದ ನಮ್ಮೆಲ್ಲರಿಗೂ ಅತಿಯಾದ ಗಾಬರಿಯನ್ನು ತರಿಸಿದೆ. ಬಾಂಗ್ಲಾದೇಶದಲ್ಲಿರುವ ಅಲ್ಪಸಂಖ್ಯಾತ ಹಿಂದುಗಳ ರಕ್ಷಣೆಗಾಗಿ ಕೇಂದ್ರ ಸರಕಾರವು ಅಂತಾರಾಷ್ಟ್ರೀಯ ಮಟ್ಟದ ಕ್ರಮಗಳನ್ನು ಕೈಗೊಳ್ಳಬೇಕು. ಭಾರತ ಸೇರಿದಂತೆ ಜಗತ್ತಿನಾದ್ಯಂತ ಅಲ್ಪಸಂಖ್ಯಾತರ ರಕ್ಷಣೆಯು ಬಹುಸಂಖ್ಯಾತ ಜನರ ಕರ್ತವ್ಯವೆಂದು ಭಾವಿಸಬೇಕು. ಸಕಲ ಮಾನವ ಸಂಕುಲ ಶಾಂತಿ ಮತ್ತು ಸೌಹಾರ್ದತೆಯಿಂದ ಬಾಳಲಿ ಎಂಬುದು ನಮ್ಮ ಸಂಕಲ್ಪ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದರು.

> ಮಾನ್ಯ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಹಂತ-4 ರ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ 13 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 130 ಕೋಟಿ ಮಂಜೂರಾಗಿದ್ದು, 320 ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಲಾಗಿದೆ ಎಂದು ಜಿಲ್ಲೆಯಲ್ಲಿ ಕೈಗೊಂಡ ವಿವಿಧ ಯೋಜನೆಗಳು, ಗ್ಯಾರಂಟಿ ಯೋಜನೆಗಳ ಬಗ್ಗೆ ವಿವರ ನೀಡಿದರು.
> -ದಿನೇಶ್ ಗುಂಡೂರಾವ್, ಸಚಿವ

# ಪ್ರತ್ಯೇಕ ಶಿಕ್ಷಣ ನೀತಿಗೆ ಸಮಿತಿ ರಚನೆ: ಸಚಿವೆ ಹೆಬ್ಬಾಳ್ಕರ್

**ಉಡುಪಿ:** ಕೇಂದ್ರ ಸರಕಾರ ಜಾರಿಗೆ ತಂದ ನೂತನ ಶಿಕ್ಷಣ ನೀತಿ (ಎನ್‌ಇಪಿ) ಸಾಕಷ್ಟು ಗೊಂದಲಗಳಿಗೆ ಕಾರಣವಾಗಿತ್ತು. ನೆಲ ಸಂಸ್ಕೃತಿಯಿಂದ ದೂರವಿತ್ತು. ಅದನ್ನು ಬದಲಾವಣೆ ಮಾಡುವುದರೊಂದಿಗೆ ರಾಜ್ಯದ್ದೇ ಪ್ರತ್ಯೇಕ ಕರ್ನಾಟಕ ಶಿಕ್ಷಣ ನೀತಿ ತರಲು ಸಮಿತಿ ರಚಿಸಿದೆ. ಸಮಿತಿಯ ಮಧ್ಯಂತರ ವರದಿಯ ಪ್ರಕಾರ ಈಗಾಗಲೇ ಕೆಲವೊಂದು ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಹುಧರ್ಮ, ಬಹುಸಂಸ್ಕೃತಿ, ಬಹುಭಾಷೆ ಇರುವ ದೇಶಕ್ಕೆ ಏಕ ಸಂಸ್ಕೃತಿ ಯಾವತ್ತೂ ಹೊಂದುವುದಿಲ್ಲ. ಸಾಮಾಜಿಕ, ಸಂಸ್ಕೃತಿಕ, ಆರ್ಥಿಕ, ವಾಸ್ತವಾಂಶಗಳನ್ನು ಒಳಗೊಂಡ ಶಿಕ್ಷಣ ನೀತಿಯ ಅಗತ್ಯತೆ ಇದೆ. ಅದೇ ಪ್ರಯತ್ನವನ್ನೇ ನಮ್ಮ ಸರಕಾರ ಮಾಡಲು ಮುಂದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಉಡುಪಿಯ ಅಜ್ಜರಕಾಡು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಪರಸ್ಪರ ನಂಬಿಕೆ, ಸಹಕಾರ ಮತ್ತು ಸಹಬಾಳ್ವೆಯ ಬಲದ ಮೇಲೆ ಭಾರತಕ್ಕೆ ಭರವಸೆಯ ಭವಿಷ್ಯವನ್ನು ನಿರ್ಮಿಸಲು ಸಾಧ್ಯ. ಬಲಿಷ್ಠ, ಸಮೃದ್ಧ ಭಾರತವನ್ನು ನಿರ್ಮಿಸುವ ನಿಟ್ಟಿನಲ್ಲಿ ಯುವ ಭಾರತೀಯರು ಸಂಕಲ್ಪ ಮಾಡಬೇಕಿದೆ ಎಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕರೆ ನೀಡಿದರು.

**ಅಂಗನವಾಡಿಗಳ ಪರಿವರ್ತನೆ :** ಸರಕಾರ ಅಂಗನವಾಡಿ ಚಿತ್ರಣವನ್ನೇ ಬದಲಾಯಿಸಲು ನಿರ್ಧರಿಸಿದೆ. ಅಂಗನವಾಡಿಗಳಲ್ಲಿ ಮಾಂಟೆಸ್ಸರಿ-ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದೆ. ಈಗಾಗಲೇ ಬೆಂಗಳೂರು ನಗರದಲ್ಲಿ 250 ಅಂಗನವಾಡಿಗಳನ್ನು ಪ್ರಾಯೋಗಿಕವಾಗಿ ಮಾಂಟೆಸ್ಸರಿಗಳಾಗಿ ಪರಿವರ್ತಿಸಲಾಗಿದೆ. ಇದನ್ನು ಮೊದಲ ಹಂತದಲ್ಲಿ ರಾಜ್ಯದ 17, 800 ಅಂಗನವಾಡಿಗಳಿಗೂ ವಿಸ್ತರಿಸಲಾಗುವುದು ಎಂದು ಸಚಿವರು ತಿಳಿಸಿದರು.

**ಬಜೆಟ್ ನಲ್ಲಿ ಶೇ. 15 ರಷ್ಟು ಅನುದಾನ ಬಡವರಿಗೆ ಹಂಚಿಕೆ:** ಕಳೆದ ವರ್ಷ ಗ್ಯಾರಂಟಿ ಯೋಜನೆಗಳಿಂದ 7 ಕೋಟಿ ಜನರಿಗೆ ಅನುಕೂಲವಾಗಿದೆ. 1.2 ಕೋಟಿ ಜನ ಬಡತನ ರೇಖೆಯಿಂದ ಮೇಲಕ್ಕೆ ಬಂದಿದ್ದಾರೆ. ಇದುವರೆಗೂ ಬಜೆಟ್ ನಲ್ಲಿ ಶೇ. 4 ರಿಂದ 5 ರಷ್ಟು ಅನುದಾನ ಮಾತ್ರ ಬಡವರಿಗೆ ಹಂಚಿಕೆಯಾಗುತ್ತಿತ್ತು. ಈ ಬಾರಿ ಬಜೆಟ್ ನಲ್ಲಿ ಶೇ. 15 ರಷ್ಟು ಅನುದಾನ ಬಡವರಿಗೆ ಹಂಚಿಕೆಯಾಗಿರುವುದು ವಿಶೇಷ. ಇದರಿಂದ ಬಡವರ ಬದುಕು ಸುಧಾರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

**ಸೋಲಾರ್ ಅಳವಡಿಕೆಯಲ್ಲಿ ಉಡುಪಿ ಪ್ರಥಮ:**

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸೋಲಾರ್ ಅಳವಡಿಕೆಯಲ್ಲಿ ಉಡುಪಿ ಜಿಲ್ಲೆಯು ರಾಜ್ಯಕ್ಕೆ ಮೊದಲ ಸ್ಥಾನ ಪಡೆದುಕೊಂಡಿದೆ. ರಾಜ್ಯ ಸರಕಾರ ಸೆಲ್ಕೋ ಇಂಡಿಯಾ ಫೌಂಡೇಶನ್, ಸೇವಾ ಸಂಸ್ಥೆಗಳ ಸಹಕಾರದಿಂದ 58 ಪ್ರಾಥಮಿಕ ಆರೋಗ್ಯ ಕೇಂದ್ರ, ಆರೋಗ್ಯ ಉಪಕೇಂದ್ರ, ಆಯುರ್ವೇದಿಕ್ ಸೆಂಟರ್, ಮಲೇರಿಯಾ ಸೆಂಟರ್‌ಗಳಲ್ಲಿ ತಲಾ ಒಂದರಂತೆ ವಿದ್ಯುತ್ ಸಂಪರ್ಕವಿಲ್ಲದೆಯೂ ಗ್ರಾಮೀಣ ಭಾಗದ ಜನರಿಗೆ ದಿನದ 24 ಗಂಟೆಯೂ ನಿರಂತರವಾಗಿ ಸೇವೆ ನೀಡಲು ನೆರವಾಗಲಿದೆ.

ಉಡುಪಿ ಶಾಸಕ ಯಶ್ಪಾಲ್ ಸುವರ್ಣ, ಜಿಲ್ಲಾಧಿಕಾರಿ ಡಾ.ಕೆ. ವಿದ್ಯಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕೆ. ಅರುಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಕರಾವಳಿ ಕಾವಲು ಪಡೆಯ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಎಚ್. ಎನ್, ಹೆಚ್ಚುವರಿ ಜಿಲ್ಲಾಧಿಕಾರಿ ಮಮತಾ ದೇವಿ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರೋಶನ್ ಶೆಟ್ಟಿ, ಮುಖಂಡರಾದ ಉದಯ್ ಕುಮಾರ್ ಶೆಟ್ಟಿ, ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು ಉಪಸ್ಥಿತರಿದ್ದರು.

### ಗೃಹ ಆರೋಗ್ಯ ಯೋಜನೆ

ಮನೆಯ ಬಾಗಿಲಲ್ಲೇ ತಪಾಸಣೆ ನಡೆಸಿ, ಅಗತ್ಯ ಔಷಧಿಗಳನ್ನು ಒದಗಿಸುವ ಗೃಹ ಆರೋಗ್ಯ ಯೋಜನೆಯನ್ನು ಮುಂದಿನ ತಿಂಗಳಿನಿಂದ ರಾಜ್ಯದಲ್ಲಿ ಜಾರಿ ತರಲಾಗುವುದು. ಈ ಯೋಜನೆಯಡಿ ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ಸಮಸ್ಯೆ ಇರುವವರಿಗೆ ಮೂರು ತಿಂಗಳಿಗೆ ಆಗುವಷ್ಟು ಮಾತ್ರೆಗಳನ್ನು ನೇರವಾಗಿ ಮನೆಗಳಿಗೆ ಒದಗಿಸಲಾಗುವುದು ಎಂದು ಹೆಬ್ಬಾಳ್ಕರ್ ತಿಳಿಸಿದರು.

ಉಡುಪಿಯ ಅಜ್ಜರಕಾಡು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿದರು.

## ಸಮಾಚಾರ ಸಣ್ಣದಲ್ಲ

### ಮಹಿಳೆಯ ಶವ ಪತ್ತೆ: ಕೊಲೆ ಆರೋಪ

**ದಾವಣಗೆರೆ:** ನಗರದ ವಿವೇಕಾನಂದ ಬಡಾವಣೆಯ ಮನೆಯೊಂದರಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆಯಾಗಿದ್ದು, ತಂದೆಯೊಂದಿಗೆ ಸೇರಿ ಮಕ್ಕಳೇ ಆಕೆಯನ್ನು ಕೊಲೆಗೈದಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಮೃತ ಮಹಿಳೆಯನ್ನು ಸುಮಲತಾ ಎಂದು ಗುರುತಿಸಲಾಗಿದೆ. ಶಿವಮೂರ್ತಿ 12 ವರ್ಷಗಳ ಹಿಂದೆ ಮೊದಲನೇ ಪತ್ನಿ ಮೃತಪಟ್ಟ ಬಳಿಕ ಸುಮಲತಾಳನ್ನು ಮದುವೆಯಾಗಿದ್ದ. ಆಕೆಗೆ ಮಕ್ಕಳಿರಲಿಲ್ಲ, ಪತಿಯ ಮೊದಲ ಹೆಂಡತಿಯ ಮೂವರು ಮಕ್ಕಳನ್ನು ಪಾಲನೆ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದಳು. ಇದೀಗ ಪತಿ ಹಾಗೂ ಮಕ್ಕಳ ವಿರುದ್ಧ ಸುಮಲತಾ ಕುಟುಂಬಸ್ಥರು ಕೊಲೆ ಆರೋಪ ಮಾಡಿದ್ದಾರೆ.

### ಹಲ್ಲಿನಿಂದ 1 ಟನ್ ಕಾರು ಎಳೆದ ಯುವಕ

**ರಾಯಚೂರು:** ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆ ರಾಯಚೂರಿನಲ್ಲಿ ಆಯೋಜಿಸಿದ್ದ ಧ್ವಜಾರೋಹಣ ವೇಳೆ ಯುವಸಾಹಸಿ ಮಾನ್ವಿಯ ಸತೀಶ್ ಕೊನಾಪುರಪೇಟೆ ಹಲ್ಲಿನಿಂದ 1 ಟನ್ ತೂಕದ ಕಾರನ್ನು ಎಳೆಯುವ ಮೂಲಕ ಸಾಹಸ ಮೆರೆದಿದ್ದಾನೆ. ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ವೇಳೆ 1 ಟನ್ ತೂಕದ ಸ್ವಿಫ್ಟ್ ಡಿಸೈರ್ ಕಾರಿಗೆ ಹಗ್ಗ ಕಟ್ಟಿ ಬಾಯಿಂದ 100 ಮೀಟರ್ ದೂರದವರೆಗೆ ಎಳೆಯುವ ಮೂಲಕ ಸಾಹಸ ಪ್ರದರ್ಶಿಸಿದ್ದಾನೆ. ಬ್ರೂಸ್ಲಿ ಅಭಿಮಾನಿಯಾಗಿರುವ ಈತ ಈಗಾಗಲೇ ಹಲವೆಡೆ ತನ್ನ ಸಾಹಸ ಪ್ರದರ್ಶಿಸಿ ಪ್ರಶಂಸೆ ಪಡೆದಿದ್ದಾನೆ. ಇದೇ ವೇಳೆ, ಅಗ್ನಿ ಶಾಮಕದಳ ಸಿಬ್ಬಂದಿ, ಬೆಂಕಿ ಅವಘಡಗಳಾದಾಗ ರಕ್ಷಣೆ ಮಾಡುವುದು ಹೇಗೆ ಎಂಬುದರ ಬಗ್ಗೆ ಅಣಕು ಪ್ರದರ್ಶನ ಮಾಡಿದರು. ಗುಡಿಸಲಿಗೆ ಬೆಂಕಿ ಹೊತ್ತಿಕೊಂಡಾಗ ಏನು ಮಾಡಬೇಕು? ಅಡುಗೆ ಅನಿಲದ ಸಿಲಿಂಡರ್‌ಗೆ ಬೆಂಕಿ ಹೊತ್ತಿಕೊಂಡಾಗ ಏನು ಮಾಡಬೇಕು ಎಂಬ ಕುರಿತು ಅಣಕು ಪ್ರದರ್ಶನ ಮಾಡಿದರು.

ವಿರಾಮ
ಪ್ರತಿ ಭಾನುವಾರ

ಭವಿಷ್ಯದಲ್ಲಿ ಈ ಬ್ಯಾಂಕ್‌ಗಳೊಂದಿಗೆ ಯಾವುದೇ ಸಂಬಂಧವಿಲ್ಲ | ಠೇವಣಿಯನ್ನು ಹಿಂಪಡೆಯಲು ತೀರ್ಮಾನ | ಸರಕಾರಿ ಹಣ ದುರ್ಬಳಕೆಯ ಹಿನ್ನಲೆಯಲ್ಲಿ ಈ ಕಠಿಣ ಕ್ರಮ

# ಇನ್ನು ಎಸ್‌ಬಿಐ, ಪಿಎನ್‌ಬಿಗಿಲ್ಲ ಸರಕಾರಿ ಖಾತೆ

**ಬೆಂಗಳೂರು:** ಮಹತ್ವದ ಬೆಳವಣಿಗೆಯಲ್ಲಿ ಇನ್ನು ಮುಂದೆ ಭಾರತೀಯ ಸ್ಟೇಟ್ ಬ್ಯಾಂಕ್ ಇಂಡಿಯಾ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳಲ್ಲಿ ಹೊಂದಿರುವ ಎಲ್ಲ ಖಾತೆಗಳನ್ನು ತಕ್ಷಣವೇ ಬರಖಾಸ್ತುಗೊಳಿಸಲು ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಎಸ್‌ಬಿಐ ಹಾಗೂ ಪಿಎನ್‌ಬಿಯಲ್ಲಿ ರಾಜ್ಯ ಸರಕಾರಕ್ಕೆ ಸಂಬಂಧಿಸಿದ ಎಲ್ಲ ಇಲಾಖೆ ಹಾಗೂ ಸಂಸ್ಥೆಗಳ ಖಾತೆಗಳನ್ನು ಬರಖಾಸ್ತುಗೊಳಿಸುವುದರೊಂದಿಗೆ ಇನ್ನು ಮುಂದೆ ಉಭಯ ಬ್ಯಾಂಕ್‌ಗಳಲ್ಲಿ ಯಾವುದೇ ರೀತಿಯ ಠೇವಣಿ, ಹೂಡಿಕೆ ಸೇರಿದಂತೆ ವ್ಯವಹಾರ ಮಾಡಬಾರದು ಎಂದು ಸರಕಾರ ಸುತ್ತೋಲೆ ಹೊರಡಿಸಿದೆ.

ಠೇವಣಿ, ಮರುಪಾವತಿ ಪ್ರಕ್ರಿಯೆಯಲ್ಲಿನ ವಂಚನೆ, ಅಕ್ರಮ ಪ್ರಕರಣಗಳ ಹಿನ್ನೆಲೆಯಲ್ಲಿ ಸರಕಾರ ಈ ಕ್ರಮ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಮೋದನೆಯೊಂದಿಗೆ ಆರ್ಥಿಕ ಇಲಾಖೆ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಪಿಸಿ ಜಾಫರ್ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದಾರೆ. ಈ ಆದೇಶದ ಪ್ರಕಾರ ಎಲ್ಲ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ನಿಗಮಗಳು, ಮಂಡಳಿಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಕೂಡಲೇ ಎಸ್‌ಬಿಐ ಹಾಗೂ ಪಿಎನ್‌ಬಿ ಬ್ಯಾಂಕ್‌ಗಳಲ್ಲಿನ ಖಾತೆಗಳನ್ನು ಸ್ಥಗಿತಗೊಳಿಸಬೇಕಾಗಿದೆ.

ಬ್ಯಾಂಕ್‌ಗಳಲ್ಲಿ ಇಟ್ಟ ಸರಕಾರಿ ಹಣ ದುರ್ಬಳಕೆಯಾಗುವುದನ್ನು ತಪ್ಪಿಸಲು ಕಠಿಣ ನಿರ್ಧಾರ ಅನಿವಾರ್ಯವಾಗಿದೆ. ಇಲಾಖೆಗಳ ಹೆಚ್ಚುವರಿ ಹಣವನ್ನು ಈ ರೀತಿ ನಿಶ್ಚಿತ ಠೇವಣಿ ರೂಪದಲ್ಲಿ ಹೂಡಿಕೆ ಮಾಡಲಾಗುತ್ತಿತ್ತು. ಮುಂದಿನ ದಿನದಲ್ಲಿ ಈ ಸಂಬಂಧ ಟೆಂಡರ್ ಕರೆದು ಹೆಚ್ಚು ಬಡ್ಡಿ ನೀಡುವ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲಾಗುವುದು. ಪ್ರಕ್ರಿಯೆ ಈಗಷ್ಟೇ ಪ್ರಾರಂಭವಾಗಿರುವುದರಿಂದ ಮೊತ್ತ ಹಾಗೂ ಖಾತೆಗಳ ವಿವರ ಲಭ್ಯವಿಲ್ಲ.

-ಎಲ್.ಕೆ. ಅತೀಕ್, ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ

### ಸೌಹಾರ್ದಯುತವಾಗಿ ಸಮಸ್ಯೆ ಇತ್ಯರ್ಥ

**ಠೇವಣಿ ಹಿಂಪಡೆಯುವಂತೆ ಸೂಚಿಸಿರುವ ಕರ್ನಾಟಕ ರಾಜ್ಯ ಸರಕಾರದೊಂದಿಗೆ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಲು ಚರ್ಚೆ ನಡೆಸಲಾಗುತ್ತಿದೆ ಎಂದು ಸರಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್ ಗುರುವಾರ ತಿಳಿಸಿವೆ. ರಾಜ್ಯದ ವಿವಿಧ ಮಂಡಳಿಗಳು ಈ ಎರಡೂ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ನಿಶ್ಚಿತ ಠೇವಣಿ ಹಣವನ್ನು ವಂಚಿಸಿವೆ. ಇದಕ್ಕೆ ಪರಿಹಾರ ನೀಡಲು ನಿರಾಕರಿಸುತ್ತಿವೆ. ಹಾಗಾಗಿ, ಈ ಬ್ಯಾಂಕ್‌ಗಳಲ್ಲಿನ ಖಾತೆ ಸ್ಥಗಿತಗೊಳಿಸಿ ನಿಶ್ಚಿತ ಠೇವಣಿ ಮತ್ತಿತರ ಹೂಡಿಕೆ ಹಿಂಪಡೆಯುವಂತೆ ಸರ್ಕಾರವು ನಿಗಮ, ಮಂಡಳಿಗಳು, ಅಧೀನ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸೂಚಿಸಿದೆ. ಈ ಆದೇಶದ ಬೆನ್ನಲ್ಲೇ ಎರಡೂ ಬ್ಯಾಂಕ್‌ಗಳು ಪ್ರತ್ಯೇಕವಾಗಿ ಹೇಳಿಕೆ ನೀಡಿದ್ದು, ಈ ಸಮಸ್ಯೆ ಬಗೆಹರಿಸಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಹಾಗಾಗಿ, ಇದರ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ ಎಂದು ತಿಳಿಸಿವೆ.**

**ಸರಣಿ ವಂಚನೆಯಿಂದ ಈ ಕ್ರಮ**

ಕೆಐಎಡಿಬಿಯು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ರಾಜಾಜಿನಗರ ಶಾಖೆಯಲ್ಲಿ ಒಂದು ವರ್ಷ ಅವಧಿಯ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು 2011ರ ಸೆ.14ರಂದು ಚೆಕ್ ಮೂಲಕ 25 ಕೋಟಿ ಪಾವತಿಸಿತ್ತು. ಅದಕ್ಕೆ ಪ್ರತಿಯಾಗಿ ಅದೇ ಬ್ಯಾಂಕ್‌ನ ಸೇಲಂನ ಶಂಕ್ರಿ, ಬ್ಯಾಂಕ್‌ನಿಂದ 12 ಕೋಟಿ ರು.ಗಳ ನಿಶ್ಚಿತ ಠೇವಣಿಯ ರಸೀದಿ ಹಾಗೂ 13 ಕೋಟಿಯ ಮತ್ತೊಂದು ನಿಶ್ಚಿತ ಠೇವಣಿ ರಸೀದಿ ನೀಡಿತ್ತು. ಅವಧಿ ಮುಕ್ತಾಯದ ನಂತರ 13 ಕೋಟಿ ರು.ಗಳ ಠೇವಣಿಯ ಮೊತ್ತ ನಗದೀರಕರಣವಾಗಿತ್ತು. ಆದರೆ ಎರಡನೇ ಖಾತೆಯ 12 ಕೋಟಿ ರು. ಠೇವಣಿ ಸಂಬಂಧ ಬ್ಯಾಂಕ್ ಅಧಿಕಾರಿಗಳಿಂದ ನಡೆದಿದೆ ಎನ್ನಲಾದ ವಂಚನೆ ಪ್ರಕರಣದಿಂದಾಗಿ ಆ ಮೊತ್ತವನ್ನು ಬ್ಯಾಂಕ್ ಈವರೆಗೆ ಕೆಐಎಡಿಬಿಗೆ ಮರುಪಾವತಿಸಿಲ್ಲ. ಈ ಸಂಬಂಧ ಬ್ಯಾಂಕ್ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ, ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ. ಪ್ರಕರಣವು 10 ವರ್ಷಗಳಿಂದ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಇನ್ನೊಂದು ಪ್ರಕರಣದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಹಿಂದಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವೆನ್ಯೂ ರಸ್ತೆ ಕಚೇರಿಯಲ್ಲಿ 2013ರ ಆಗಸ್ಟ್‌ನಲ್ಲಿ 10 ಕೋಟಿ ನಿಶ್ಚಿತ ಠೇವಣಿ ಮಾಡಿತ್ತು. ಅವಧಿ ಮುಕ್ತಾಯಕ್ಕೂ ಮೊದಲೇ ಬ್ಯಾಂಕ್ ಅಧಿಕಾರಿಗಳಿಂದ ಈ ಠೇವಣಿಗೆ ಸಂಬಂಧಪಟ್ಟ ಹಣವನ್ನು ನಕಲಿ ದಾಖಲೆಗಳ ಆಧಾರದ ಮೇಲೆ ಒಂದು ಖಾಸಗಿ ಕಂಪನಿಯ ಸಾಲಕ್ಕೆ ಹೊಂದಾಣಿಕೆ ಮಾಡಲಾಯಿತು. ಬ್ಯಾಂಕ್ ಜತೆಗೆ ಪತ್ರ ವ್ಯವಹಾರ, ಸಭೆ ನಡೆಸಿದರೂ ಹಣ ಮರುಪಾವತಿಗೆ ಬ್ಯಾಂಕ್ ಒಪ್ಪಿಲ್ಲ. ಈ ಪ್ರಕರಣವೂ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ಈ ಎರಡೂ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಹಾಲೇಖಪಾಲರ ವರದಿಯಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಜತೆಗೆ ಸಂಬಂಧಪಟ್ಟ ಲೆಕ್ಕ ಪರಿಶೋಧನಾ ಕಂಡಿಕೆಗಳನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಿ ಎರಡೂ ಬ್ಯಾಂಕ್‌ಗಳ ಎಲ್ಲ ಶಾಖೆಗಳಲ್ಲೂ ಸರಕಾರದ ಎಲ್ಲ ಸಂಸ್ಥೆಗಳ ಠೇವಣಿ, ಹೂಡಿಕೆ ಹಿಂಪಡೆಯಬೇಕು ಹಾಗೂ ಇನ್ನು ಮುಂದೆ ಯಾವುದೇ ಠೇವಣಿ, ಹೂಡಿಕೆ ಮಾಡದಂತೆ ನಿರ್ಬಂಧಿಸಬೇಕೆಂದು ನಡಾವಳಿಯಲ್ಲಿ ದಾಖಲಿಸಿತ್ತು. ಈ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಿದೆ.

ದೊಡ್ಡದಾಗಿರೋ ಸ್ಟಾಪ್ ಲಾಗ್ ಗೇಟ್‌ನ ಅಳತೆ | ಕಿತ್ತು ಹೋಗಿದ್ದ ತುಂಗಭದ್ರಾ 19ನೇ ಕ್ರಸ್ಟ್ ಗೇಟ್

## ಗೇಟ್ ಅಳವಡಿಕೆ ಕಾರ್ಯ ತಾತ್ಕಾಲಿಕ ಸ್ಥಗಿತ

**ಕೊಪ್ಪಳ:** ಸಾಕಷ್ಟು ಕುತೂಹಲ ಮೂಡಿಸಿದ್ದ, ತುಂಗಭದ್ರಾ ಡ್ಯಾಂನ 'ಸ್ಟಾಪ್ ಲಾಗ್ ಗೇಟ್ ಅಳವಡಿಕೆ ಕಾರ್ಯಾಚರಣೆ ಗುರುವಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ.

ಗೇಟ್ ನ ಅಳತೆ ದೊಡ್ಡದಾದ ಕಾರಣಕ್ಕೆ ಅಳವಡಿಕೆ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಧ್ಯಾಹ್ನದ ವೇಳೆಗೆ 62 ಅಡಿ ಅಗಲ ಮತ್ತು 5 ಅಡಿ ಎತ್ತರದ 2 ಪ್ಲೇಟ್ ಗಳು ಡ್ಯಾಂಗೆ ತರಲಾಗಿತ್ತು. ಜೆಎಸ್ ಡಬ್ಲ್ಯೂ ಕಾರ್ಖಾನೆಯಲ್ಲಿ ಸಿದ್ಧಗೊಂಡ ಎರಡು ಪ್ಲೇಟ್ ಜಲಾಶಯ ತಲುಪುತ್ತಿದ್ದಂತೆಯೇ ರೈತರು ಮತ್ತು ಸಾರ್ವಜನಿಕರು ಸಂತಸಪಟ್ಟಿದ್ದರು. ನಿಗದಿಯಂತೆ ಸಂಜೆ ಸುಮಾರು 4.30ಕ್ಕೆ ಗೇಟ್ ನ ಒಂದು ಭಾಗದ ಅಳವಡಿಕೆ ಕಾರ್ಯಾಚರಣೆ ಆರಂಭಗೊಂಡು, ಕೆಲ ಹೊತ್ತಿನಲ್ಲೇ ಸ್ಥಗಿತಗೊಂಡಿದೆ.

**ವಿಳಂಬ ಸಾಧ್ಯತೆ:** ಕಿತ್ತು ಹೋಗಿರುವ ಗೇಟ್ ಜಾಗದಲ್ಲಿ ಒಟ್ಟು 5 ಪ್ಲೇಟ್ ಮೂಲಕ ತಾತ್ಕಾಲಿಕ ಗೇಟ್ ನಿರ್ಮಾಣ ಮಾಡಬೇಕಿತ್ತು. ಆದರೆ, ನೀರು ಉಳಿಸಿಕೊಂಡೇ ಗೇಟ್ ಅಳವಡಿಕೆ ಕಾರ್ಯಾಚರಣೆ ಆರಂಭಿಸಿದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ 62 ಅಡಿ ಅಗಲ ಮತ್ತು 4 ಅಡಿ ಎತ್ತರದ ಒಟ್ಟು 8 ಪ್ಲೇಟ್ ತಯಾರಿ ಮಾಡಲಾಗಿದೆ. ಕಡಿಮೆ ಸಮಯದಲ್ಲಿ ಗೇಟ್ ಸಿದ್ಧಗೊಳ್ಳಬೇಕು ಎಂಬ ಕಾರಣಕ್ಕೆ ಮೂರು ಕಡೆ ಪ್ಲೇಟ್ ತಯಾರಿ ಮಾಡಿದ್ದು ವಿಶೇಷ. ಆದರೆ, ಇದೀಗ ಜೆಎಸ್‌ಡಬ್ಲ್ಯೂ ನಲ್ಲಿ ತಯಾರಾದ ಗೇಟ್ ನ ಭಾಗಗಳೇ ತಪ್ಪಾದ ಅಳತೆ ಹೊಂದಿದೆ. ಎರಡು ಕಡೆ ಸಿದ್ಧಗೊಳ್ಳುತ್ತಿರುವ 6 ಪ್ಲೇಟ್ ಗಳೂ ಇದೇ ಅಳತೆ ಹೊಂದಿದ್ದರಿಂದ ಕಾರ್ಯಾಚರಣೆ ವಿಳಂಬವಾಗಲಿದೆ.

ತುಂಗಭದ್ರ ಜಲಾಶಯಕ್ಕೆ ತಾತ್ಕಾಲಿಕ ಗೇಟ್ ಅಳವಡಿಕೆ ಕಾರ್ಯಾಚರಣೆ ಗುರುವಾರ ನಡೆಯಿತು.

### ಕ್ರಸ್ಟ್ ಗೇಟ್ ಅಳತೆ ಸಮಸ್ಯೆ

**ಒಟ್ಟು 60 ಅಡಿ ಅಗಲ ಮತ್ತು 20 ಅಡಿ ಎತ್ತರದ ಕ್ರಸ್ಟ್ ಗೇಟ್ ಕಿತ್ತು ಹೋಗಿತ್ತು. ನೀರು ಉಳಿಸಿಕೊಂಡೇ ತಾತ್ಕಾಲಿಕ ಗೇಟ್ ಅಳವಡಿಸಲು ಯೋಜನೆ ರೂಪಿಸಲಾಗಿತ್ತು. ಒಟ್ಟು 48 ಟನ್ ತೂಕದ ಗೇಟ್ ಅನ್ನು ನೀರು ಇರುವಾಗಲೇ ಒಂದೇ ಬಾರಿಗೆ ಅಳವಡಿಕೆ ಮಾಡುವುದು ತಾಂತ್ರಿಕವಾಗಿ ಸವಾಲಾಗಿತ್ತು. ಈ ಹಿನ್ನೆಲೆ ಗೇಟ್ ಅಳತೆಯನ್ನು ನಾಲ್ಕು ಭಾಗವಾಗಿ ವಿಭಾಗಿಸಿ, ಕ್ರೇನ್ ಮೂಲಕ ಅಳವಡಿಕೆ ಮಾಡಲು ಯೋಜಿಸಲಾಗಿತ್ತು. ಅದರಂತೆ ಕನ್ನಯ್ಯ ನಾಯ್ಡು ನೇತೃತ್ವದ ತಂಡದ ಸಲಹೆಯಂತೆ 62 ಅಡಿ ಅಗಲ ಮತ್ತು 4 ಅಡಿ ಎತ್ತರದ 13 ಟನ್ ಭಾರದ 5 ಪ್ಲೇಟ್ ತಯಾರಿಸಿ ಒಂದೊಂದಾಗಿ ಇಳಿಸಿ, ನೀರು ನಿಲ್ಲಿಸಲು ಯೋಜಿಸಲಾಗಿತ್ತು. ಈ ಪೈಕಿ ಜೆಎಸ್ ಡಬ್ಲ್ಯೂ ನಲ್ಲಿ ಸಿದ್ಧಗೊಂಡ 2 ಪ್ಲೇಟ್ ಜಲಾಶಯ ತಲುಪಿದ್ದವು. ಅತ್ಯಂತ ಸವಾಲಿನ ಕೆಲಸವಾಗಿದ್ದ ಗೇಟ್ ನ ಮೊದಲ ಭಾಗದ ಅಳವಡಿಕೆ ಕಾರ್ಯ ಎರಡು ಕ್ರೇನ್ ಗಳ ಮೂಲಕ ಆರಂಭಿಸಿ, ಕೆಲ ಹೊತ್ತಿನಲ್ಲೇ ಕಾರ್ಯಾಚರಣೆ ಸ್ಥಗಿತ ಮಾಡಲಾಯಿತು.**

ಲ್ಯಾಂಡ್ ಬೀಟ್ ಮೊಬೈಲ್ ತಂತ್ರಾಂಶದ ಮೂಲಕ ಗುರುತು: ಕೃಷ್ಣಬೈರೇಗೌಡ

## ರಾಜ್ಯದಲ್ಲಿ ಸರಕಾರಿ ಭೂಮಿ ಒತ್ತುವರಿ ತೆರವು

**ಬೆಂಗಳೂರು:** ರಾಜ್ಯದಲ್ಲಿ ಸರಕಾರಿ ಭೂಮಿ ಒತ್ತುವರಿ ತೆರವಿಗೆ ಕಾರ್ಯಾಚರಣೆ ಆರಂಭಿಸುವುದಾಗಿ ಕಂದಾಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಪ್ರಕಟಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಒಟ್ಟು 1.40 ಕೋಟಿ ಎಕರೆ ಸರಕಾರಿ ಜಮೀನು ಇದ್ದು, ಲ್ಯಾಂಡ್ ಬೀಟ್ ಮೊಬೈಲ್ ತಂತ್ರಾಂಶದ ಮೂಲಕ 91,000 ಎಕರೆ ಜಮೀನು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದೆ. 14.32 ಲಕ್ಷ ಸರಕಾರಿ ಜಮೀನುಗಳ ಪರಿಶೀಲನೆಗೆ ಸೂಚಿಸಿದ್ದು ಈ ಪೈಕಿ 13.04 ಲಕ್ಷ ಜಮೀನುಗಳಿಗೆ ಗ್ರಾಮಲೆಕ್ಕಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ ಎಂದರು.

ಇದರಲ್ಲಿ ಕಂದಾಯ ಇಲಾಖೆಯ 1.93 ಲಕ್ಷ ಜಮೀನುಗಳು ಇದ್ದು, ವಿವಿಧ 20 ಇಲಾಖೆಗಳ ಜಮೀನುಗಳನ್ನೂ ಗುರುತಿಸಲಾಗಿದೆ. ಕೆರೆ ಮತ್ತು ಸ್ಮಶಾನಗಳ ಹೆಚ್ಚುವರಿ ಜವಾಬ್ದಾರಿ ತೆಗೆದುಕೊಂಡು, ಸಮೀಕ್ಷೆ ನಡೆಸಲಾಗಿದೆ. ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಶೇ.80.27 ರಷ್ಟು ಅಂದರೆ 55.638 ಸರಕಾರಿ ಜಮೀನುಗಳ ಪೈಕಿ 48,786 ಆಸ್ತಿಗಳನ್ನು ಲ್ಯಾಂಡ್ ಬೀಟ್ ತಂತ್ರಾಂಶಕ್ಕೆ ಒಳಪಡಿಸಲಾಗಿದೆ. ಆಗಸ್ಟ್ ತಿಂಗಳಿನಿಂದ ಸರ್ವೇಯರ್ ಲಭ್ಯತೆ ನೋಡಿಕೊಂಡು ಒತ್ತುವರಿ ತೆರವು ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಮೀನು ಮಾರಾಟದಲ್ಲಿ ವಂಚನೆ ತಡೆಯಲು ಪಹಣಿ-ಆಧಾರ್ ಜೋಡಣೆ ಕೈಗೊಳ್ಳಲಾಗಿದೆ. ಒಬ್ಬರು ಮೂರ್ನಾಲ್ಕು ದಶಕಗಳಿಂದ ಜಮೀನು ಸಾಗುವಳಿ ಮಾಡುತ್ತಿದ್ದು, ಅದಕ್ಕೆ ಬೇರೆ ವ್ಯಕ್ತಿಗಳು ಭೂಮಂಜೂರಾತಿ ಮಾಡಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದರು.

### ದಾಖಲೆಗಳ ಡಿಜಿಟಲೀಕರಣ

**ಭೂಸುರಕ್ಷಾ ಕರ್ಯಕ್ರಮದಡಿ ಎಲ್ಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ವರ್ಗೀಕರಿಸಿ ಡಿಜಿಟಲೀಕರಣ ಮಾಡಲಾಗಿದೆ. ಈವರೆಗೆ ಒಟ್ಟು 4,43,27,379 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. 31 ತಾಲೂಕುಗಳಲ್ಲಿ ಈ ಯೋಜನೆ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಉಳಿದೆಡೆ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ಒಂದು ವರ್ಷದೊಳಗೆ ರಾಜ್ಯದಲ್ಲಿ ಭೂದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಇದರಿಂದ ಸಾರ್ವಜನಿಕರಿಗೆ ದಾಖಲೆಗಳನ್ನು ಒದಗಿಸುವುದರ ಜತೆಗೆ, ದಾಖಲೆಗಳ ತಿರುಚುವಿಕೆ, ದಾಖಲೆಗಳ ನಾಪತ್ತೆ ಮೊದಲಾದವುಗಳನ್ನು ತಡೆಯಬಹುದು ಎಂದು ತಿಳಿಸಿದರು.**

**ಸಮಾಜದ ಸಂಪತ್ತು ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವಲ್ಲಿ ಬದ್ಧವಾಗಿದೆ. ಬಡವರು ದುಡಿದ ಹಣವನ್ನು ಶ್ರೀಮಂತರ ಜೇಬಿಗೆ ತುರುಕದೆ ಅವರ ಹಣವನ್ನು ಅವರಿಗೇ ನೀಡಲು ರಾಜ್ಯ ಕಾಂಗ್ರೆಸ್ ಸರಕಾರ ಮಹತ್ವದ 5 ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಹಸಿವು ಮುಕ್ತ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು 10 ಕೆಜಿ. ಆಹಾರಧಾನ್ಯ ಉಚಿತ -5 ಕೆಜಿ. ಅಕ್ಕಿ ಬದಲಿಗೆ 170 ರು. ನಗದವನ್ನು ಡಿಬಿಟಿ ಮೂಲಕ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುತ್ತಿದೆ.**

-ಕೃಷ್ಣ ಬೈರೇಗೌಡ ಸಚಿವ

ಗೋಕರ್ಣದ ಅಶೋಕೆಯಲ್ಲಿ ನಡೆಯುತ್ತಿರುವ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಅನಾವರಣ ಚಾತುರ್ಮಾಸ್ಯದ 26ನೇ ದಿನವಾದ ಗುರುವಾರ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಿದ್ದಾಪುರದ ಸ್ವಾತಂತ್ರ್ಯಯೋಧರ ವೀರಗಾಥೆಗಳ ಅನಾವರಣ ನಡೆಯಿತು.

## ವಿಜಯೇಂದ್ರ ಜತೆ ಹೊಂದಾಣಿಕೆ ಇಲ್ಲ

ಬೆಳಗಾವಿಯಲ್ಲಿ ಬಿಜೆಪಿ ನಾಯಕರ ಸಭೆಯಲ್ಲಿ ಕಾಂಗ್ರೆಸ್ ಸರಕಾರದ ಹಗರಣಗಳ ಕುರಿತು ಯಾವಾಗ ಪಾದಯಾತ್ರೆ ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ. ಇದಕ್ಕಾಗಿ ನಮ್ಮದೇ ಒಂದು ಕೋರ್ ಸಮಿತಿ ಮಾಡಿಕೊಂಡಿದ್ದೇವೆ ಎಂದು ಬಿಜೆಪಿ ಭಿನ್ನಮತೀಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮದು ಬಿಜೆಪಿ ಬಂಡಾಯ ಎಂದು ಯಾರೂ ಸುದ್ದಿ ಮಾಡಬೇಡಿ. ಕೈಮುಗಿದು ಹೇಳ್ತಿದ್ದೇನೆ ಎಂದು ಮನವಿ ಮಾಡಿದರು. ಪಾದಯಾತ್ರೆ ಬಗ್ಗೆ ನಾನು ಹೇಳಿಕೆ ನೀಡಬಾರದು ಎಂದು ನಾವು ನಿರ್ಧರಿಸಿದ್ದೇವೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಸಭೆಯಲ್ಲಿ ಭಾಗಿಯಾದವರೇ ವಿವರ ನೀಡುತ್ತಾರೆ ಎಂದರು.

**ವರಿಷ್ಠರು ಸಮ್ಮತಿಸಿದರೆ ಪಾದಯಾತ್ರೆ:** ಕೇಂದ್ರ ಹೈಕಮಾಂಡ್ ಅನುಮತಿ ನೀಡಿದರೆ ನಾವು ಪಾದಯಾತ್ರೆ ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಮೀಟಿಂಗ್ ಮಾಡಿ ಕೇಂದ್ರ ನಾಯಕರಿಂದ ಅನುಮತಿ ಕೇಳುತ್ತೇವೆ. ವಿಜಯೇಂದ್ರ ಜತೆ ಯತ್ನಾಳ ಅವರ ಹೊಂದಾಣಿಕೆ ಮಾಡಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬ ಪ್ರಶ್ನೆಗೆ ಇಲ್ಲ, ನಾನು ಯಾವುದೇ ಹೊಂದಾಣಿಕೆ ಆಗಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

### ತನಿಖೆ ಮಾಡಿಸಬೇಕಿತ್ತು

**ದೇವೇಗೌಡರ ಪತ್ನಿ ಹೆಸರಲ್ಲಿ ಕೆರೆ ಒತ್ತುವರಿ ವಿಚಾರದ ಕುರಿತ ಪ್ರಶ್ನೆಗೆ ಉತ್ತರಿಸಿದ ಯತ್ನಾಳ, 1974 ರಲ್ಲಿ ನಡೆದಿದ್ದೇ ಆದ್ರೆ ಈಗೇಕೆ ಹೊರಬಂದಿದೆ. ಇಷ್ಟು ದಿನ ಏನು ಮಾಡುತ್ತಿದ್ದರು. ಯಡ್ಡಿಯೂರಪ್ಪ ಸರಕಾರ ಇತ್ತು, ಕಾಂಗ್ರೆಸ್ ಸರಕಾರ ಇತ್ತು ಆಗ ಏಕೆ ಇದನ್ನು ತನಿಖೆ ಮಾಡಿಸಲಿಲ್ಲ. ತನಿಖೆ ಮಾಡಿಸಿ ತಪ್ಪಿದ್ರೆ ಶಿಕ್ಷೆ ಕೊಡಿಸಬೇಕಿತ್ತು ಎಂದು ಯತ್ನಾಳ ಕಿಡಿಕಾರಿದರು.**

## ಜಮೀನು ತೆರವು; ಫಲ ಭೂಮಿ ಸವಕಳಿನತ್ತ

← ಮೊದಲಪುಟದಿಂದ

ಒತ್ತುವರಿಯಾಗಿರುವ ಜಾಗದ ಕೃಷಿ ಬೆಳೆಗಳನ್ನೆಲ್ಲ ತೆರವುಗೊಳಿಸಿ, ಬೋಳು ಭೂಮಿ ಬಿಡುವ ಬದಲು, ಅರಣ್ಯಾಧಿಕಾರಿಗಳು ಬೇಲಿ ಹಾಕಿ ತಮ್ಮ ಸುಪರ್ದಿಯಲ್ಲಿ ಈ ಜಾಗವನ್ನು ಇಟ್ಟುಕೊಳ್ಳಲಿ. ಕೋರ್ಟ್‌ನಲ್ಲಿ ಇತ್ಯರ್ಥವಾದ ಬಳಿಕ ಮುಂದಿನ ಕ್ರಮವಹಿಸಲಿ ಎನ್ನುವುದು ಹಲವು ರೈತರ ಆಗ್ರಹವಾಗಿದೆ.

ಈ ರೀತಿ ಮಾಡದೇ ತೆರವುಗೊಳಿಸಲು ಹೋದ ಕೂಡಲೇ ಇಡೀ ಜಮೀನಿನಲ್ಲಿ ಮರ-ಗಿಡಗಳನ್ನು ತೆರವುಗೊಳಿಸಿ ಖಾಲಿ ಬಿಟ್ಟರೆ ಮಣ್ಣು ಸವಕಲು ಆರಂಭವಾಗುತ್ತದೆ. ಇದರಿಂದ ಭೂಕುಸಿತವಾಗುವ ಸಾಧ್ಯತೆಯೂ ಇರುತ್ತದೆ. ಭೂ ಕುಸಿಯಬಾರದು ಎನ್ನುವ ಕಾರಣಕ್ಕೆ, ತೆರವುಗೊಳಿಸಲು ಹೋಗಿ ಪರೋಕ್ಷವಾಗಿ ಭೂ ಕುಸಿತವಾಗಲು ಅಧಿಕಾರಿಗಳೇ ಕಾರಣವಾಗಬಾರದು ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

**ಖಾಲಿ ಬಿಟ್ಟರೆ ಸವಕಲು ಹೆಚ್ಚಳ:** ತಜ್ಞರ ಪ್ರಕಾರ ಕಾಫಿ ಪ್ಲಾಂಟೇಶನ್‌ಗಳಿಂದ ಭೂಮಿಯ ಸವಕಲು ನಿಯಂತ್ರಣದಲ್ಲಿರುತ್ತದೆ. ಗುಡ್ಡಗಾಡು ಪ್ರದೇಶದಲ್ಲಿರುವ ಕಾಫಿ ಪ್ಲಾಂಟ್‌ಗಳನ್ನು ಒತ್ತುವರಿ ಭೂಮಿ ಎಂದು ಪ್ಲಾಂಟೇಷನ್‌ಗಳನ್ನು ತೆರವುಗೊಳಿಸಿ, ಇಳಿಜಾರು ಪ್ರದೇಶವನ್ನು ಖಾಲಿ ಬಿಟ್ಟರೆ, ಅಲ್ಲಿ ಸವಕಲು ಹೆಚ್ಚಾಗುತ್ತದೆ. ರಾಜ್ಯ ಬಹುಭಾಗದಲ್ಲಿ ತೆರವುಗೊಳಿಸುವಾಗ ಅರಣ್ಯಾಧಿಕಾರಿಗಳಿಗೆ ಇರುವ 'ಉತ್ಸಾಹ' ತೆರವುಗೊಂಡ ಜಾಗದಲ್ಲಿ ಸಸಿಗಳನ್ನು ನೆಟ್ಟು, ಪೋಷಿಸುವ ವೇಳೆ ಇರುವುದಿಲ್ಲ. ಆದ್ದರಿಂದ ರೈತರ ಜಮೀನನ್ನು ತೆರವುಗೊಳಿಸುವ ಮೊದಲು, ಕನಿಷ್ಠ ಎಚ್ಚರವನ್ನಾದರೂ ಅಧಿಕಾರಿಗಳು ವಹಿಸಬೇಕು ಎನ್ನುವುದು ರೈತರ ಆಗ್ರಹವಾಗಿದೆ.

## ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲಲ್ಲ

← ಮೊದಲಪುಟದಿಂದ

ಪಂಚ ಗ್ಯಾರಂಟಿ ಯೋಜನೆಗಳಿಂದ ಮಾಸಿಕ ಸರಾಸರಿ 4,000-5,000 ರು.ಗಳಷ್ಟು ಪ್ರತಿ ಫಲಾನುಭವಿ ಕುಟುಂಬಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಲಭಿಸುತ್ತಿದೆ. ಇದು ಹಲವು ಕಾರಣಗಳಿಂದ ಸಂಕಷ್ಟದಲ್ಲಿರುವ ಕುಟುಂಬಗಳಿಗೆ ನೇರ ಆರ್ಥಿಕ ನೆರವು ನೀಡುವ ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆ. ಮುಂದುವರಿದ ರಾಷ್ಟ್ರಗಳಲ್ಲಿ ಆರ್ಥಿಕವಾಗಿ ಅಶಕ್ತ ವರ್ಗಗಳಿಗೆ ನೆರವಾಗಲು ಜಾರಿಗೊಳಿಸಲಾಗುತ್ತಿರುವ ಇಂತಹ ಯೋಜನೆಯೊಂದನ್ನು ಅತಿ ದೊಡ್ಡಮಟ್ಟದಲ್ಲಿ ಸಾಕಾರಗೊಳಿಸುತ್ತಿರುವ ರಾಜ್ಯ ಕರ್ನಾಟಕ. ಈ ಬಗ್ಗೆ ನಮಗೆ ಹೆಮ್ಮೆ ಇದೆ. ಈ ಯೋಜನೆಗಳು ಮುಂದುವರಿಯಲಿವೆ. ಮಾತ್ರವಲ್ಲ, ಈ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಭವಿಷ್ಯ ನುಡಿದವರಿಗೆ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಿ ತೋರಿಸುವ ಮೂಲಕ ನಾವು ಉತ್ತರಿಸಲಿದ್ದೇವೆ ಎಂದು ತಿರುಗೇಟು ನೀಡಿದರು.

**ಕೇಂದ್ರದ ವಿರುದ್ಧ ವಾಗ್ದಾಳಿ:** ಇದೇ ವೇಳೆ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ ಮುಖ್ಯಮಂತ್ರಿಗಳು, ಕೇಂದ್ರ ಸರಕಾರದಿಂದ ಜನಕಲ್ಯಾಣ ಯೋಜನೆಗಳಿಗೆ ಅನುದಾನ ನೀಡುವ ಆಶಯದಿಂದ ದೂರ ಸರಿಯುತ್ತಿರುವುದರಿಂದ ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗುತ್ತಿದೆ. ಸಂವಿಧಾನದ ಆಶಯಗಳನ್ನು ನಿರ್ಲಕ್ಷಿಸಿ, ರಾಜ್ಯಗಳಿಗೆ ದೊರೆಯಬೇಕಾದ ಹಣಕಾಸಿನ ಪಾಲನ್ನು ನೀಡಲು ಮೀನಾಮೇಷ ಎಣಿಸಲಾಗುತ್ತಿದೆ. ಕೇಂದ್ರದಿಂದ ನ್ಯಾಯಯುತವಾಗಿ ಬರಬೇಕಾದ ಪರಿಹಾರದ ಮೊತ್ತ ಪಡೆಯಲು ನ್ಯಾಯಾಲಯದ ಮೊರೆ ಹೋಗುವ ಅನಿವಾರ್ಯತೆ ಎದುರಾಗಿರುವುದು ಜನಹಿತಕ್ಕೆ ಒಳ್ಳೆಯದಲ್ಲ ಎಂದು ಕಿಡಿಕಾರಿದರು.

ಜನತೆಯ ತೀರ್ಪನ್ನು ಧಿಕ್ಕರಿಸಿ ನಡೆಸುವ ಹಿಂಬಾಗಿಲ ರಾಜಕಾರಣವನ್ನು ಇತಿಹಾಸದಲ್ಲಿ ಜನತೆ ಎಂದಿಗೂ ಕ್ಷಮಿಸಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಡಿನ ಮಹಾ ಜನತೆ ನೀಡಿದ ತೀರ್ಪನ್ನು ಗೌರವಿಸಿ, ಸಂವಿಧಾನದ ಆಶಯಗಳ ಪ್ರಕಾರ ಪ್ರತಿಪಕ್ಷಗಳು ಜವಾಬ್ದಾರಿಯುತವಾಗಿ ನಡೆಯಬೇಕೆಂಬುದನ್ನು ಎಲ್ಲರೂ ನಿರೀಕ್ಷಿಸುತ್ತಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ರಾಜಕೀಯ ಪ್ರಬುದ್ಧತೆ ಮೆರೆದಿರುವ ಮತದಾರರು, ಪ್ರಜಾಪ್ರಭುತ್ವ ಯಾರ ಕೈಗೊಂಬೆಯಾಗಲು ಸಾಧ್ಯವಿಲ್ಲ ಎಂಬ ಎಚ್ಚರಿಕೆ ನೀಡಿದರು.

**ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ**
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001
:+91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com
ಸಂ.ಸರಬ/ವಿವ/ಬೆಆ/198/2023-24 ದಿನಾಂಕ:09.08.2024

**ಅಲ್ಪಾವಧಿ ಮರು-ಟೆಂಡರ್ ಅಧಿಸೂಚನೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಚೆಲುವಾಂಬ ಆಸ್ಪತ್ರೆಗೆ ಅವಶ್ಯಕತೆಯಿರುವ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ 01 ವರ್ಷದ ಅವಧಿಗೆ ಅಥವಾ ಮುಂದಿನ ಅದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ) ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಮರು-ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಮೂಲಕ **ದಿನಾಂಕ 13.08.2024** ರಿಂದ ಪಡೆಯಬಹುದಾಗಿದ್ದು, **ದಿನಾಂಕ:27.08.2024** ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ. ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

**ಸಹಿ/-ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.**
DIPR/DDMYS-410/KSMCA-281/2024-25

**ನಗರಸಭಾ ಕಾರ್ಯಾಲಯ, ಚಳ್ಳಕೆರೆ.(ಚಿತ್ರದುರ್ಗ ಜಿಲ್ಲೆ)**
ಫೋ ನಂ. 08195-250958 ka.challakere.cmc@gmail.com
ಸಂಖ್ಯೆ: ಚ.ನ/ತಾಂತ್ರಿಕ/ಎಸ್.ಎಫ್.ಸಿ 2024-25, 2024-25ನೇ ನ.ನಿ/ಟೆಂಡರ್-01/ ಸಿ.ಆರ್ 01/2024-25 ದಿನಾಂಕ: 14/08/2024

**ಟೆಂಡರ್ ಪ್ರಕಟಣೆ**

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಎಸ್.ಎಫ್.ಸಿ ಬಂಡವಾಳ ಸೃಜನೆಗಾಗಿ ಅನುದಾನದಲ್ಲಿ, 2024-25ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ, 2022-23ನೇ ಸಾಲಿನ ಎಸ್.ಎಫ್.ಸಿ 5% ಅನುದಾನದಡಿಯಲ್ಲಿ, 2021-22/2022-23/2023-24 ನೇ ಸಾಲಿನ ನಗರಸಭಾ ಶೇ. 5ರ ಅನುದಾನ ಮತ್ತು 2023-24ನೇ ಸಾಲಿನ ಎಸ್.ಎಫ್.ಸಿ ಶೇ. 5ರ ಅನುದಾನ, 2022-23ನೇ ಸಾಲಿನ ನಗರಸಭಾ ಶೇ 7.25 ಅನುದಾನದಲ್ಲಿ, 2023-24ನೇ ಸಾಲಿನ ನಗರಸಭಾ ಟಿ.ಎಸ್.ಪಿ ಅನುದಾನ ಮತ್ತು ನಗರಸಭಾ ನಿಧಿ ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ-2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1/KW-2/KG-1/KG-2/KC-8 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಏಜೆನ್ಸಿದಾರರು/ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in)ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ: 04/09/2024 ರ ಸಂಜೆ 5.00 ಗಂಟೆವರೆಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

www.challakerecity.mrc.gov.in ಮತ್ತು https://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

**INDENT NUMBER:- (1)** DMA/2024-25/RD/WORK_INDENT25677, ESTIMATED AMOUNT (in lakhs):-27.16 **(2)** DMA/2024-25/WS/WORK_INDENT26263, ESTIMATED AMOUNT (in lakhs):-35.00 **(3)** DMA/2023-24/OW/WORK_INDENT4449/CALL-6, ESTIMATED AMOUNT (in lakhs):-1.47 **(4)** DMA/2023-24/IND1489, ESTIMATED AMOUNT (in lakhs):-41.77 **(5)** DMA/2023-24/IND0807/CALL-4, ESTIMATED AMOUNT (in lakhs):-2.80 **(6)** DMA/2024-25/SE3363, ESTIMATED AMOUNT (in lakhs):-86.50 **(7)** DMA/2024-25/OW/WORK_IND15209/CALL-2, ESTIMATED AMOUNT (in lakhs):-12.17

RO.No.192:DIPR/CTA/KSMCA/2024-25
ಸಹಿ/- ಪೌರಾಯುಕ್ತರು, ನಗರಸಭೆ, ಚಳ್ಳಕೆರೆ

**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

**ಟೆಂಡರ್‌ಗಾಗಿ ಆಹ್ವಾನ** (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಯಿಂದ ದ್ವಿ-ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

**ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560 009.**

| ಕ್ರ ಸಂ. | ಕಾಮಗಾರಿಗಳ ಹೆಸರು | ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ |
|---|---|---|
| | ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಪೂ)/ಅಮುಅ (ಪೂ)-I/ಉಮುಅ (ಎಂ)-I ತಾಂಸ(ಪೂ)/2720/2024-25 ದಿನಾಂಕ: 14.08.2024 | |
| 1. | ಸಕಾನಿಅ (ಪೂರ್ವ-2-1) ಉಪ-ವಿಭಾಗಕ್ಕೆ ಸಂಬಂಧಿಸಿದ ಹೆಣ್ಣೂರು 80 ಅಡಿ ಮುಖ್ಯರಸ್ತೆಯಲ್ಲಿ ಹೆಣ್ಣೂರು ಜಂಕ್ಷನ್ ಹೊರ ವರ್ತುಲ ರಸ್ತೆಯಿಂದ ಲಿಂಗರಾಜಪುರಂ ಮೇಲ್ಸೇತುವೆ ಮತ್ತು ಕಮ್ಮನಹಳ್ಳಿ ರಸ್ತೆಯವರೆಗೆ: ಐಓಸಿ ಮೇಲ್ಸೇತುವೆಯಿಂದ ಹೊರವರ್ತುಲ ರಸ್ತೆಯವರೆಗೆ 200ಮಿಮೀ ವ್ಯಾಸ, 150ಮಿಮೀ ವ್ಯಾಸ ಡಿಐ ಹಾಗೂ 100ಮಿಮೀ ವ್ಯಾಸದ ಡಿಐ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. | ₹ 320.5 ಲಕ್ಷಗಳು / ₹ 5.67 ಲಕ್ಷಗಳು |
| 2. | ಸಕಾನಿಅ (ಪೂರ್ವ-2-2) ಉಪ-ವಿಭಾಗದಡಿಯಲ್ಲಿ ಬರುವ ಬಾಣಸವಾಡಿ ಸೇವಾಠಾಣೆಗೆ ಸಂಬಂಧಿಸಿದ ನೆಹರು ರಸ್ತೆಯಿಂದ ಕುಳ್ಳಪ್ಪ ವೃತ್ತದವರೆಗೆ 400ಮಿಮೀ ವ್ಯಾಸದ ಎಂಎಸ್, 300, 200, 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ ಹಾಗೂ ಹೆಣ್ಣೂರು ಜಂಕ್ಷನ್ ಹೊರವರ್ತುಲ ರಸ್ತೆಯಿಂದ ಲಿಂಗರಾಜಪುರಂ ಮೇಲ್ಸೇತುವೆವರೆಗೆ 150ಮಿಮೀ ಮತ್ತು 100ಮಿಮೀ ವ್ಯಾಸದ ನೀರು ಸರಬರಾಜು ಕೊಳವೆ ಡಿಐ ಕೊಳವೆಮಾರ್ಗಗಳನ್ನು ಬಳಸಿ ಸಿಐ ಕೊಳವೆಮಾರ್ಗಗಳನ್ನು ಬದಲಾಯಿಸುವ ಕಾಮಗಾರಿಗೆ ಅಂದಾಜುಪಟ್ಟಿ. | ₹ 297.60 ಲಕ್ಷಗಳು / ₹ 5.26 ಲಕ್ಷಗಳು |
| 3. | ಸಕಾನಿಅ (ಪೂರ್ವ-2-2) ಉಪ-ವಿಭಾಗದ ಬಾಣಸವಾಡಿ ಮತ್ತು ಲಿಂಗರಾಜಪುರ ಸೇವಾಠಾಣೆಗೆ ಸಂಬಂಧಿಸಿದ ಐಓಸಿ ಮೇಲ್ಸೇತುವೆಗೆ ಸಂಬಂಧಿಸಿದಂತೆ 450ಮಿಮೀ ವ್ಯಾಸದ ಎಂಎಸ್, 200ಮಿಮೀ ಮತ್ತು 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. | ₹ 344.17 ಲಕ್ಷಗಳು / ₹ 6.09 ಲಕ್ಷಗಳು |
| 4. | ಸಕಾನಿಅ (ಪೂರ್ವ-2-1) ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಹೆಣ್ಣೂರು 80 ಅಡಿ ಮುಖ್ಯ-ರಸ್ತೆಯಲ್ಲಿ ಹೆಣ್ಣೂರು ಜಂಕ್ಷನ್ ಹೊರವರ್ತುಲ ರಸ್ತೆಯಿಂದ ಲಿಂಗರಾಜಪುರಂ ಮೇಲ್ಸೇತುವೆ-ವರೆಗೆ 600ಮಿಮೀ ವ್ಯಾಸದ ಎಂಎಸ್ ಕೊಳವೆಮಾರ್ಗ, 300ಮಿಮೀ ವ್ಯಾಸದ ಡಿಐ ನೀರು ಸರಬರಾಜು ಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. | ₹ 387.00 ಲಕ್ಷಗಳು / ₹ 6.85 ಲಕ್ಷಗಳು |
| 5. | ಸಕಾನಿಅ (ಪೂರ್ವ-2-2) ಉಪ-ವಿಭಾಗದ ಲಿಂಗರಾಜಪುರ ಸೇವಾಠಾಣೆಗೆ ಸಂಬಂಧಿಸಿದ ಹೆಣ್ಣೂರು ಜಂಕ್ಷನ್ ಹೊರವರ್ತುಲ ರಸ್ತೆಯಿಂದ ಲಿಂಗರಾಜಪುರಂ ಮೇಲ್ಸೇತುವೆವರೆಗೆ 600ಮಿಮೀ ಎಂಎಸ್, 300ಮಿಮೀ ಎಂಎಸ್ ನೀರು ಸರಬರಾಜು ಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. | ₹ 385.12 ಲಕ್ಷಗಳು / ₹ 6.81 ಲಕ್ಷಗಳು |

ಈ ಮೇಲ್ಕಂಡ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ **02.09.2024**ರ ಮಧ್ಯಾಹ್ನ **3:00** ಗಂಟೆಯವರೆಗೆ. ಬಿಡ್‌ಗಳನ್ನು ದಿನಾಂಕ **04.09.2024**ರ ಸಂಜೆ **4:00** ಗಂಟೆಯ ನಂತರ ತೆರೆಯಲಾಗುವುದು.

**ಸಹಿ/-**
**ಮುಖ್ಯ ಅಭಿಯಂತರರು (ಪೂರ್ವ)**

**ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.**

ಡಿ.ಐ.ಪಿ.ಆರ್/ಸ್ಪೆಕ್ಟ್ರಮ್/1468a/2024-25

## ಟ್ವೀಟೂ-ಖಾರಾ

**ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವರು

**ಕರ್ನಾಟಕ ಲೋಕಸೇವಾ ಆಯೋಗ ಈ ತಿಂಗಳ 27ರಂದು 2023-24ರ ಕೆಎಎಸ್ ಪೂರ್ವಭಾವಿ ಪರೀಕ್ಷೆ ನಡೆಸಲು ಎಲ್ಲಿಲ್ಲದ ತರಾತುರಿ ನಡೆಸುತ್ತಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ವಿಶೇಷ ಚೇತನ ಆಕಾಂಕ್ಷಿಗಳ ಹಿತದೃಷ್ಟಿಯಿಂದ ಪರೀಕ್ಷೆಯನ್ನು ಮುಂದಕ್ಕೆ ಹಾಕಿ ಮತ್ತೊಂದು ದಿನಾಂಕ ನಿಗದಿ ಮಾಡಬೇಕೆಂದು ಅಭ್ಯರ್ಥಿಗಳು ಮನವಿ ಮಾಡುತ್ತಿದ್ದರೂ ಕೆಪಿಎಸ್‌ಸಿ ಹಠಕ್ಕೆ ಬಿದ್ದಿರುವುದು ಸರಿಯಲ್ಲ.**

**ನಿಷ್ಕಾಮ ಕರ್ಮ,** ವಿಶ್ಲೇಷಕ

**ಧನ್ಯವಾದಗಳು ಕುಮಾರಣ್ಣ ವಿದ್ಯಾರ್ಥಿಗಳ ಪರ ಧ್ವನಿ ಎತ್ತಿರುವುದಕ್ಕೆ. ಕೆಪಿಎಸ್‌ಸಿ ಜಿದ್ದಾಜಿದ್ದಿಗೆ ಬಿದ್ದಂತೆ ವರ್ತಿಸುತ್ತಿರುವುದಕ್ಕೆ ಮತ್ತು ಯಾರ್‍ಯಾರು ಇದರ ಹಿಂದೆ ಇದ್ದಾರೆ ಎಂಬುದು ನಿಮಗೆ ತಿಳಿದಿದೆ. ಒಂದು ಪತ್ರಿಕಾಗೋಷ್ಠಿ ನಡೆಸಿ ಎಲ್ಲವನ್ನೂ ಬಹಿರಂಗಗೊಳಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಿ, ಕೆಪಿಎಸ್‌ಸಿಗೆ ಮೂಗುದಾರ ಹಾಕಿ.**

## ಸಮಾಚಾರ ಸಣ್ಣದಲ್ಲ

### ಎಲ್ಲ ಪ್ರಕರಣ ಸಿಬಿಐ ತನಿಖೆಯಾಗಲಿ



**ಯಾದಗಿರಿ:** ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲ ಪ್ರಕರಣಗಳನ್ನು ಸಿಬಿಐಗೆ ಕೊಡುವಂತೆ ನಿರ್ಣಯ ಕೈಗೊಳ್ಳುವಂತೆ ಸಚಿವ ಶರಣ ಬಸಪ್ಪ ದರ್ಶನಾಪುರ, ಪ್ರತಿಪಕ್ಷಗಳಿಗೆ ಸವಾಲು ಹಾಕಿದ್ದಾರೆ. ಪಿಎಸ್‌ಐ ಪರಶುರಾಮ ಸಾವಿನ ಪ್ರಕರಣ ಸಿಬಿಐ ತನಿಖೆಗೆ ಕೊಡುವಂತೆ ವಿರೋಧ ಪಕ್ಷಗಳ ಆಗ್ರಹದ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಪ್ರತಿಪಕ್ಷಗಳು ಸಿಐಡಿ ಬೇಡ ಅಂತ ನಿರ್ಣಯ ಕೈಗೊಳ್ಳಲಿ. ಆ ನಂತರ ಸಿಬಿಐಗೆ ಕೊಡೋಕೆ ನಾವು ಸಿದ್ಧರಾಗಿದ್ದೇವೆ ಎಂದರು. ಮೃತ ಪರಶುರಾಮ್ ಕುಟುಂಬಕ್ಕೆ ಸಾಂತ್ವನ ಹೇಳದ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ದರ್ಶನಾಪುರ, ಅಂದು ನನಗೆ ಬರಲು ಆಗಲಿಲ್ಲ. ಅದಾದ ನಂತರದ ದಿನ ಅವರ ಕುಟುಂಬಸ್ಥರು ಊರಲ್ಲಿ ಇರಲಿಲ್ಲ. ಅವರು ಕೊಪ್ಪಳದಲ್ಲಿ ಇದಾರೋ ಇಲ್ಲ, ಇನ್ನೊಂದು ಕಡೆ ಇದ್ದಾರೋ ಎಂದು ತಿಳಿಯಲಿಲ್ಲ. ಆ.7 ರಂದು ನಮ್ಮ ಗೃಹ ಸಚಿವರು ಭೇಟಿಯಾಗಿದ್ದಾರೆ ಎಂಬ ಹಾರಿಕೆ ಉತ್ತರ ನೀಡಿದರು.

### ಅಗಲಿದ ಜೀವ

#### ಮಾಜಿ ಶಾಸಕ ಎ.ಎಸ್.ಬಸವರಾಜು

**ಬೆಂಗಳೂರು:** ಅರಸೀಕೆರೆ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎ.ಎಸ್. ಬಸವರಾಜು (75) ಅವರು ಅನಾರೋಗ್ಯದಿಂದ ಗುರುವಾರ ನಿಧನರಾಗಿದ್ದಾರೆ. ಮಾಜಿ ಶಾಸಕ ಎ.ಎಸ್. ಬಸವರಾಜು ಕಳೆದ ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ನಿಧರಾಗಿದ್ದಾರೆ. ಶುಕ್ರವಾರ ಅರಸೀಕೆರೆ ಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. 2004-2007 ರವರೆಗೆ ಬಿಜೆಪಿಯಿಂದ ಶಾಸಕರಾಗಿ ಆಯ್ಕೆಯಾಗಿ ದ್ದರು. 1999ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ, ಕಾಂಗ್ರೆಸ್‌ನ ಜಿ.ವಿ.ಸಿದ್ದಪ್ಪ ಅವರ ವಿರುದ್ಧ ಸೋಲು ಕಂಡಿದ್ದರು. ಇನ್ನೂ ಅವರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಆಪ್ತರಾಗಿದ್ದರು. ಪಕ್ಷ ನಿಷ್ಠರು ಮಾತ್ರ ವಲ್ಲದೇ ಸಂಘ ನಿಷ್ಠರಾಗಿಯೂ ಬಸವರಾಜು ತಮ್ಮದೇ ವ್ಯಕ್ತಿತ್ವ ಮೈಗೂಡಿಸಿ ಕೊಂಡಿದ್ದರು. ಮೃತರ ನಿಧನಕ್ಕೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಹಾಗೂ ವಿವಿಧ ಪಕ್ಷಗಳ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಪ್ರತಿ ಶುಕ್ರವಾರ
ಸೀನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

{ಲಕ್ಷ್ಮೀ ಹೆಬ್ಬಾಳ್ಕರ್} ಸಚಿವೆ

**ಕರಾವಳಿ ಭಾಗದಲ್ಲಿ ಉದ್ಯೋಗ ಸೃಷ್ಟಿಸುವ ಪ್ರಮುಖ ವಲಯಗಳಲ್ಲಿ ಒಂದಾದ ಪ್ರವಾಸೋದ್ಯಮದ ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಟಿಸಲು ಸರಕಾರ ಬದ್ಧವಾಗಿದೆ. ಪ್ರವಾಸೋದ್ಯಮ ನೀತಿ 2024-29ರ ಮೂಲಕ ಪ್ರವಾಸೋದ್ಯಮ ವಲಯದಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸಲು ಸಹಾಯ ಧನ ಒದಗಿಸಲಾಗುವುದು.**

ಕೇಂದ್ರ ಸರಕಾರದ ವಿರುದ್ಧ ಮತ್ತೆ ಕಿಡಿಕಾರಿದ ಸಿದ್ದರಾಮಯ್ಯ | ಹಂತಹಂತವಾಗಿ ಖಾಲಿ ಹುದ್ದೆಗಳು ಶೀಘ್ರ ಭರ್ತಿ

# ಹಿಂಬಾಗಿಲ ರಾಜಕಾರಣವನ್ನು ಜನ ಒಪ್ಪಲ್ಲ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಇತ್ತೀಚಿನ ದಿನದಲ್ಲಿ ಕೇಂದ್ರ ಸರಕಾರದ ವಿರುದ್ಧ ಪ್ರತಿ ಹಂತದಲ್ಲಿಯೂ ವಾಗ್ದಾಳಿ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 78ನೇ ಸ್ವಾತಂತ್ರ್ಯ ದಿನಾಚರಣೆ ವೇಳೆಯೂ ಕೇಂದ್ರ ಸರಕಾರದ ಹಲವು ಕ್ರಮದ ವಿರುದ್ಧ ಕಿಡಿಕಾರಿದರು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧವನ್ನು ಸಂವಿಧಾನ ಸ್ಪಷ್ಟಪಡಿಸಿದೆ. ಜನಕಲ್ಯಾಣ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು ರಾಜ್ಯಗಳ ಜವಾಬ್ದಾರಿಯಾಗಿದ್ದು, ಅವುಗಳಿಗೆ ಪೂರಕವಾಗಿ ಸಂಪನ್ಮೂಲ ಒದಗಿಸುವುದು ಕೇಂದ್ರದ ಹೊಣೆಗಾರಿಕೆ ಎಂದು ಅಭಿಪ್ರಾಯ ಪಟ್ಟರು.

ಆದರೆ ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರಕಾರ ಈ ಆಶಯದಿಂದ ದೂರ ಸರಿಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗುತ್ತಿದೆ. ಸಂವಿಧಾನದ ಆಶಯಗಳನ್ನು ನಿರ್ಲಕ್ಷಿಸಿ, ರಾಜ್ಯಗಳಿಗೆ ದೊರೆಯಬೇಕಾದ ಹಣಕಾಸಿನ ಪಾಲನ್ನು ನೀಡಲು ಮೀನಾಮೇಷ ಎಣಿಸಲಾಗುತ್ತಿದೆ. ಕೇಂದ್ರದಿಂದ ನ್ಯಾಯಯುತವಾಗಿ ಬರಬೇಕಾದ ಪರಿಹಾರದ ಮೊತ್ತ ಪಡೆಯಲು ನ್ಯಾಯಾಲಯದ ಮೊರೆ ಹೋಗುವ ಅನಿವಾರ್ಯತೆ ಎದುರಾಗಿರುವುದು ಜನಹಿತಕ್ಕೆ ಒಳ್ಳೆಯದಲ್ಲ. ಮುಂದಿನ ದಿನಗಳಲ್ಲಾದರೂ ಕೇಂದ್ರ ಸರಕಾರ, ರಾಜ್ಯಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡು ರಾಜ್ಯಗಳ ಅಭಿವೃದ್ಧಿಗೆ ಅನುದಾನಗಳನ್ನು ಬಿಡುಗಡೆ ಮಾಡಬೇಕೆಂದು ಎಂದು ಆಗ್ರಹಿಸಿದರು. ಜನತೆಯ ತೀರ್ಪನ್ನು ಧಿಕ್ಕರಿಸಿ ನಡೆಸುವ ಹಿಂಬಾಗಿಲ ರಾಜಕಾರಣವನ್ನು ಇತಿಹಾಸದಲ್ಲಿ ಜನತೆ ಎಂದಿಗೂ ಕ್ಷಮಿಸಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಡಿ ನಾಡಿನ ಮಹಾ ಜನತೆ ನೀಡಿದ ತೀರ್ಪನ್ನು ಗೌರವಿಸಿ, ಸಂವಿಧಾನದ ಆಶಯಗಳ ಪ್ರಕಾರ ವಿರೋಧಪಕ್ಷಗಳು ಜವಾಬ್ದಾರಿಯುತವಾಗಿ ನಡೆಯಬೇಕೆಂಬುದನ್ನು ಎಲ್ಲರೂ ನಿರೀಕ್ಷಿಸುತ್ತಾರೆ. ಕಳೆದ ಲೋಕಸಭಾ ಚುನಾ ವಣೆಯಲ್ಲಿ ತಮ್ಮ ರಾಜಕೀಯ ಪ್ರಬುದ್ಧತೆ ಮೆರೆದಿ ರುವ ಮತದಾರರು, ಪ್ರಜಾಪ್ರಭುತ್ವ ಯಾರ ಕೈಗೊಂಬೆಯಾಗಲು ಸಾಧ್ಯವಿಲ್ಲ ಎಂದು ಟೀಕಿಸಿದರು.

2023-24 ನೇ ಸಾಲಿನಲ್ಲಿ 54,427 ಕೋಟಿ ವಿದೇಶಿ ಬಂಡವಾಳ ಹೂಡಿಕೆ ಬಂದಿದ್ದು, ದೇಶದಲ್ಲೆ ರಾಜ್ಯ ಮೂರನೇ ಸ್ಥಾನದಲ್ಲಿದೆ. ವಿವಿಧ ಉದ್ಯಮ ಸಂಸ್ಥೆಗಳೊಡನೆ 13 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, 42,915 ಕೋಟಿ ಹೂಡಿಕೆಯಾಗಿ 22,600 ಹೊಸ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಇನ್ನು ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ 591 ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, 84,232 ಕೋಟಿ ರು. ಬಂಡವಾಳ ಹೂಡಿಕೆಯಾಗಿ 1,56,986 ಉದ್ಯೋಗಾವಕಾಶಗಳು ಲಭ್ಯವಾಗಲಿವೆ. ರಾಜ್ಯ 1,66,545 ಮಿಲಿಯನ್ ಅಮೆರಿಕನ್ ಡಾಲರ್ ಮೂಲಕ ರಫ್ತು ಮಾಡಿ ದೇಶದಲ್ಲೆ ಮೊದಲನೇ ಸ್ಥಾನದಲ್ಲಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇ.5.20ರಷ್ಟು ಪ್ರಗತಿಯಾಗಿದೆ ಎಂದು ವಿವರಿಸಿದರು.

**ರಾಜಧಾನಿ ಬೆಂಗಳೂರಿಗೆ ಆದ್ಯತೆ:** ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲಿ 46,686 ಕೋಟಿ ವೆಚ್ಚದಲ್ಲಿ ದೀರ್ಘಾವಧಿಯ ಮೂಲಸೌಕರ್ಯ ಯೋಜನೆಗಳನ್ನು ಯೋಜಿಸಲಾಗಿದೆ. ಬೆಂಗಳೂರಿನಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡಲಾಗುವುದು. ಕಲ್ಯಾಣ ಕರ್ನಾಟಕಕ್ಕೆ ಐದು ಸಾವಿರ ಕೋಟಿ ರು, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371 - ಜೆ ಮಾನ್ಯತೆ ದೊರೆತು 10 ವರ್ಷವಾಗಿರುವ ಹಿನ್ನೆಲೆಯಲ್ಲಿ ದಶಮಾನೋತ್ಸವ ಸಂಭ್ರಮಾಚರಣೆಗೆ ನಿರ್ಧರಿಸಲಾಗಿದೆ. ಇದರೊಂದಿಗೆ ಐದು ಸಾವಿರ ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದರು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಿಎಂ ಸಿದ್ದರಾಮಯ್ಯ ಗೌರವ ವಂದನೆ ಸ್ವೀಕರಿಸಿದರು. ಕಣ್ಮನ ಸೆಳೆದ ಯೋಧರ ಸಾಹಸ ಪ್ರದರ್ಶನ.

### ಸಿಎಂ ಭಾಷಣದ ಮುಖ್ಯಾಂಶಗಳು

- ರಾಜ್ಯದಲ್ಲಿ ಜಾರಿಗೊಳಿಸಿರುವ ಪಂಚಗ್ಯಾರಂಟಿ ಯೋಜನೆಗಳು ದೇಶಕ್ಕೇ ಮಾದರಿಯಾಗಿವೆ
- ಜನತೆಯ ತೀರ್ಪನ್ನು ಧಿಕ್ಕರಿಸಿ ನಡೆಯುವ ರಾಜಕಾರಣವನ್ನು ಜನ ಎಂದಿಗೂ ಸಹಿಸುವುದಿಲ್ಲ
- ಲೋಕಸಭಾ ಚುನಾವಣೆಯಲ್ಲಿ ದೇಶದ ಮತದಾರರು ರಾಜಕೀಯ ಪ್ರಬುದ್ಧತೆ ಮೆರೆದಿದ್ದಾರೆ
- ಕಳೆದ 2 ವರ್ಷದಲ್ಲಿ ಎದುರಾದ ಅತಿವೃಷ್ಟಿ, ಅನಾವೃಷ್ಟಿ ಎರಡನ್ನೂ ಸಮರ್ಥವಾಗಿ ಎದುರಿಸಿದ್ದೇವೆ
- ಜನಕಲ್ಯಾಣ ಯೋಜನೆ ಜಾರಿ ರಾಜ್ಯದ ಜವಾಬ್ದಾರಿಯಾದರೂ, ಪೂರಕ ಸಂಪನ್ಮೂಲ ಕೇಂದ್ರ ಒದಗಿಸಬೇಕು.

### ಪಂಚಖಾತ್ರಿಯಿಂದ ಆರ್ಥಿಕ ಭದ್ರತೆ

ಗೃಹಲಕ್ಷ್ಮಿ ಯೋಜನೆಯಲ್ಲಿ ಮಾಸಿಕ ಎರಡು ಸಾವಿರ ರು. ಪಡೆಯುತ್ತಿರುವ ಫಲಾನುಭವಿಗಳನ್ನು ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಸಂಘಗಳನ್ನು ಸಂಘಟಿಸುವ ಮೂಲಕ ವಿವಿಧ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಒದಗಿಸಿ ವರಮಾನ ತರುವ ಚಟುವಟಿಕೆಗಳಲ್ಲಿ ತೊಡಗಿಸಲಾಗುವುದು. ಯುವನಿಧಿಯ ಫಲಾನುಭವಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದಾಗಿ ಹೇಳಿದ್ದಾರೆ. ಶಕ್ತಿ ಯೋಜನೆಯಲ್ಲಿ 270 ಕೋಟಿ ಉಚಿತ ಪ್ರಯಾಣ ಸೌಲಭ್ಯ ಪಡೆಯುವ ಮೂಲಕ ಮಹಿಳೆಯರು 6,541 ಕೋಟಿ ರು. ಪ್ರಯಾಣ ವೆಚ್ಚವನ್ನು ಉಳಿತಾಯ ಮಾಡಿದ್ದಾರೆ. 120 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯಲ್ಲಿ 25,259 ಕೋಟಿಗಳನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗಿದೆ.

ಅನ್ನಭಾಗ್ಯ ಯೋಜನೆಯಲ್ಲಿ 4.08 ಕೋಟಿ ಫಲಾನುಭವಿಗಳ 1.16 ಕೋಟಿ ಪಡಿತರ ಚೀಟಿಗಳಿಗೆ 7,763 ಕೋಟಿ ರು. ನಗದನ್ನು ಪಾವತಿಸಲಾಗಿದೆ. ಗೃಹಜ್ಯೋತಿಯಲ್ಲಿ 8,844 ಕೋಟಿ , ಯುವನಿಧಿ ಯೋಜನೆಯಡಿ 91 ಕೋಟಿ ರು. ಭರಿಸಲಾಗಿದೆ ಎಂದು ಅಂಕಿ-ಅಂಶ ಸಮೇತ ವಿವ ರಿಸಿದರು. ಕೊಬ್ಬರಿಗೆ ಪ್ರೋತ್ಸಾಹ ಧನ, ಅಸಂಘಟಿತ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಮೋಟಾರು ಮತ್ತು ಇತರ ಸಂಬಂಧಿತ ಕಾರ್ಮಿಕರಿಗೆ ಚಲನಚಿತ್ರ ಕ್ಷೇತ್ರ, ಗಿಗ್ ಕಾರ್ಮಿಕರ ವಿಮಾ ಸೌಲಭ್ಯಗಳು, ಪತ್ರಿಕಾ ವಿತರಕರಿಗೆ ಅಪಘಾತ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗಿದೆ ಎಂದು ಹೇಳಿದರು.

**ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ಒತ್ತು ನೀಡಲಾಗಿದ್ದು, 15,428 ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಲಾಗಿದೆ. ಹಿಂದಿನ ಸರಕಾರದ ಅವಧಿಯಲ್ಲಿ ಅಧಿಸೂಚನೆಯಾಗಿ ಬಾಕಿ ಉಳಿದಿದ್ದ ಹುದ್ದೆಗಳೂ ಸೇರಿದಂತೆ ಒಟ್ಟು 11,512 ಹುದ್ದೆಗಳ ನೇಮಕ ಪ್ರಕ್ರಿಯೆ ವಿವಿಧ ಹಂತದಲ್ಲಿದೆ.**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮೂರು ಕ್ರೇನ್‌ಗಳಿಗೆ ರೋಪ್ ಹಾಕಿ ಕಾರ್ಯಾಚರಣೆ

## ಕಾಳಿ ನದಿಯಿಂದ ದಡ ಸೇರಿದ ಲಾರಿ

ಕಾರವಾರ: ನಗರದ ಕಾಳಿ ನದಿ ಸೇತುವೆ ಕುಸಿದ ಸ್ಥಳದಿಂದ ಲಾರಿ ಮೇಲಕ್ಕೆತ್ತುವ ಕಾರ್ಯಾಚರಣೆ ಗುರುವಾರ ನಡೆಯಿತು. ಮೂರು ಕ್ರೇನ್‌ಗಳಿಗೆ ರೋಪ್ ಹಾಕಿ ಲಾರಿಯನ್ನು ದಡಕ್ಕೆಳೆಯುವ ಮೂಲಕ ಮೇಲಕ್ಕೆ ಎತ್ತಲಾಗಿದೆ. ಇತ್ತೀಚೆಗೆ ಕಾರವಾರ ಕೋಡಿಭಾಗದ ಕಾಳಿ ನದಿಯ ಹಳೆಯ ಸೇತುವೆ ಕುಸಿದು ಬಿದ್ದು, ಲಾರಿಯೊಂದು ನದಿಗೆ ಉರುಳಿತ್ತು. ಬಳಿಕ ನೀರಿಗೆ ಬಿದ್ದಿದ್ದ ಲಾರಿ ಚಾಲಕನನ್ನು ರಕ್ಷಣೆ ಮಾಡಲಾಗಿತ್ತು. ಆದರೆ ಲಾರಿ ಮಾತ್ರ ನೀರಿನಲ್ಲಿಯೇ ಇತ್ತು. ಇದ ರಿಂದ ಈಗ ಅದನ್ನು ಮೇಲಕ್ಕೆತ್ತುವ ಕಾರ್ಯಾಚರಣೆ ನಡೆದಿದೆ. ತಮಿಳು ನಾಡಿನ ಮೂಲದ ಚಾಲಕರ ಲಾರಿ ಇದಾಗಿದ್ದು ಕೊನೆಗೂ ಕಾಳಿ ನದಿಯಿಂದ ಮೇಲೆ ಮೇಲಕ್ಕೆ ಎತ್ತಲಾಗಿದೆ.

ಮೂರು ಕ್ರೇನ್‌ಗಳ ಮೂಲಕ ರೋಪ್ ಹಾಕಿ ಎಳೆದ ಪರಿಣಾಮ ದಡದತ್ತ ಲಾರಿ ಬಂದಿದೆ. ಐಆರ್‌ಬಿ ನೇತೃತ್ವದಲ್ಲಿ ಕಾಳಿ ನದಿಯಲ್ಲಿ ಕಾರ್ಯಾಚರಣೆ ನಡೆದಿದ್ದು, ಕ್ರೇನ್ ಹಾಗೂ ಟೋಯಿಂಗ್ ಮಷಿನ್ ಮೂಲಕ ಸತತ 7 ಗಂಟೆಗಳಿಂದ ನಡೆದ ಕಾರ್ಯಾಚರಣೆಯಲ್ಲಿ ಕೆಲಸ ಆಗಿದೆ. ಈಜುಗಾರ ಈಶ್ವರ ಮಲ್ಪೆ ತಂಡದ ಸಹಾಯದಿಂದ ಲಾರಿಯನ್ನು ಮೇಲಕ್ಕೆತ್ತುವ ಕಾರ್ಯ ನಡೆದಿದ್ದು, ನೀರಿನ ಅಡಿಯಲ್ಲಿ ಹೋಗಿ ಲಾರಿಗೆ ರೋಪ್ ಹಾಕಿ ಆ ಮೂಲಕ ಅದನ್ನು ಮೇಲಕ್ಕೆ ಎತ್ತುವಲ್ಲಿ ಈಶ್ವರ ಮಲ್ಪೆ ತಂಡ ಸಹಾಯ ಮಾಡಿದ್ದಾರೆ. ಇನ್ನು ದುರ್ಘಟನೆ ನಡೆದ 8 ದಿನಗಳ ಬಳಿಕ ಯಲ್ಲಾಪುರ, ಮಂಗಳೂರು ಕಡೆಯ ಕ್ರೇನ್ ಬಳಸಿ ಲಾರಿಯನ್ನು ಮೇಲಕ್ಕೆ ಎತ್ತಲಾಗಿದೆ.

ಕೋಡಿಬಾಗ್‌ನ ಕಾಳಿ ಬ್ರಿಡ್ಜ್‌ನಲ್ಲಿ ಲಾರಿ ಚಾಲಕನ ಸಮೇತ ಬಿದ್ದಿದ್ದ ತಮಿಳುನಾಡು ಮೂಲದ ಲಾರಿಯನ್ನು ಎಂಟು ದಿನದ ನಂತರ ಕಾರ್ಯಾಚರಣೆ ನಡೆಸಿ ಗುರುವಾರ ಹೊರತೆಗೆಯಲಾಯಿತು.

## ಜೆಸಿಬಿಯಿಂದ ಮಣ್ಣು ಬಿದ್ದು ಮಹಿಳೆ ಸಾವು

**ರಾಯಚೂರು:** ಖಾಲಿ ನಿವೇಶನದಲ್ಲಿ ಬಹಿರ್ದೆಸೆಗೆ ತೆರಳಿದ್ದ ಮಹಿಳೆ ಮೇಲೆ ಜೆಸಿಬಿಯಿಂದ ಮಣ್ಣು ಹಾಕಿದ ಕಾರಣ ಮಹಿಳೆ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿದೆ. ನಗರದ ಆಶಾಪುರ ರಸ್ತೆಯಲ್ಲಿನ ಜನತಾ ಕಾಲೋನಿಯಲ್ಲಿ ಘಟನೆ ನಡೆದಿದ್ದು, ತಾಯಮ್ಮ(32) ಮೃತಪಟ್ಟಿದ್ದಾಳೆ. ನಿವೇಶನ ಸ್ವಚ್ಛಗೊಳಿಸುತ್ತಿದ್ದಾಗ ಜೆಸಿಬಿ ಚಾಲಕನಿಂದ ಅಚಾತುರ್ಯ ನಡೆದಿದೆ. ಖಾಲಿ ನಿವೇಶನದಲ್ಲಿ ಜಾಲಿ ಗಿಡ ಕಸ ಬೆಳೆದಿತ್ತು. ಬಡಾವಣೆ ಕೆಲ ಬಡ ಮಹಿಳೆಯರು ಇಲ್ಲಿಯೇ ಬಹಿರ್ದೆಸೆಗೆ ಹೋಗುತ್ತಿದ್ದರು. ಆ ಸ್ಥಳ ಸ್ವಚ್ಛಗೊಳಿಸಲು ಮುಂದಾಗಿದ್ದು, ಜೆಸಿಬಿ ಬಕೆಟ್ ನಿಂದ ಮಹಿಳೆ ಮೇಲೆ ಮಣ್ಣು ಹಾಕಲಾಗಿದೆ. ಮಹಿಳೆ ಕೂಗಿಕೊಂಡರು ಜೆಸಿಬಿ ಸದ್ದಿನಲ್ಲಿ ಸರಿಯಾಗಿ ಕೇಳಿಸಿಲ್ಲ ಎನ್ನಲಾಗಿದೆ. ಮೈ ಮೇಲೆ ಮಣ್ಣಿನ ರಾಶಿ ಬಿದ್ದ ಕಾರಣಕ್ಕೆ ಉಸಿರಾಡಲಾಗದೆ ಮೃತಪಟ್ಟಿದ್ದಾಳೆ. ಪಶ್ಚಿಮ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಜೆಸಿಬಿ ಮತ್ತು ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ರಾಜಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹಮ್ಮಿಕೊಂಡಿದ್ದ ಲಘು ಉಪಾಹಾರ ಕೂಟದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಹಲವರಿದ್ದರು.

## ವಿದ್ಯುತ್ ಸ್ಪರ್ಶ: ಮೂವರ ಸಾವು

**ದಾವಣಗೆರೆ:** ರಾಜ್ಯದಲ್ಲಿ ಗುರುವಾರ ನಡೆದ ಪ್ರತ್ಯೇಕ ಪ್ರಕರಣದಲ್ಲಿ ಮೂವರು ವಿದ್ಯುತ್ ಸ್ಪರ್ಶಕ್ಕೆ ಬಲಿಯಾಗಿದ್ದಾರೆ. ಜಮೀನಿನಲ್ಲಿದ್ದ ಟ್ರಾನ್ಸ್‌ಫಾರ್ಮರ್‌ನಲ್ಲಿ ಪ್ರವಹಿಸುತ್ತಿದ್ದ ವಿದ್ಯುತ್ ಸ್ಪರ್ಶಿಸಿ ದಂಪತಿ ಮೃತಪಟ್ಟ ಘಟನೆ ತಾಲೂಕಿನ ಕಾಟೆಹಳ್ಳಿ ಗ್ರಾಮದಲ್ಲಿ ಗುರುವಾರ ಬೆಳಗ್ಗೆ ನಡೆದಿದೆ. ನಾಗರಾಜ್ (35) ಹಾಗೂ ಲತಾ (30) ಮೃತರು. ದಂಪತಿಗೆ ಇಬ್ಬರು ಪುತ್ರಿಯರಿದ್ದಾರೆ. **ವಿದ್ಯಾರ್ಥಿ ಸಾವು:** ತುಮಕೂರು ಜಿಲ್ಲೆಯ ಶಿರಾ ತಾಲೂಕು ಬುಕ್ಕಾಪಟ್ಟಣ ಹೋಬಳಿ ಎಚ್ ಕಾವಲ್ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶಿಸಿ ವಿದ್ಯಾರ್ಥಿ ಸಾವನ್ನಪ್ಪಿದ್ದಾನೆ. ಹೇಮಂತ್(8) ಸಾವಿಗೀಡಾದ ದುರ್ದೈವಿ. ಬುಕ್ಕಾಪಟ್ಟಣ ಹೋಬಳಿ ಎಚ್.ಕಾವಲ್ ಸರಕಾರಿ ಶಾಲೆಯಲ್ಲಿ ಎರಡನೇ ತರಗತಿ ಓದುತ್ತಿದ್ದ.

## ಗ್ಯಾರಂಟಿ ಯೋಜನೆ ಪರಿಷ್ಕರಣೆ ಮಾಡಿದರೆ ತಪ್ಪಿಲ್ಲ

**ವಿಜಯಪುರ:** ಪಂಚ ಗ್ಯಾರಂಟಿ ಯೋಜನೆ ನಿಲ್ಲಿಸಲ್ಲ. ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲಿಸೋ ಮಾತಿಲ್ಲ. ಶ್ರೀಮಂತರು ಯೋಜನೆ ಪಡೆಯುತ್ತಿದ್ದರೆ ಪರಿಷ್ಕರಣೆ ಮಾಡಿದರೆ ತಪ್ಪಿಲ್ಲ. ಪರಿಷ್ಕರಣೆ ತಪ್ಪಲ್ಲ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಬಡವರಿಗೆ ಗ್ಯಾರಂಟಿ ಯೋಜನೆ ನಿಲ್ಲೋದಿಲ್ಲ. ಶ್ರೀಮಂತರಿಗೆ ಬದಲಾವಣೆ ಮಾಡಿದ್ರೆ ತಪ್ಪಲ್ಲ, ಇದು ನನ್ನ ವೈಯಕ್ತಿಕ ಅಭಿಪ್ರಾಯ. ಶ್ರೀಮಂತರಿಗೆ, ಎಂ.ಬಿ ಪಾಟೀಲರಿಗೆ ಗ್ಯಾರಂಟಿ ಗಳು ಯಾಕೆ? ಬಡವರಿಗೆ ಗ್ಯಾರಂಟಿ ಸಿಗಬೇಕು. ಗ್ಯಾರಂಟಿ ಯೋಜನೆ ನಿಲ್ಲಲ್ಲ ಇದು ನಮ್ಮ ಗ್ಯಾರಂಟಿ ಎಂದು ಸಚಿವ ಎಂ.ಬಿ.ಪಾಟೀಲ್, ಯತ್ನಾಳ್, ವಿಜಯೇಂದ್ರ, ಯಡಿಯೂರಪ್ಪ, ಆರ್ ಅಶೋಕಗೆ ಯಾಕೆ ಯೋಜನೆ ಬೇಕು. ಶ್ರೀಮಂತರಿಗೆ ಗ್ಯಾರಂಟಿ ಯೋಜನೆ ಅವಶ್ಯಕತೆ ಇಲ್ಲ ಎಂದರು.

ಸಂಪುಟ ಪುನಾರಚನೆ ವಿಚಾರವಾಗಿ ಮಾತನಾಡಿ, ಸಂಪುಟ ರಚನೆ, ಪುನಾರಚನೆ ಸಿಎಂ ಅವರ ಪರಮಾಧಿಕಾರ. ಸಿಎಂ ಹಾಗೂ ಹೈಕಮಾಂಡ್ ಯಾವಾಗ ಮಾಡುತ್ತೇವೆ ಎನ್ನುತ್ತಾರೆ ಆವಾಗ ಆಗುತ್ತೆ. ಸಂಪುಟ ಪುನಾರಚನೆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರು.

### ಪಾದಯಾತ್ರೆಗೆ ಸ್ವಾಗತ

**ಬಿಜೆಪಿಯಿಂದ ಎರಡನೇ ಪಾದಯಾತ್ರೆ ವಿಚಾರವಾಗಿ ಸಚಿವರು ಪಾಟೀಲ್ ಪ್ರತಿಕ್ರಿಯಿಸಿ, ಕರೋನಾ ಲೂಟಿ, 10 ಸಾವಿರ ಕೋಟಿ ಹಗರಣದ ಬಗ್ಗೆ ಯತ್ನಾಳ್ ಪಾದಯಾತ್ರೆ ಮಾಡುತ್ತಿದ್ದಾರೆ. ಬಿಜೆಪಿ ಹಗರಣ ವಿರುದ್ಧ ಯತ್ನಾಳ್ ಪಾದಯಾತ್ರೆ ಮಾಡಲಿ. ಹೃದಯ ಪೂರ್ವಕವಾಗಿ ಯತ್ನಾಳ್‌ರ ಪಾದಯಾತ್ರೆಗೆ ನನ್ನ ಸ್ವಾಗತ ಇದೆ ಎಂದರು.**

## ಸರಕಾರ ಇರೋವರೆಗೂ ಗ್ಯಾರಂಟಿ ಯೋಜನೆ ನಿಶ್ಚಿತ

**ಶಿವಮೊಗ್ಗ:** ಗ್ಯಾರಂಟಿ ಯೋಜನೆಗಳು ಯಾವುದೇ ಕಾರಣಕ್ಕೂ ಕೊನೆಗೊಳ್ಳುವುದಿಲ್ಲ. ನಮ್ಮ ಸರಕಾರ ಇರುವವರೆಗೂ ಜಾರಿಯಲ್ಲಿ ಇರುತ್ತದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವಶ್ಯಕತೆ ಇಲ್ಲದವರಿಗೆ ಯೋಜನೆ ತಲುಪುತ್ತಿದ್ದರೆ, ಅದನ್ನು ಗಮನಿಸಬೇಕಾಗುತ್ತದೆ.

ಇದೇ ವೇಳೆ, ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗುವುದು. ಫುಡ್‌ಕೋರ್ಟ್ ಸ್ಥಾಪಿಸಲಾಗುವುದು. ಅರಣ್ಯ ತೆರವು ಕಾರ್ಯ ಸ್ಥಗಿತಗೊಳಿಸಲಾಗುತ್ತಿದೆ. ನ್ಯಾಯಾಲಯದಿಂದ ಆದೇಶದ ಹಿನ್ನೆಲೆಯಲ್ಲಿ ಈಗ ಒತ್ತುವರಿ ತೆರವು ಮಾಡಲಾಗುತ್ತಿದೆ ಎಂದು ತಿಳಿಸಿದರು.

ತುಂಗಾ ಡ್ಯಾಂನ ಎಂಟನೇ ರೇಡಿಯೇಟರ್ ಗೇಟ್ ಸಮಸ್ಯೆಯ ಬಗ್ಗೆ ಟೆಂಡರ್ ಕರೆಯಲಾಗಿದೆ. ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ. ಜಂಟಿ ಸರ್ವೆ ನಡೆಸಲು ಸೂಚನೆ ನೀಡಲಾಗಿತ್ತು. ಈಗ ಕಂದಾಯ ಇಲಾಖೆಯಿಂದ ಶೇ.80ರಷ್ಟು ಸರ್ವೆ ಮುಗಿದಿದೆ. ಅದನ್ನು ಜಿಲ್ಲಾಧಿಕಾರಿ ಸರಿಪಡಿಸುತ್ತಾರೆ ಎಂದರು.

### ಅನುದಾನಿತ ಶಾಲೆಗಳಿಗೆ ಶಿಕ್ಷಕರ ನೇಮಕ

**ನನ್ನ ಶಾಲೆ ನನ್ನ ಜವಾಬ್ದಾರಿ ಯೋಜನೆ ಚೆನ್ನಾಗಿ ನಡೆಯುತ್ತಿದೆ. ಮಳವಳ್ಳಿಯಲ್ಲಿ 6.5 ಕೋಟಿ ರು. ವೆಚ್ಚದಲ್ಲಿ ಪಬ್ಲಿಕ್ ಶಾಲೆ ಕಟ್ಟಿಸಿಕೊಟ್ಟಿದ್ದಾರೆ. ಇನ್ನು, ಅನುದಾನಿತ ಶಾಲೆಗಳಿಗೆ 5 ಸಾವಿರ ಶಿಕ್ಷಕರನ್ನು ನೇಮಿಸಲಾಗುತ್ತಿದೆ. ನಮ್ಮ ಕುಬಟೂರಿನ ಸರಕಾರಿ ಶಾಲೆಗೆ 10 ಲಕ್ಷ ರು. ಮೌಲ್ಯದ ವಸ್ತುಗಳನ್ನು ದೇಣಿಗೆ ನೀಡುತ್ತೇನೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.**

## ಗ್ಯಾರಂಟಿ ನಿಲ್ಲಿಸುವ ಪ್ರಶ್ನೆಯೇ ಇಲ್ಲ

**ಮಂಗಳೂರು:** ರಾಜ್ಯ ಸರಕಾರದ ಗ್ಯಾರಂಟಿ ಯೋಜನೆ ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಅಗತ್ಯ ಇರುವವರಿಗೆ ಯೋಜನೆಯ ಲಾಭ ಸಿಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆಯನ್ನು ಇನ್ನೂ ಹೆಚ್ಚು ಜನರಿಗೆ ತಲುಪಿಸಲಾಗುವುದು. ಯೋಜನೆ ಅನುಷ್ಠಾನದಲ್ಲಿ ಸೋರಿಕೆ ತಪ್ಪಿಸಬೇಕು. ಯೋಜನೆ ಜಾರಿಯಲ್ಲಿ ನ್ಯೂನತೆ ಇದ್ದರೆ ಸರಿಪಡಿಸಿಕೊಂಡು ಮುಂದುವರಿಸುತ್ತೇವೆ. ಬಡವರು,ಅಗತ್ಯ ಇರುವವರಿಗೆ ಗ್ಯಾರಂಟಿ ಯೋಜನೆ ಸಿಗಬೇಕು, ಅರ್ಹತೆ ಇಲ್ಲದವರಿಗೆ ಸಿಕ್ಕಿದರೆ ಅದು ಸರಕಾರಕ್ಕೆ ಹೊರೆ ಮತ್ತು ಯೋಜನೆಯ ಉದ್ದೇಶವೂ ಅಲ್ಲ. ಸರಕಾರದ ಹಣ ದುರುಪಯೋಗ ಆಗಬಾರದು ಎಂದು ಸ್ಪಷ್ಟಪಡಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬಗ್ಗೆ ಸಮೀಕ್ಷೆ ನಡೆಸಿ, ವರದಿ ಪಡೆದು ಮಾನದಂಡಗಳ ಬಗ್ಗೆ ಚರ್ಚಿಸಲಾಗುವುದು ಎಂದರು.

**ಮಂಗಳೂರು ಹೊರವಲಯದ ಕೆತ್ತಿಕಲ್‌ನಲ್ಲಿ ನಡೆದ ಗುಡ್ಡ ಕುಸಿತಕ್ಕೆ ಸಂಬಂಧಿಸಿ ತಜ್ಞರ ವರದಿ ಪಡೆದು ಸುರಕ್ಷತೆಗೆ ಕ್ರಮ ಕೈಗೊಳ್ಳಲಾಗುವುದು. ದ.ಕ. ಜಿಲ್ಲಾಧಿಕಾರಿ ನೇತೃತ್ವದಲ್ಲಿ ಉನ್ನತಮಟ್ಟದ ಸಮಿತಿಯ ತನಿಖೆ ನಡೆಯುತ್ತಿದ್ದು, ಈ ತಿಂಗಳ ಕೊನೆಯೊಳಗೆ ವರದಿ ಸಲ್ಲಿಕೆಯಾಗಲಿದೆ. ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು.**

**-ದಿನೇಶ್ ಗುಂಡೂರಾವ್,** ಸಚಿವ

ಸರಕಾರದ ಮೇಲೆ ತಿರುಳಿಲ್ಲದ ಆಪಾದನೆ: ಸಚಿವ ಪರಮೇಶ್ವರ್

## ಸರಕಾರದ ಅಸ್ಥಿರತೆಗೆ ವಿಪಕ್ಷಗಳ ಹುನ್ನಾರ

**ತುಮಕೂರು:** ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನದಲ್ಲಿ ವಿಪಕ್ಷಗಳು ರಾಜ್ಯಪಾಲರ ಕಚೇರಿಯನ್ನು ದುರುಪಯೋಗಪಡಿಸಿಕೊಂಡು ಮುಖ್ಯಮಂತ್ರಿ ಹಾಗೂ ಸರಕಾರದ ಮೇಲೆ ತಿರುಳಿಲ್ಲದ ಆಪಾದನೆಯನ್ನು ಮಾಡಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ರಾಜ್ಯದ ಜನತೆ ಇದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಸರಕಾರ ಕಾನೂನು ಚೌಕಟ್ಟಿನಲ್ಲಿಯೇ ಆಡಳಿತ ನಡೆಸುತ್ತಿದೆ. ಯಾವುದೇ ಟೀಕೆ-ಟಿಪ್ಪಣಿ ಗಳಿಗೂ ನಾವು ಹೆದರುವುದಿಲ್ಲ. ರಾಜ್ಯದ ಅಭಿವೃದ್ಧಿಯೇ ನಮ್ಮ ಸರಕಾರದ ಮೂಲಮಂತ್ರವೆಂದು ಎಂದು ತಿಳಿಸಿದರು.

**ಪೊಲೀಸ್ ಇಲಾಖೆಯಲ್ಲಿ ಯಾವುದೇ ಮುಂಬಡ್ತಿ ಪ್ರಕರಣಗಳು ಬಾಕಿಯಿರುವುದಿಲ್ಲ. ಪ್ರತಿ ಜಿಲ್ಲೆಯಲ್ಲಿಯೂ ಹೊಸದಾಗಿ 1 ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳ ಹುದ್ದೆಯನ್ನು ಸೃಜಿಸಲಾಗಿದ್ದು, ಒಟ್ಟು 30 ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ ಕಳೆದ 4 ವರ್ಷಗಳಿಂದ ನೇಮಕ ಮಾಡದೇ ಬಾಕಿ ಉಳಿದಿದ್ದ 20 ಸಾವಿರ ಕಾನ್‌ಸ್ಟೇಬಲ್ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು.**

**-ಪರಂಮೇಶ್ವರ,** ಗೃಹ ಸಚಿವ

## ಪಂಚ ಗ್ಯಾರಂಟಿ ಪರಿಷ್ಕರಣೆ ಇಲ್ಲ

**ಕೊಪ್ಪಳ:** ರಾಜ್ಯದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಸ್ಪಷ್ಟವಾಗಿ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿ, ಗ್ಯಾರಂಟಿ ಯೋಜನೆಯಿಂದ ಸರಕಾರಕ್ಕೆ ಹೊರೆಯಾಗಿಲ್ಲ. ಅಭಿವೃದ್ಧಿ ವಿಷಯದಲ್ಲಿ ಯಾವುದೇ ಕುಂಠಿತವಾಗಿಲ್ಲ. ಬಡವರು, ನಿರ್ಗತಿಕರಿಗೆ ಜೀವನ ನಡೆಸಲು ಕಷ್ಟ ಇರುವವರಿಗೆ ಗ್ಯಾರಂಟಿ ಯೋಜನೆಗಳಿಂದ ಅನುಕೂಲವಾಗಿದೆ. ಇದು ಬಡವರ ಗ್ಯಾರಂಟಿ. ಹೈಕಮಾಂಡ್ ನಾಯಕರು ಕೂಡ ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರ ಜತೆ ಚರ್ಚೆ ನಡೆಸಿದ್ದು, ಗ್ಯಾರಂಟಿ ಯೋಜನೆಯನ್ನು ಪರಿಷ್ಕರಿಸುವುದಿಲ್ಲ ಎಂದು ಸ್ಪಷ್ಟ ಸಂದೇಶ ನೀಡಿದ್ದಾರೆ ಎಂದರು.

ವಿಶ್ವವಾಣಿ

## ಸಂಪಾದಕೀಯ

# ಮಮತಾ ನಡೆ ಖಂಡನೀಯ

ಕೋಲ್ಕತ್ತಾದ ಆರ್‌ಜಿಕರ್ ವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ ತರಬೇತಿ ಪಡೆಯುತ್ತಿದ್ದ ಯುವ ವೈದ್ಯೆಯ ಮೇಲೆ ಅತ್ಯಾಚಾರವೆಸಗಿ, ಬರ್ಬರವಾಗಿ ಕೊಲೆ ಮಾಡಿದ ಪೈಶಾಚಿಕ ಕೃತ್ಯ ದೇಶಾದ್ಯಂತ ಸಂಚಲನ ಸೃಷ್ಟಿಸಿದೆ. ಜೀವ ಉಳಿಸುವ ವೈದ್ಯರನ್ನು ದೇವರೆಂದು ಪೂಜಿಸುವ ದೇಶದಲ್ಲಿ ಆಸ್ಪತ್ರೆಯಲ್ಲಿಯೇ ಇಂತಹ ಹೀನ ಕೃತ್ಯ ನಡೆದಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವ ವಿಚಾರ. ಇಂತಹ ಕೃತ್ಯ ನಡೆದ ತಕ್ಷಣ ಆರೋಪಿಗಳನ್ನು ಬಂಧಿಸಿ ಅತ್ಯಂತ ಕಠಿಣ ಶಿಕ್ಷೆಗೆ ಗುರಿಪಡಿಸಲು ಪಕ್ಷಭೇದವಿಲ್ಲದೆ ಶ್ರಮಿಸುವುದು ಸಮಾಜದ ಕನಿಷ್ಠ ನಿರೀಕ್ಷೆ. ಆದರೆ ಈ ವಿಚಾರದಲ್ಲೂ ರಾಜಕೀಯ ನುಸುಳಿರುವುದು, ಆರೋಪಿಗಳನ್ನು ರಕ್ಷಿಸಲು ಪ್ರಯತ್ನಗಳು ನಡೆಯುತ್ತಿವೆ ಎಂಬ ಭಾವನೆಗಳು ಮೂಡಿರುವುದು ದುರದೃಷ್ಟಕರ. ಈ ಘಟನೆಯನ್ನು ಖಂಡಿಸಿ ಕಿರಿಯ ವೈದ್ಯರು ದೇಶಾದ್ಯಂತ ಮುಷ್ಕರ ಹೂಡಿದ್ದಾರೆ. ಇವರ ಮನವೊಲಿಸಿ ಸುರಕ್ಷತೆಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿ ಅಭದ್ರತೆಯ ಭಾವನೆಯನ್ನು ತೊಡೆದು ಹಾಕುವುದು ರಾಜ್ಯ ಸರಕಾರದ ಆದ್ಯ ಕರ್ತವ್ಯ. ಆದರೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಇದುವರೆಗೂ ಆಸ್ಪತ್ರೆಗೆ ಭೇಟಿ ನೀಡಿಲ್ಲ. ಸಂತ್ರಸ್ತ ಕುಟುಂಬದ ಸದಸ್ಯರನ್ನು ಭೇಟಿಯಾಗಿ ಸಾಂತ್ವನ ಹೇಳಿಲ್ಲ. ಇದು ಸಾಲದೆಂಬಂತೆ ಟಿಎಂಸಿ ಪಕ್ಷದ ನಾಯಕರು ವೈದ್ಯೆಯ ಕುಟುಂಬದ ವಿರುದ್ಧವೇ ಹೇಳಿಕೆ ನೀಡುತ್ತಿದ್ದಾರೆ. ಘಟನೆಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ ವೈದ್ಯ ಕಾಲೇಜಿನ ಪ್ರಾಂಶುಪಾಲರನ್ನು ತಕ್ಷಣವೇ ಇನ್ನೊಂದು ಸಂಸ್ಥೆಗೆ ನೇಮಿಸಿರುವ ರಾಜ್ಯ ಸರಕಾರದ ನಡೆಯ ಬಗ್ಗೆ ಕೋಲ್ಕತ ಹೈಕೋರ್ಟ್ ಕೂಡ ಆಕ್ರೋಶ ವ್ಯಕ್ತಪಡಿಸಿದೆ. ಇದೀಗ ವೈದ್ಯರು ಮುಷ್ಕರ ನಿರತರಾಗಿರುವಾಗಲೇ ಗೂಂಡಾಗಳು ಅದೇ ಆಸ್ಪತ್ರೆಗೆ ನುಗ್ಗಿ, ದಾಂಧಲೆ ನಡೆಸಿದ್ದಾರೆ. ಆಸ್ಪತ್ರೆಯ ಕಿಟಕಿ ಗಾಜುಗಳನ್ನು ಪುಡಿಗಟ್ಟಿ ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದಾರೆ. ಅತ್ಯಾಚಾರ ನಡೆದ ಕೋಣೆಯನ್ನು ಅಸ್ತವ್ಯಸ್ತಗೊಳಿಸಿರುವ ಹಿಂದೆ ಸಾಕ್ಷ್ಯ ನಾಶದ ಪ್ರಯತ್ನ ಇರುವುದು ಸ್ಪಷ್ಟ. ಈ ಘಟನೆಯನ್ನು ತಡೆಯಲು ವಿಫಲವಾದ ಕೋಲ್ಕತ ಪೊಲೀಸ್ ಆಯುಕ್ತರು, ಇದಕ್ಕೆಲ್ಲ ಮಾಧ್ಯಮಗಳು ಕಾರಣ. ಅವು ಜನರನ್ನು ಉದ್ರೇಕಿಸುತ್ತಿವೆ ಎಂದು ಮಾಧ್ಯಮಗಳ ಮೇಲೆ ಗೂಬೆ ಕೂರಿಸಿದ್ದಾರೆ. ಒಬ್ಬ ಮಹಿಳಾ ಮುಖ್ಯಮಂತ್ರಿಯಾಗಿ ಮಮತಾ ಬ್ಯಾನರ್ಜಿ ಅವರು ಈ ಘಟನೆಯನ್ನು ಅತ್ಯುಗ್ರ ಶಬ್ದಗಳಲ್ಲಿ ಖಂಡಿಸಬೇಕಿತ್ತು. ರಾಜಕೀಯ ಹೇಳಿಕೆಗಳನ್ನು ನೀಡದೇ ಹೆಚ್ಚು ಸಂವೇದನೆ ಮತ್ತು ವಿವೇಚನೆಯಿಂದ ವರ್ತಿಸಬೇಕಿತ್ತು. ಆದರೆ ಈಗ ಎಲ್ಲ ಹೊಣೆಗಾರಿಕೆಯನ್ನು ಸಿಬಿಐ ಮೇಲೆ ಹಾಕಿರುವ ಅವರು ಘಟನೆ ಖಂಡಿಸಿ ಬೀದಿಗಿಳಿಯಲು ಮುಂದಾಗಿದ್ದಾರೆ. ಇಂತಹ ಪೈಶಾಚಿಕ ಕೃತ್ಯದಲ್ಲೂ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿರುವ ಮಮತಾ ನಡೆ ಖಂಡನೀಯ.

## ಸೊಂಪಾದಕೀಯ

# ಹಚ್ಚೇವು ಕನ್ನಡದ ಜ್ಯೋತಿ

ಕನ್ನಡ ಚಿತ್ರಗಳನ್ನು ನೋಡಲು ಜನ ಚಿತ್ರಮಂದಿರಕ್ಕೆ ಬರುತ್ತಿಲ್ಲ, ಕನ್ನಡ ಚಿತ್ರಗಳು ಗೆಲ್ಲುತ್ತಿಲ್ಲ ಅನ್ನೋ ಕಾರಣಕ್ಕೆ ಕಲಾವಿದರ ಸಂಘದಲ್ಲಿ ದೊಡ್ಡ ಕುಳಗಳೆಲ್ಲಾ ಸೇರಿ ಹೋಮ, ಹವನ ಮಾಡಿಸಿದ್ದು ಈಗ ಎಲ್ಲೆಡೆ ಸುದ್ದಿ ಆಗಿದೆ. ಕಲಾವಿದರ ಸಂಘದಲ್ಲಿ ನಡೆದ ಈ ಹೋಮ, ನಟ ದರ್ಶನ್ ಅವರು ಜೈಲಿನಿಂದ ಬಿಡುಗಡೆ ಆಗಿ ಬರಲಿ ಅನ್ನೋ ಕಾರಣಕ್ಕೆ ಆಗಿದ್ದು ಎನ್ನುವವರೂ ಇದ್ದಾರೆ. ಆದರೆ ಜಗ್ಗೇಶ್ ಅವರಂಥ ಹಿರಿಯ ನಟರು, 'ಅದೆಲ್ಲಾ ಸುಳ್ಳು, ಹಂಗೇನಾದ್ರೂ ಇದ್ದಿದ್ರೆ ನಾನು ಇಲ್ಲಿಗೆ ಬರ್ತಾ ಇರ್ಲಿಲ್ಲ' ಎಂದು ತಿರುಗೇಟು ಕೊಟ್ಟಿದ್ದೂ ಆಯ್ತು. ಆದರೆ ಚಿತ್ರರಂಗದ ಪ್ರಮುಖ ನಟರು ಅಲ್ಲದಿದ್ದರೂ ಕೆಲವರು ಈ ಹೋಮ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಂತೂ ನಿಜ. ಈ ಸಮಯದಲ್ಲಿ ಕನ್ನಡ ಚಿತ್ರರಂಗದ ಹಿರಿಯ ನಟಿ ಜ್ಯೋತಿ ಅವರು ತಮ್ಮ ಮೈಮೇಲೆ ದೆವ್ವ, ಸಾರಿ, ದೇವರು ಬಂದಂತೆ ಆಡಿದ್ದು ಅಂದಿನ ಹೈಲೈಟ್. ಕನ್ನಡ ಚಿತ್ರರಂಗದ ಒಳಿತಿಗಾಗಿ ಮಾಡಿದ ಈ ಹೋಮದಲ್ಲಿ 'ಹಚ್ಚೇವು ಕನ್ನಡದ ದೀಪ' ಅಂತ ಎಲ್ಲರೂ ಹಾಡುತ್ತಿದ್ದರೆ, ಈ ಕಡೆ 'ಹಚ್ಚೇವು ಕನ್ನಡದ ಜ್ಯೋತಿ' ಅನ್ನೋ ಥರ ಈ ನಟಿಯ ಮೈಮೇಲೆ ದೇವರು ಬಂದಿದ್ದು ಯಾಕೆ ಅನ್ನೋದು ಮತ್ತು ಅದು ಯಾವ ದೇವರು ಅನ್ನೋದು ಮಾತ್ರ ನಿಗೂಢವಾಗಿದೆ. ಇನ್ನು ಈ ಹೋಮ ನಡೆಯುವ ಮುನ್ನ ದುನಿಯಾ ವಿಜಯ್ ಅಭಿನಯ ಮತ್ತು ನಿರ್ದೇಶನದ 'ಭೀಮ' ಚಿತ್ರ ಹಿಟ್ ಆಗಿದ್ದು ಮತ್ತು ಹೋಮ ನಡೆದ ನಂತರ ಗಣೇಶ್ ಅಭಿನಯದ 'ಕೃಷ್ಣಂ ಪ್ರಣಯ ಸಖಿ' ಚಿತ್ರಕ್ಕೂ ಉತ್ತಮ ಪ್ರತಿಕ್ರಿಯೆ ದೊರಕಿರೋದು ನೋಡಿ, ಹೋಮ ನಡೆಸಿದವರು, 'ನೋಡಿ ನಾವ್ ಹೋಮ ಮಾಡ್ಸಿದ್ದಕ್ಕೆ ಏನೆಲ್ಲಾ ಬದಲಾಗ್ತಿದೆ' ಎಂದು ತಮ್ಮ ಬೆನ್ನು ತಟ್ಟಿಕೊಂಡರೆ ಅದರಲ್ಲಿ ಆಶ್ಚರ್ಯ ಏನಿಲ್ಲ ಬಿಡಿ. ಹಾಗಾಗಿ ಈ ಎರಡು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡ್ತಿರೋದು ನೋಡಿದ ಸಿನಿಮಾ ಮಂದಿ ಮಾತ್ರ, ಕಲಾವಿದರ ಸಂಘದಲ್ಲಿ ಮಾಡಿದ ಪೂಜೆ ನೀರಲ್ಲಿ ಹೋಮ ಮಾಡಿದ ಹಾಗೆ ಆಗಲಿಲ್ಲ ಬಿಡಿ ಅಂತ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.

## ಸಂಪಾದಕರ ಸದ್ಯಶೋಧನೆ

# ಮೂರ್ತಿಯವರು ಹಾಕಿದ ಮೇಲ್ಪಂಕ್ತಿ

ಅವು ಇನ್ಫೋಸಿಸ್ ಸಂಸ್ಥೆಯ ಆರಂಭದ ದಿನಗಳು. ನಾರಾಯಣ ಮೂರ್ತಿಯವರು ವಿದೇಶ ಪ್ರವಾಸ ಹೋಗುವಾಗಲೆಲ್ಲ ತಮ್ಮ ಹಿರಿಯ ಸಹೋದ್ಯೋಗಿಯನ್ನು ಕರೆದು, ಸಂಸ್ಥೆಯ ಹಣಕಾಸು ವ್ಯವಹಾರಗಳನ್ನು ನಿರ್ವಹಿಸುವಂತೆ ಹೇಳುತ್ತಿದ್ದರು. ವಿದೇಶದಿಂದ ಮರಳಿದ ಬಳಿಕ, ತಮ್ಮ ಅನುಪಸ್ಥಿತಿಯಲ್ಲಿ ಆದ ಖರ್ಚಿನ ಬಾಬತ್ತುಗಳನ್ನು ತಪ್ಪದೇ ಪರಿಶೀಲಿಸುತ್ತಿದ್ದರು. ಒಮ್ಮೆ ಮೂರ್ತಿಯವರು ವಿದೇಶ ಪ್ರವಾಸಕ್ಕೆ ಹೋಗಬೇಕಾಗಿ ಬಂದಿತು. ಆಗ ನಂದನ ನಿಲೇಕಣಿ ಸಹ ವಿದೇಶ ಪ್ರವಾಸದಲ್ಲಿದ್ದರು. ಹೀಗಾಗಿ ಕ್ರಿಸ್ ಗೋಪಾಲಕೃಷ್ಣ ಅವರಿಗೆ ಹಣಕಾಸಿನ ಜವಾಬ್ದಾರಿಯನ್ನು ನೋಡಿಕೊಳ್ಳುವಂತೆ ಹೇಳಿದರು. ವಿದೇಶದಿಂದ ಮರಳಿದ ಬಳಿಕ, ಲೆಕ್ಕ ಪುಸ್ತಕವನ್ನು ನೋಡಿದಾಗ, ಎಪ್ಪತ್ತು ಸಾವಿರ ರುಪಾಯಿ ಖರ್ಚು ಮಾಡಿರುವುದಕ್ಕೆ ಯಾವ ಕಾರಣ ಸ್ಪಷ್ಟಪಡಿಸಿಲ್ಲದಿರುವುದನ್ನು ಅವರು ಗಮನಿಸಿದರು. ತಕ್ಷಣ ಅವರು ಕ್ರಿಸ್ ಅವರನ್ನು ಕರೆದು, ಕಾರಣ ಕೇಳಿದರು. ಅದಕ್ಕೆ ಕ್ರಿಸ್, 'ನಮ್ಮ ಸಂಸ್ಥೆಯ ಸಹೋದ್ಯೋಗಿಯೊಬ್ಬರು ನಿವೇಶನವನ್ನು ಖರೀದಿಸಿದ್ದಾರೆ. ಅವರಿಗೆ ಎಪ್ಪತ್ತು ಸಾವಿರ ರುಪಾಯಿ ಕಮ್ಮಿ ಬಿದ್ದಿದೆ. ತಮಗೆ ಸಾಲದ ರೂಪದಲ್ಲಿ ಆ ಹಣವನ್ನು ನೀಡಬೇಕೆಂದೂ, ಆದಷ್ಟು ಶೀಘ್ರ ವಾಪಸ್ ಮಾಡುವುದಾಗಿಯೂ ಹೇಳಿದರು. ಹೀಗಾಗಿ ಅವರಿಗೆ ಎಪ್ಪತ್ತು ಸಾವಿರ ರುಪಾಯಿ ನೀಡಿದ್ದೇನೆ' ಎಂದು ಸಮಜಾಯಿಷಿ ನೀಡಿದರು. ಮೂಲತಃ ಮೃದು ಸ್ವಭಾವದವರಾದ ಮೂರ್ತಿಯವರು ಆ ಮಾತುಗಳನ್ನು ಕೇಳಿ ತುಸು ಸಿಡಿಮಿಡಿಗೊಂಡರು. 'ಸ್ವಂತ ಬಳಕೆಗೆ ಕಂಪನಿಯ ಹಣವನ್ನು ಬಳಸಲೇಕೂಡದು. ಇದು ನಮ್ಮ ಶಿಷ್ಟಾಚಾರದ ಉಲ್ಲಂಘನೆ. ಪ್ರಾಮಾಣಿಕತೆ ನಮ್ಮ ಸಂಸ್ಥೆಯ ಅತ್ಯುನ್ನತ ಮೌಲ್ಯವಾಗಬೇಕು ಎಂದು ನಾವೆಲ್ಲ ನಿರ್ಧರಿಸಿದ್ದೇವೆ. ಇನ್ಫೋಸಿಸ್ ಹಣವನ್ನು ಸ್ವಂತಕ್ಕೆ ಬಳಸುವುದನ್ನು ನಾನು ಸಹಿಸುವುದಿಲ್ಲ. ಒಂದು ಕುಟುಂಬ ಅಥವಾ ಖಾಸಗಿ ಒಡೆತನದ ಸಂಸ್ಥೆಯಲ್ಲಿ ಸ್ವಂತ ಬಳಕೆಗೆ ಹಣ ನೀಡಬಹುದು. ಆದರೆ ಕಾರ್ಪೊರೇಟ್ ಕಂಪನಿಯಲ್ಲಿ ಅದಕ್ಕೆಲ್ಲ ಆಸ್ಪದವಿಲ್ಲ' ಎಂದು ಮೂರ್ತಿ ಯವರು ಖಡಾಖಡಿ ಹೇಳಿಬಿಟ್ಟರು. ಆ ದಿನಗಳಲ್ಲಿ ಕಾರ್ಪೊರೇಟ್ ಸಂಸ್ಥೆ ಗಳಲ್ಲೂ ಸ್ವಂತಕ್ಕೆ ಕಂಪನಿ ಹಣ ಬಳಸುವುದು ವಾಡಿಕೆಯಲ್ಲಿತ್ತು. ಆದರೆ ಈ ವಿಷಯದಲ್ಲಿ ನಿಯಮ ಬದಲಿಸಲು ಮೂರ್ತಿಯವರು ಒಪ್ಪಲೇ ಇಲ್ಲ. ನಿವೇಶನ ಖರೀದಿಗಾಗಿ ಎಪ್ಪತ್ತು ಸಾವಿರ ರುಪಾಯಿ ಪಡೆದ ಕಂಪನಿಯ ಹಿರಿಯ ಸಿಬ್ಬಂದಿ ಮುಂದಿನ ನಲವತ್ತೆಂಟು ಗಂಟೆಗಳಲ್ಲಿ ಹಣ ಪಾವತಿ ಮಾಡಿ ದರು. ಇನ್ನೊಂದು ಸಂದರ್ಭದಲ್ಲಿ ಮೂರ್ತಿಯವರು ವಿದೇಶ ಪ್ರವಾಸದಲ್ಲಿದ್ದರು. ಅವರ ಮಗ ರೋಹನ್ ಕಾಯಿಲೆಗೆ ತುತ್ತಾದರು. ಆಗ ಮಗನೊಂದಿಗೆ ಸುಧಾಮೂರ್ತಿಯವರು ಆಫೀಸಿಗೆ ಬಂದರು. ಪತಿಗೆ ಈ ವಿಷಯವನ್ನು ತಿಳಿಸಿ, ಅವರ ಮಾರ್ಗದರ್ಶನಕ್ಕಾಗಿ, ವಿದೇಶದಲ್ಲಿದ್ದ ಮೂರ್ತಿಯವರಿಗೆ ಸುಧಾಮೂರ್ತಿಯವರು ಫೋನ್ ಮಾಡಿದರು. ಪತ್ನಿಯೊಂದಿಗೆ ಮಾತಾಡಿದ ಬಳಿಕ ಕೊನೆಯಲ್ಲಿ, 'ನೋಡು, ನೀನು ನಿನ್ನ ಸ್ವಂತ ಕೆಲಸಕ್ಕಾಗಿ ಆಫೀಸಿನ ಫೋನನ್ನು ಬಳಸಿದ್ದೀಯಾ. ಈ ರೀತಿ ಮಾಡಬಾರದು. ನೀನು ಆಫೀಸಿನಿಂದ ನಿರ್ಗಮಿಸುವ ಮುನ್ನ ನೂರು ರುಪಾಯಿಯನ್ನು ಆಫೀಸಿನ ಖಾತೆಗೆ ವರ್ಗಾಯಿಸಲು ಮರೆಯಬೇಡ' ಎಂದು ಹೇಳಿದರು. ಪ್ರತಿ ತಿಂಗಳು ಫೋನ್ ಬಿಲ್ ಬಂದಾಗ, ಖುದ್ದಾಗಿ ಅದನ್ನು ಪರಿಶೀಲಿಸುತ್ತಿದ್ದ ಮೂರ್ತಿಯವರು, ತಾವು ಸ್ವಂತ ಕೆಲಸಕ್ಕಾಗಿ ಫೋನ್ ಮಾಡಿದ್ದರೆ, ಆ ಬಾಬತ್ತಿನ ಹಣವನ್ನು ತಪ್ಪದೆ ಪಾವತಿ ಮಾಡುತ್ತಿದ್ದರು. ಇದು ಉಳಿದ ನಿರ್ದೇಶಕರಿಗೂ ಪಾಠವಾಯಿತು. ಮೂರ್ತಿಯವರ ಮೇಲ್ಪಂಕ್ತಿಯನ್ನು ಉಳಿದವರು ಪಾಲಿಸಲಾರಂಭಿಸಿದರು. ಮೂರ್ತಿಯವರು ತಮ್ಮ ಪತ್ನಿ ಮಕ್ಕಳೊಂದಿಗೆ ಇನ್ಫೋಸಿಸ್ ಕ್ಯಾಂಪಸ್‌ಗೆ ಹೋದಾಗ, ಅಲ್ಲಿನ ಕ್ಯಾಂಟೀನ್‌ಗೆ ಹೋಗಿ ಊಟ-ಉಪಾಹಾರ ಸೇವಿಸಿದರೆ, ಹಣವನ್ನು ಪಾವತಿ ಮಾಡಲು ಮರೆಯುತ್ತಿರಲಿಲ್ಲ. ಇನ್ನು ಮುಂದೆ ಸಂಸ್ಥೆಯ ಹಣವನ್ನು ಸ್ವಂತಕ್ಕೆ ಬಳಸಕೂಡದು ಎಂದು ಹಿರಿಯ ಸಹೋದ್ಯೋಗಿಗಳಿಗೆ ಇನ್ನೊಮ್ಮೆ ಮನವರಿಕೆ ಮಾಡಿಕೊಟ್ಟರು. ಯಾರಿಗಾದರೂ ತುರ್ತಾಗಿ ಹಣಕಾಸಿನ ಅವಶ್ಯಕತೆ ತಲೆದೋರಿದಾಗ, ನೆರವಾಗಲೆಂದು 'ಸಿಬ್ಬಂದಿ ನಿಧಿ'ಯನ್ನು ಸ್ಥಾಪಿಸಿದರು.

# ಅಣೆಕಟ್ಟು ಎಂಬ ಟಿಕ್‌ಟಿಕ್ ಟೈಮ್ ಬಾಂಬ್!

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

Never give up; for even rivers someday wash dams away- ಇದೊಂದು ಪ್ರೇರಣೆಯ ಮಾತು. ಅಣೆಕಟ್ಟು ಅಡ್ಡಿಯಾದರೆ, ನದಿ ಹತಾಶಗೊಳ್ಳುವುದಿಲ್ಲ ಎಂಬುದಕ್ಕೆ ಮಾದರಿ. ಅಸಲಿ ಅಣೆಕಟ್ಟುಗಳ ಮಟ್ಟಿಗೂ ಈ ಮಾತು ಅಷ್ಟೇ ಸತ್ಯ. ನದಿ ಒಂದಿಲ್ಲೊಂದು ದಿನ ಅಡ್ಡಗಟ್ಟಿದ ಅಣೆಕಟ್ಟನ್ನು ಸರ್ವನಾಶ ಮಾಡಿಯೇ ತೀರುತ್ತದೆ. ಅಣೆಕಟ್ಟುಗಳ ವೈಫಲ್ಯಗಳು ಅಣೆಕಟ್ಟುಗಳಷ್ಟೇ ಹಳೆಯವು ಎಂಬೊಂದು ಮಾತಿದೆ. ಈ ವಾರ ತುಂಗಭದ್ರಾ ಅಣೆಕಟ್ಟಿನ ಕ್ರಸ್ಟ್ ಗೇಟಿನ ಸರಪಳಿಯೊಂದು ತುಂಡಾಗಿ ಬಾಗಿಲು ಕೊಚ್ಚಿಕೊಂಡು ಹೋದ ಸುದ್ದಿ ಕೇಳಿರುತ್ತೀರಿ. ಇದೊಂದು ಎಚ್ಚರಿಕೆಯ ಗಂಟೆ. ಒಂದು ದೊಡ್ಡ ಅವಘಡ ಸ್ವಲ್ಪದರಲ್ಲಿಯೇ ತಪ್ಪಿದೆ.

ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದ ಒಂದು ಚಿಕ್ಕ ಊರು ಜೋನ್ಸ್ ಟೌನ್. 1880- ಅಮೆರಿಕದಲ್ಲಿ ಕೈಗಾರಿಕಾ ಕ್ರಾಂತಿಯ ಸಮಯ. ಇಡೀ ದೇಶದ ಜನರೆಲ್ಲ ಒಂದಿಲ್ಲೊಂದು ಕೈಗಾರಿಕೆಯ ಜತೆ ಜೀವನವನ್ನು ಜೋಡಿಸಿಕೊಂಡಿದ್ದರು. ಈಗ ಆಪಲ್, ಗೂಗಲ್ ಮೊದಲಾದ ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡಬೇಕೆಂಬ, ಡಾಕ್ಟರ್ ಆಗಬೇಕೆಂಬ ಹಂಬಲದಂತೆ ಅಂದಿನ ದಿನಗಳಲ್ಲಿ ಸ್ಟೀಲ್ ಮಿಲ್‌ಗಳಲ್ಲಿ ಕೆಲಸ ಮಾಡಬೇಕೆಂಬುದು ಪ್ರತಿಯೊಬ್ಬ ಯುವಕನ ಮಹತ್ವಾಕಾಂಕ್ಷೆ. ಅಲ್ಲಿ ಕೆಲಸ ಸಿಕ್ಕರೆ ಬಸವಳಿಯುವಷ್ಟು ಸಮಯ ದಿನದಲ್ಲಿ ದುಡಿಯಬಹುದು. ನದಿ ನೀರು ಹರಿಯುತ್ತಿದೆಯೆಂದರೆ ಅಲ್ಲೊಂದು ಸ್ಟೀಲ್ ಮಿಲ್ ತಲೆಯೆತ್ತಿ ನಿಲ್ಲುತ್ತಿತ್ತು. ಅಂಥದ್ದೇ ಹರಿಯುವ ನದಿಯ ಅಂಚಿನಲ್ಲಿ ಸ್ಟೀಲ್ ಮಿಲ್‌ಗಳಿದ್ದ ಒಂದು ಊರು ಜೋನ್ಸ್ ಟೌನ್. ಈ ಮಿಲ್‌ಗಳ ಒಂದಿಷ್ಟು ಸಾಹುಕಾರರು ಅಲ್ಲಿಯೇ ಊರಿಂದ ಮೇಲಿರುವ ಬೆಟ್ಟದಲ್ಲೊಂದು ಮೋಜಿನ ಕ್ಲಬ್ ಕಟ್ಟಿಕೊಂಡಿದ್ದರು. ಆ ಕ್ಲಬ್‌ಗೆ ತಾಗಿಯೇ ಒಂದು ತೊರೆ, ಅದಕ್ಕೊಂದು ಅಣೆಕಟ್ಟು. ಈ ಸಾಹುಕಾರರು ಆ ಜಾಗ ಖರೀದಿ ಮಾಡಿದ ನಂತರ ಅಲ್ಲಿನ ಡ್ಯಾಮ್ ಕೂಡ ಅವರ ಸುಪರ್ದಿಗೇ ಬಂತು. ಡ್ಯಾಮ್, ಅದರಿಂದಾದ ಮಾನವ ನಿರ್ಮಿತ ಒಂದು ಬೃಹತ್- ಮೈಲುಗಳ ಲೆಕ್ಕದ ಅಗಲದ ಕೆರೆ. ಅಲ್ಲಿ ಮೀನು ಹಿಡಿಯುವುದು ಅಲ್ಲಿರುವ ಸಾಹುಕಾರರ ಮೋಜಿನ ಹವ್ಯಾಸ. ಬೇಕಾಬಿಟ್ಟಿ ಮೀನು ಹಿಡಿಯುವುದು, ಆಮೇಲೆ ಎಲ್ಲೆಂದರಲ್ಲಿ ಮೀನಿನ ಬಲೆಗಳನ್ನು ಎಸೆಯುವುದು ಇತ್ಯಾದಿ. 1889ರ ಆ ಒಂದು ದಿನ ಪೆನ್ಸಿಲ್ವೇನಿಯಾದ ಗುಡ್ಡಗಾಡುಗಳಲ್ಲಿ ಎಲ್ಲಿಲ್ಲದ ಮಳೆ ಶುರುವಾಯಿತು. ಮಳೆ ಒಂದು ದಿನವಾದರೂ ನಿಲ್ಲಲೇ ಇಲ್ಲ. ಚಿಕ್ಕ ತೊರೆಗಳೆಲ್ಲ ನದಿಗಳಾಗಿ ಗುಡ್ಡವನ್ನು ಕೊರೆಯುತ್ತ ರಭಸವಾಗಿ ಈ ಡ್ಯಾಮ್‌ಗೆ ನುಗ್ಗತೊಡಗಿದವು. ನೋಡ ನೋಡುತ್ತ ಆ ಅಣೆಕಟ್ಟು ತುಂಬತೊಡಗಿತು. ಸಾಹುಕಾರರಿಗೆಲ್ಲ ಆಗ ಅಧೈರ್ಯವಾಯಿತು. ಡ್ಯಾಮ್‌ನಿಂದ ಇನ್ನು ನೀರು ಹೊರಕ್ಕೆ ಬಿಡಲಿಲ್ಲವೆಂದರೆ ಇಡೀ ಡ್ಯಾಮ್ ಮುರಿದುಬೀಳುವ ಸ್ಥಿತಿ. ಆ ಡ್ಯಾಮ್‌ನ ಕೆಳಗಡೆ ಇರುವ ಊರಲ್ಲಿ ಸುಮಾರು ಇಪ್ಪತ್ತು ಸಾವಿರ ಜನ ವಸತಿ. ಆ ಜನಕ್ಕೆಲ್ಲ ಊರ ಹೊರಗೆ, ಮೇಲ್ಗಡೆ ಇಂಥದ್ದೊಂದು ಅಣೆಕಟ್ಟು ಇದೆ ಎನ್ನುವುದೇ ಮರೆತು ಹೋಗಿತ್ತು. ನೀರು ತುಂಬುತ್ತಲೇ ಹೋಯಿತು. ಡ್ಯಾಮ್‌ನ ಗೇಟ್ ಅನ್ನು ತೆರೆಯಲು ಹೊರಟರೆ ಅಲ್ಲಿ ಮೀನಿನ ಬಲೆಗಳಿಗೆ ಸಿಕ್ಕಿಕೊಂಡ ಕಸಕಡ್ಡಿಗಳು. ಎಷ್ಟೇ ಪ್ರಯತ್ನಪಟ್ಟರೂ ಗೇಟ್ ತೆರೆಯಲಾಗಲೇ ಇಲ್ಲ, ಅಲ್ಲಿನ ಸಾಹುಕಾರರೆಲ್ಲ ತಲೆ ಮೇಲೆ ಕೈ ಹೊತ್ತು ಕುಳಿತರು. ತಕ್ಷಣಕ್ಕೆ ಒಬ್ಬ ಸಾಹುಕಾರ ತನ್ನ ಒಬ್ಬ ಕೆಲಸದವನನ್ನು ಊರಿಗೆ ಕಳಿಸಿ ವಿಷಯ ತಿಳಿಸಲು ಹೇಳಿದ. ಆತ ಹೇಳಿದ ವಿಷಯಕ್ಕೆ ಊರಿನ ಸರಕಾರಿ ಮುಖ್ಯಸ್ಥ ಕ್ಯಾರೇ ಅನ್ನಲಿಲ್ಲ. ಡ್ಯಾಮ್ ಕಂಠಪೂರ್ತಿಯಾಗಿ, ನಂತರ ತುಂಬಿ ಮುರಿದುಬಿತ್ತು. ನೋಡನೋಡುತ್ತಲೇ ಮನೆ, ಸ್ಟೀಲ್ ಮಿಲ್‌ಗಳು, ಜನರು ಕೊಚ್ಚಿಹೋದರು. ಅಂದು ಸತ್ತವರು ಬರೋಬ್ಬರಿ ಎರಡು ಸಾವಿರದ ಇನ್ನೂರು ಮಂದಿ. ಅದೆಷ್ಟೋ ವಂಶವೇ ಅಂದು ನಿರ್ವಂಶವಾಯಿತು. ಕಥೆ ಒಂದೂವರೆ ಶತಮಾನದ ಹಿಂದಿನದೇ ಇರಬಹುದು. ಇಂದಿಗೆ ತೀರಾ ಅಪ್ರಸ್ತುತವೆನಿಸಬಹುದು. ಆ ಭಾವವನ್ನು ಹಾಗೆಯೇ ಒಂದಿಷ್ಟು ಹೊತ್ತು ಹಿಡಿದಿಟ್ಟುಕೊಳ್ಳಿ.

ಅಲ್ಲಿಂದ ಒಂದು ಶತಮಾನ ಮುಂದಕ್ಕೆ ಭಾರತಕ್ಕೆ ಬರೋಣ. 1979, ಗುಜರಾತಿನ ಮಚ್ಚು ನದಿಗೆ ಮೊರ್ಬಿಯಲ್ಲಿ ಅಡ್ಡವಾಗಿ ಕಟ್ಟಿದ ಡ್ಯಾಮ್. ಮತ್ತದೇ ಅತಿವೃಷ್ಟಿ ಸ್ಥಿತಿ. ಡ್ಯಾಮ್ ಮುರಿದುಬಿದ್ದು ಕೈಗಾರಿಕಾ ನಗರವಾದ ಮೊರ್ಬಿ ಇಪ್ಪತ್ತೇ ನಿಮಿಷದಲ್ಲಿ ಕೊಚ್ಚಿಹೋಯಿತು. ಸತ್ತವರ ಸಂಖ್ಯೆ ಸರಿಯಾಗಿ ಲೆಕ್ಕವೇ ಸಿಗಲಿಲ್ಲ, ಅಂದಾಜಿನ ಪ್ರಕಾರ 25 ಸಾವಿರ.

ಸ್ಥಳ- ಚೀನಾದ ಜ್ಯುಮಾಡಿಯನ್. ಅತಿವೃಷ್ಟಿಯಿಂದಾಗಿ ಡ್ಯಾಮ್ ಒಡೆದು ಅಲ್ಲಿ ಸತ್ತವರ ಸಂಖ್ಯೆ ಎರಡೂವರೆ ಲಕ್ಷ ಅಥವಾ ಅದಕ್ಕಿಂತ ಜಾಸ್ತಿ. ಇದೇ ವರ್ಷ ಉತ್ತರಾಖಂಡದ ಚಮೋಲಿಯಲ್ಲಿ ನಡೆದ ಘಟನೆ ಆಗಲೇ ಮರೆತುಬಿಟ್ಟಿದ್ದೇವೆ. ಋಷಿಗಂಗಾ ಡ್ಯಾಮ್ ಒಡೆದು ದೇಶಕ್ಕೆ ದೇಶವೇ ದಿಗಿಲಾಗಿತ್ತು. ಇದು ಇದೊಂದೆರಡು ಉದಾಹರಣೆ ಅಷ್ಟೆ. 2000ದಿಂದ 2009ರ ನಡುವೆ, ಒಂದೇ ದಶಕದಲ್ಲಿ ಈ ರೀತಿ ಡ್ಯಾಮ್ ಒಡೆದು ಆದ ಅನಾಹುತಗಳೆಷ್ಟು ಗೊತ್ತೇ? 200ಕ್ಕಿಂತ ಜಾಸ್ತಿ. ಇದೆಲ್ಲ ಘಟನೆ, ಲೆಕ್ಕಾಚಾರ ಈಗ ನಿಮ್ಮ ಮುಂದೆ ಇಡಲು ಕಾರಣವಿದೆ.

ಡ್ಯಾಮ್ ಎಂದಾಕ್ಷಣ ಅದರ ಸುತ್ತಲಿನ ನಿರಾಶ್ರಿತರಾದವರ ಕಥೆಗಳು ಸಾಮಾನ್ಯವೆನಿಸುವಂತೆ ಕೇಳಿಬರುವುದಿದೆ. ಮನುಷ್ಯರು ನಿರಾಶ್ರಿತರಾಗಿ ಆಮೇಲೆ ಅವರ ಜಮೀನಿಗೆ ಬದಲಾಗಿ ಒಂದು ಬರಡು ಭೂಮಿಯನ್ನು ಪಡೆದು ಜೀವ ಬುಡಮೇಲಾಗಿಸಿಕೊಂಡು ಇನ್ನೆಲ್ಲಿಗೋ ಒಕ್ಕಲೆದ್ದು ಹೋಗುವುದು ಇವೆಲ್ಲ ಗೊತ್ತಿರುವುದೇ. ಈ ಡ್ಯಾಮ್ ಕಟ್ಟಿದಾಗ ಹಿನ್ನೀರಿನ ಜಾಗ ನೀರು ತುಂಬಿ ಅಲ್ಲಿನ ಸಸ್ಯ, ಪ್ರಾಣಿ ವರ್ಗವೆಲ್ಲ ಸಾಯುವುದೂ ಗೊತ್ತಿರುವುದೇ. ಅದೆಲ್ಲದಕ್ಕಿಂತ ಭೀಕರವೆನಿಸುವುದು ಆ ನದಿಯ ನೀರಿನ ಮೀನುಗಳ ಕಥೆ. ಹೆಚ್ಚಿನ ಮೀನುಗಳು ಸಾಮಾನ್ಯವಾಗಿ ಒಂದೇ ಜಾಗದಲ್ಲಿ ಜೀವಮಾನವಿಡೀ ಬದುಕುವ ಜೀವಿಗಳಲ್ಲ, ಅವು ಕೂಡ ಥೇಟ್ ಹಕ್ಕಿಗಳಂತೆ, ನೀರಿನಲ್ಲೇ ಮೊಟ್ಟೆಯಿಡಲು, ಸಂತಾನೋತ್ಪತ್ತಿಗೆ ಇನ್ನೊಂದು ಕಡೆ ಹೋಗುತ್ತವೆ. ನದಿಯಲ್ಲೇ ನೂರು ಮೈಲಿಗಿಂತ ಜಾಸ್ತಿ ದೂರ ವಲಸೆ ಹೋಗುವ ಮೀನುಗಳು ಕೂಡ ಇವೆ. ಕಾಲಕ್ಕೆ ತಕ್ಕಂತೆ ಇರುವ ವಲಸೆ ಕೂಡ ಇದೆ. ಈ ಡ್ಯಾಮ್ ಕಟ್ಟಿಬಿಟ್ಟರೆ ಆ ಪ್ರವಾಸಕ್ಕೆಲ್ಲ ರುಕಾವಟ್. ವಾಷಿಂಗ್ಟನ್ ರಾಜ್ಯದ ಎಲ್ವಾ ನದಿಯ ಸಾಲ್ಮನ್ ಮೀನಿನ ಕಥೆಯನ್ನು ನಿಮಗೆ ಹೇಳಲೇಬೇಕು. ಅದೆಷ್ಟೋ ಸಾವಿರ ಅಥವಾ ಲಕ್ಷ ವರ್ಷದಿಂದ ಸಾಲ್ಮನ್ ಮೀನು ಈ ನೀರಿನಲ್ಲಿ ಇದೇ ರೀತಿ ವಲಸೆ ಮಾಡುತ್ತಿತ್ತು. ಚಳಿಯಲ್ಲಿ ದಕ್ಷಿಣಕ್ಕೆ ವಲಸೆ ಹೋಗುವ ಮೀನುಗಳು ಬೇಸಿಗೆ ಬಂತೆಂದರೆ ಉತ್ತರಕ್ಕೆ ನೂರುಗಟ್ಟಲೆ ಮೈಲಿ ಪ್ರವಾಸಕ್ಕೆ ಹೊರಡುತ್ತಿದ್ದವು. ಇಂಥ ಸ್ವಚ್ಛಂದ ಜೀವನವನ್ನು ನಡೆಸಿಕೊಂಡು ಬದುಕಿದ್ದ ಈ ಮೀನುಗಳ ದಾರಿಯಲ್ಲಿ ಒಂದು ವರ್ಷ ಇದ್ದಕ್ಕಿದ್ದಂತೆ ಒಂದು ಡ್ಯಾಮ್ ಅಡ್ಡಲಾಗಿ ಎದ್ದು ನಿಂತಿತು. ಇದರಿಂದ ಅವುಗಳ ವಲಸೆ ನಿಂತುಹೋಯಿತು. ಕೋಟಿ ಸಂಖ್ಯೆಯಲ್ಲಿದ್ದ ಮೀನುಗಳು ವಿನಾಶದ ಅಂಚಿಗೆ ಬಂದು ನಿಂತವು. ಈ ಡ್ಯಾಮ್ ನಿರ್ಮಾಣವಾಗಿ ನೂರಿಪ್ಪತ್ತು ವರ್ಷ, ಐವತ್ತು ಅಥವಾ ಅದಕ್ಕಿಂತ ಜಾಸ್ತಿ ತಲೆಮಾರುಗಳೇ ಕಳೆದರೂ ಈ ವಲಸೆ ಅಭ್ಯಾಸವನ್ನು ಮೀನುಗಳು ಮರೆಯಲಿಲ್ಲ, ಇದು ಅವುಗಳ ಜೀನ್‌ನಲ್ಲೇ ಅಚ್ಚೊತ್ತಿದ್ದ ವಿಷಯ. ಹಾಗಿರುವಾಗ ಆ ವಲಸೆಯ ಮಹತ್ವ ಅವುಗಳಿಗೆ ಎಷ್ಟು ಮುಖ್ಯವಿರಬಹುದು ಎಂದು ಗ್ರಹಿಸಿ. ಈ ಸಾಲ್ಮನ್ ಮೀನುಗಳು ರಾಶಿಯಾಗಿ ಬಂದು ಸೇರುತ್ತಿದ್ದವು. ಡ್ಯಾಮ್‌ನ ಗೋಡೆಗಳಿಗೆ ನೆಗೆನೆಗೆದು ಹಾರಿ, ಕಾಂಕ್ರೀಟ್ ಗೋಡೆಗೆ ಬಡಿದು ಅರ್ಧಕರ್ಧ ಮೀನುಗಳು ಜೀವ ಬಿಡುತ್ತಿದ್ದವು. ಅಲ್ಲಿನ ನೀರು ಕಂಪಾಗುವಷ್ಟು. ಅಲ್ಲಿ ಸೇರುವ ಆ ಮೀನುಗಳನ್ನು ಹಿಡಿಯಲು ಹದ್ದು, ಕರಡಿ, ತೋಳ ಮತ್ತು ತೋಳಗಳಂಥ ಮನುಷ್ಯ ಮುಗಿಬೀಳುತ್ತಿದ್ದ. ಕೊನೆಗೊಂದು ದಿನ ಈ ರೀತಿ ಅಲ್ಲಿ ಸೇರುವ ಮೀನಿನ ಸಂಖ್ಯೆ ನೂರಕ್ಕಿಳಿಯಿತು. ಅದು ಹೇಗೋ ಅಷ್ಟು ವರ್ಷ ಈ ಸಂತತಿ ಅಲ್ಲಿ ಬದುಕುಳಿದಿದ್ದೇ ಒಂದು ಸೋಜಿಗ. ಆಗ ಎಚ್ಚೆತ್ತುಕೊಂಡ ಅಲ್ಲಿನ ಸರಕಾರ ಮೀನನ್ನು ದೊಡ್ಡ ದೊಡ್ಡ ಟ್ಯಾಂಕ್‌ನಲ್ಲಿ ತುಂಬಿಸಿ ಆಚೆಯಿಂದ ಈಚೆಗೆ ಸಾಗಿಸುವ ವ್ಯವಸ್ಥೆ ಮಾಡಿತು. ಕೊನೆಗೆ 2011ರಲ್ಲಿ ಈ ಅಣೆಕಟ್ಟನ್ನು ಕೆಡವಲಾಯಿತು. ಈಗ ಈ ವಲಸೆ ಮತ್ತೆ ಶತಮಾನದ ಹಿಂದಿನ ವೈಭವಕ್ಕೆ ಮರಳಿದೆ. ಮತ್ತೆ ಸಾಲ್ಮನ್ ಮೀನಿನ ಸಂಖ್ಯೆ ವರ್ಷ ಕಳೆದಂತೆ ಹೆಚ್ಚುತ್ತಿದೆ.

ಇದು ಒಂದು ಅಣೆಕಟ್ಟಿನ- ಒಂದು ಮೀನಿನ ಕಥೆ. ಸದ್ಯ ಅಮೆರಿಕದಲ್ಲೇ 15,600 ಚಿಕ್ಕ, ಮಧ್ಯಮ ಮತ್ತು ಬೃಹತ್ ಡ್ಯಾಮ್‌ಗಳಿವೆ. ಇಂದು ಭಾರತದಲ್ಲಿ ಹದಿನೈದು ಮೀಟರಿಗಿಂತ ದೊಡ್ಡ 5,200 ಡ್ಯಾಮ್‌ಗಳಿವೆ. ಪ್ರಪಂಚದಾದ್ಯಂತ 60,000 ಡ್ಯಾಮ್‌ಗಳಿವೆ. ಡ್ಯಾಮ್ ಇಲ್ಲದ ನದಿಯೇ ಇಲ್ಲ ಎಂದರೂ ತಪ್ಪಲ್ಲ. ನೀವು ಈಗ ಈ ಲೇಖನ ಓದುತ್ತಿರುವ ಸಂದರ್ಭದಲ್ಲಿಯೇ ಜಗತ್ತಿನಲ್ಲಿ 3,700 ಅಣೆಕಟ್ಟುಗಳು ನಿರ್ಮಾಣಹಂತದಲ್ಲಿವೆ. ಅಲ್ಲೆಲ್ಲ ಈ ಸಾಲ್ಮನ್ ಮೀನಿನಂತೆ ಅದೆಷ್ಟೋ ಜೀವಿಗಳ, ಜಲಚರಗಳ ಜೀವನಗಳು ಬುಡಮೇಲಾಗಿವೆ.

ನದಿಯ ಹರಿವು ಏಕಮುಖವಾದರೂ ಅಲ್ಲಿನ ಜೀವದ ಹರಿವಿನದು ಎರಡೂ ಮುಖ. ಫಲವತ್ತತೆಯನ್ನು ನದಿಗಳು ಹೊತ್ತು ಕೆಳಮುಖವಾಗಿ ಹರಿದರೆ ಮೀನುಗಳು, ಜಲಚರಗಳು ಮೇಲ್ಮುಖವಾಗಿ ಚಲಿಸಿ ಕೆಳಗಿನಿಂದ ಮೇಲಕ್ಕೆ ಫಲವತ್ತತೆಯನ್ನು ಸಾಗಿಸುತ್ತವೆ. ಇದು ಅಲ್ಲಿನ ಕೀಟಗಳಿಗೆ, ಉಳಿದ ಜೀವಗಳಿಗೆ ಆಹಾರವಾಗಿ ಅಲ್ಲಿ ಮರಗಿಡಗಳ ಜೀವನಕ್ಕೂ ಸೂಕ್ಷ್ಮವಾಗಿ ಹೊಂದಿಕೆಯಿಂದಿರುತ್ತವೆ. ಇದೆಲ್ಲ ಸೂಕ್ಷ್ಮ ಕೊಂಡಿ ಮುರಿಯಲು ಒಂದು ಡ್ಯಾಮ್ ಸಾಕು. ಯಾವುದೇ ನಾಗರಿಕತೆಯನ್ನೇ ತೆಗೆದುಕೊಳ್ಳಿ, ನದಿಯ ದಡದಂಚಿನಲ್ಲಿ ಬೆಳೆಯಿತು ಎನ್ನುವುದೇ ಅಲ್ಲಿನ ಕಥೆ. ಅದರಂತೆಯೇ ಜೀವಜಗತ್ತಿನ ಎಲ್ಲವೂ ಮನುಷ್ಯನ ಜತೆ ಜತೆಯಲ್ಲೇ ಬೆಳೆದದ್ದು ನದಿಯ ಕಾರಣದಿಂದಲೇ ಮತ್ತು ಆಸುಪಾಸಿನಲ್ಲೇ. ಕಳೆದ ಇನ್ನೂರು ವರ್ಷದಲ್ಲಿ ಎಲ್ಲಿಲ್ಲದ ಪ್ರಮಾಣದಲ್ಲಿ ಡ್ಯಾಮ್ ಕಟ್ಟಿ ಈ ಸೂಕ್ಷ್ಮತೆಗೆ ಹೊಡೆತ ಬಿದ್ದಿದೆ ಎಂದರೆ ಈಗ ನಿಮಗೆ ಮನದಟ್ಟಾದೀತು. ಒಂದು ಡ್ಯಾಮ್‌ನಿಂದ ಆಗುವ ಅನಾಹುತಗಳ ಬಗ್ಗೆ ಇಷ್ಟು ಸಾಕು.

ಡ್ಯಾಮ್‌ನಿಂದ ಆಗುವ ಮನುಷ್ಯ ಲಾಭಗಳ ಬಗ್ಗೆ, ಅದರಿಂದ ಆಗುವ ಆರ್ಥಿಕ ಲಾಭಗಳ ಬಗ್ಗೆ ಸಂಪೂರ್ಣ ಅರಿವಿದೆ. ಆ ಮಟ್ಟಿಗೆ ಎರಡನೇ ಮಾತಿಲ್ಲ. ಈಗ ಈ ಎಲ್ಲ ಡ್ಯಾಮ್ ಕಟ್ಟಿ ಆಗಿದೆ. ಇನ್ನೊಂದು ಹದಿನಾಲ್ಕು ಸಾವಿರ ಚಿಕ್ಕ ಡ್ಯಾಮ್‌ಗಳನ್ನು ಕಟ್ಟಲು ಕರ್ನಾಟಕದ ಕೃಷಿ ಮಂತ್ರಿ ಕೇಂದ್ರಕ್ಕೆ ಬೇಡಿಕೆಯಿಡುವ ಸುದ್ದಿ ನಿನ್ನೆ ಅಷ್ಟೇ ಓದಿದ್ದೇನೆ. ಅದು ಕೂಡ ಕೃಷಿಗೆ, ಕೈಗಾರಿಕೆಗೆ, ಜನಸಂಖ್ಯೆ ಹೆಚ್ಚಳದಿಂದ ಉಂಟಾಗಿರುವ ಆಹಾರ ಮತ್ತು ಇತರ ಬೇಕುಗಳಿಗೆ ಅವಶ್ಯಕ. ಒಪ್ಪಲೇಬೇಕು.

ಮನುಷ್ಯ ತನ್ನ ಬೇಕುಗಳಿಗಾಗಿ ಪರಿಸರವನ್ನು, ಜಲಚರ ಮತ್ತು ಉಳಿದ ಜೀವಜಗತ್ತನ್ನು ಎರಡನೇ ಸ್ಥಳದಲ್ಲಿಡಬಾರದು ಎಂದು ಕೂಡ ಹೇಳುತ್ತಿಲ್ಲ, ಆದರೆ ಅದೆಲ್ಲದರ ನಡುವೆ ಈ ಹತ್ತಾರು ಅಡ್ಡಪರಿಣಾಮಗಳ ಅಂದಾಜು ಕೂಡ ಇರಬೇಕು.

ಹಾಗಂತ ಡ್ಯಾಮ್‌ಗಳನ್ನು ಮನುಷ್ಯ ನಿರ್ಮಿಸಲು ಶುರು ಮಾಡಿ ಇನ್ನೂರೇ ವರ್ಷವಾಗಿದೆ ಎಂದೇನಲ್ಲ. ಮೆಸಪೊಟೇಮಿಯಾ ಕಾಲದಲ್ಲಿಯೇ ಅಣೆಕಟ್ಟು ನಿರ್ಮಿಸಿದ ಇತಿಹಾಸವಿದೆ. ಜೋರ್ಡನ್‌ನ ಜಾವಾ ಡ್ಯಾಮ್ ಕ್ರಿಸ್ತಪೂರ್ವ 3000ದಲ್ಲಿ ಎಂದರೆ ಇವತ್ತಿಗೆ ಐದು ಸಾವಿರ ವರ್ಷಕ್ಕಿಂತ ಮೊದಲು ನಿರ್ಮಿಸಲಾದ ಬಗ್ಗೆ ಕುರುಹು, ಪುರಾವೆ ಸಿಕ್ಕಿದೆ. ಅವೆಲ್ಲ ಇತಿಹಾಸ. ಆದರೆ ಯಥೇಚ್ಛ- ಇಷ್ಟು ಪ್ರಮಾಣದ ಡ್ಯಾಮ್‌ಗಳು ನಿರ್ಮಾಣವಾದದ್ದು ಮಾತ್ರ ಕಳೆದ 2-3 ಶತಮಾನದಲ್ಲಿ. ಯಾವುದೇ ಡ್ಯಾಮ್ ತೆಗೆದುಕೊಳ್ಳಿ, ಅದನ್ನು ಒಂದು ಉದ್ದೇಶ ಇಟ್ಟುಕೊಂಡು ನಿರ್ಮಿಸಲಾಗುತ್ತದೆ ಮತ್ತು ಅದೇ ಸಮಯದಲ್ಲಿ ಅದಕ್ಕೊಂದು ನಿಗದಿತ ಆಯಸ್ಸು ಕೂಡ ನಿರ್ಧರಿತವಾಗಿರುತ್ತದೆ. ಯಾವ ಡ್ಯಾಮ್ ಕೂಡ ಒಂದು ಶಾಶ್ವತ, ಕೋಟಿ ವರ್ಷ ಬದುಕಬಲ್ಲ ರಚನೆಗಳಲ್ಲ. 1930ರಿಂದ 1970ರ ಅವಧಿಯಲ್ಲಿ ಅಂದಿನ ತಂತ್ರಜ್ಞಾನವನ್ನು ಬಳಸಿ ಕಟ್ಟಿದ ಎಲ್ಲ ಡ್ಯಾಮ್‌ಗಳ ಆಯಸ್ಸು ನೂರು ವರ್ಷ. ಹಾಗೂ ಹೀಗೂ- ತೇಪೆ ಹಚ್ಚಿ ನೋಡಿಕೊಂಡರೆ ಅಬ್ಬಬ್ಬಾ ಎಂದರೆ ನೂರಿಪ್ಪತ್ತರಿಂದ ನೂರಾಮೂವತ್ತು ವರ್ಷ. ಈ ಆಯಸ್ಸು ಹತ್ತಾರು ಕಾರಣಗಳಿಂದ ಐವತ್ತಕ್ಕೂ ಇಳಿಯಬಹುದು. ಅದಾದಮೇಲೆ ಅವನ್ನು ಕೆಡವಬೇಕಾಗುತ್ತದೆ. ಇಲ್ಲದಿದ್ದರೆ ಅಂಥ ಡ್ಯಾಮ್ ಒಂದು ಜೀವಂತ, ಟಿಕ್‌ಟಿಕ್‌ಗುಡುವ ಟೈಮ್ ಬಾಂಬ್. ಮೇಲ್ನೋಟಕ್ಕೆ, ಈಗ ನಿಂತಿರುವ ಎಲ್ಲ ಡ್ಯಾಮ್‌ಗಳೂ ಒಂದು ಎಂಜಿನಿಯರಿಂಗ್ ವಂಡರ್, ಎಂದಿಗೂ ಅಲುಗಾಡದ ಒಂದು ಬೃಹತ್ ರಚನೆಯಂತೆ ಕಂಡರೂ ಅದರ ದೌರ್ಬಲ್ಯವನ್ನು ಕಣ್ಣೋಟದಿಂದ ಅಳೆಯಲು ಸಾಧ್ಯವಾಗುವುದಿಲ್ಲ. ಅಮೆರಿಕದಿಂದ ಹಿಡಿದು ಭಾರತ, ಚೀನಾ ಇಲ್ಲೆಲ್ಲಾ ಒಡೆದ ಡ್ಯಾಮ್‌ಗಳು ಯಾವತ್ತೂ ಯಾರಿಗೂ ದುರ್ಬಲವಾಗಿ ಕಾಣಿಸಿಲ್ಲ, ಅಥವಾ ಕಾಣಿಸಿದರೂ ಅದನ್ನು ನಾನಾಕಾರಣಗಳಿಂದ ಮುಚ್ಚಿಟ್ಟು ಅನಾಹುತಗಳಾದದ್ದು. ಎಲ್ಲ ಸರಕಾರಗಳಿಗೂ ಈ ಡ್ಯಾಮ್ ಒಂದು ಪುಕುಪುಕು ವಿಚಾರವೇ. ಹೇಗೋ ಇದೆ, ಹಾಗೆಯೇ ಇದ್ದುಬಿಡಲಿ ಎನ್ನುವ ತಾತ್ಸಾರ.

ಆದರೆ ಅಮೆರಿಕ ಮತ್ತು ಕೆಲವು ದೇಶಗಳು ಈ ಅಪಾಯವನ್ನು ಅರಿತು ಈಗಾಗಲೇ ಕಾರ್ಯೋನ್ಮುಖವಾಗಿವೆ. ಕಳೆದ ಒಂದು ಶತಮಾನದಲ್ಲಿ ಈ ರೀತಿಯ ವಯೋವೃದ್ಧ 800 ಡ್ಯಾಮ್‌ಗಳನ್ನು ನಾಶಮಾಡಲಾಗಿದೆ. ಬಹುತೇಕ ಮುಂದುವರಿದ ದೇಶಗಳೆಲ್ಲ ಈ ಕೆಲಸವನ್ನು ಎಲ್ಲಿಲ್ಲದ ಗಡಿಬಿಡಿಯಲ್ಲಿ ಇಂದು ಮಾಡುತ್ತಿವೆ. ಹೀಗೆ ಅಣೆಕಟ್ಟನ್ನು ನಾಶಮಾಡಿದ ನಂತರ, ಅಲ್ಲೆಲ್ಲ ಮತ್ತೆ ಜೀವಜಗತ್ತು ನಿಧಾನ ಗತಿಯಲ್ಲಿ ಚಿಗುರಿಕೊಂಡಿವೆ. ನದಿ ಭೂಮಿಯ ಜೀವ ಹರಿವಿನ ನರಗಳಂತೆ. ಅಣೆಕಟ್ಟುಗಳು ಈ ಭೂಮಿಯ ಹೃದಯದ ಬ್ಲಾಕ್‌ಗಳಂತೆ. ಹಾಗಂತ ಈ ಬ್ಲಾಕ್ ಅನ್ನು ತೆರೆಯುವುದು ಕೂಡ ಅಷ್ಟು ಸುಲಭದ ಕಥೆಯಲ್ಲ, ಡ್ಯಾಮ್ ಅನ್ನು ತೆರವುಗೊಳಿಸಿದಾಗ ಅಲ್ಲಿನ್ನೊಂದಿಷ್ಟು ಮುನ್ನೀರಿನ ಪ್ರದೇಶದಲ್ಲಿ ನಿರಾಶ್ರಿತರ ಸಮಸ್ಯೆ ಎದುರಾಗುತ್ತದೆ. ಅಲ್ಲದೆ ಡ್ಯಾಮ್ ನಾಶಮಾಡುವಾಗ ಉಂಟಾಗುವ ಸಿಮೆಂಟ್ ಮತ್ತು ಕಲ್ಲಿನ ತ್ಯಾಜ್ಯವನ್ನು ಹಾಗೆಯೇ ಎಸೆದು ಬಿಡುವಂತಿಲ್ಲ, ಅದನ್ನು ಸಾಗಿಸಿ ಅದಕ್ಕೊಂದು ಗತಿಗಾಣಿಸುವುದು ಕೂಡ ಅಷ್ಟೇ ದೊಡ್ಡ ತಲೆಬಿಸಿಯ ಕೆಲಸ. ಅಲ್ಲದೇ ನೂರು ವರ್ಷದ ಡ್ಯಾಮ್‌ನಿಂದಾಗಿ ಹಿನ್ನೀರಿನ ಮತ್ತು ಮುನ್ನೀರಿನ ಜೀವಜಗತ್ತು ಶಾಶ್ವತವೆನ್ನುವಂತೆ ಬದಲಾವಣೆಯನ್ನು ಆಗತಾನೆ ಒಪ್ಪಿಕೊಂಡಿರುತ್ತವೆ. ಅವೆಲ್ಲ ಒಂದು ಡ್ಯಾಮ್‌ನ ತೆರವಿನಿಂದ ಮತ್ತೊಮ್ಮೆ ಆಘಾತಕ್ಕೊಳಗಾಗುತ್ತವೆ. ಹೀಗೆ ಮಾಡಿದರೂ ಸಮಸ್ಯೆಯೇ, ಹಾಗೆ ಮಾಡಿದರೂ ಸಮಸ್ಯೆ ತಪ್ಪಿದ್ದಲ್ಲ. ವಾತಾವರಣದಲ್ಲಿನ ಮಾನವಕೃತ ವೈಪರೀತ್ಯ, ಬದಲಾವಣೆಯಿಂದ ಈಗಾಗಲೇ ನದಿಯ ಜಲಚರಗಳ, ಪರಿಸರವ್ಯವಸ್ಥೆ ಬುಡಮೇಲಾಗುತ್ತಲಿದೆ. ಇದಕ್ಕೆ ಇನ್ನಷ್ಟು ಇಂಬುಕೊಡುವುದು ಅಣೆಕಟ್ಟುಗಳು.

ಜಪಾನ್ ಮತ್ತು ಬ್ರಿಟನ್ ಇಂದು ಅತ್ಯಂತ ಹಳೆಯ ಡ್ಯಾಮ್‌ಗಳನ್ನು ಹೊಂದಿದ ದೇಶಗಳು. ಬ್ರಿಟನ್ನಿನ ಅಣೆಕಟ್ಟಿನ ಸರಾಸರಿ ವಯಸ್ಸು 106 ವರ್ಷ. ಜಪಾನಿನದು 111 ವರ್ಷ. ಅಮೆರಿಕದ ಅಣೆಕಟ್ಟುಗಳ ಸರಾಸರಿ ವಯಸ್ಸು 65. ಅದಾದ ನಂತರದ್ದು ಭಾರತ ಮತ್ತು ಚೀನಾ. ಭಾರತದಲ್ಲಂತೂ ಬಹುತೇಕ ಅಣೆಕಟ್ಟುಗಳು ನಿರ್ಮಾಣವಾದದ್ದು ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ, ಹಾಗಾಗಿ ನಾವು ಕೂಡ ಬಹಳ ಹಿಂದೆ ಉಳಿದಿಲ್ಲ. 2050ರ ಸಮಯದಲ್ಲಿ ನಮ್ಮಲ್ಲಿನ ಹೆಚ್ಚಿನ ಅಣೆಕಟ್ಟುಗಳು ವರ್ಷ ಲೆಕ್ಕ ಹಾಕಲು ಶುರುಮಾಡಿರುತ್ತವೆ. ಬಾಕಿ ಕಥೆಯೆಲ್ಲ ಬಿಡಿ, ನಮ್ಮ ಕರ್ನಾಟಕದಲ್ಲಿ ಇರುವ ಅಣೆಕಟ್ಟುಗಳ ವಯಸ್ಸನ್ನೇ ನೋಡುವುದಾದರೆ, ಕೆಆರ್‌ಎಸ್‌ಗೆ ತೊಂಬತ್ತು ದಾಟಿದೆ. ಹೊಸಪೇಟೆಯ ತುಂಗಭದ್ರಾ ಅಣೆಕಟ್ಟಿನ ವಯಸ್ಸು 68. ಲಿಂಗನಮಕ್ಕಿ ಮತ್ತು ಭದ್ರಾ ಡ್ಯಾಮ್‌ಗೆ ಕೂಡ ಅರವತ್ತರ ಆಸುಪಾಸು. ಹಿರಿಯೂರಿನ ವಾಣಿ ವಿಲಾಸ ಸಾಗರ ಅಣೆಕಟ್ಟಿಗಂತೂ 114 ವರ್ಷ! ಕೆಲ ದಿನಗಳ ಹಿಂದೆ ಕೆಆರ್‌ಎಸ್ ಡ್ಯಾಮ್‌ನಲ್ಲಿನ ಬಿರುಕು ಎಂದು ಒಂದಿಷ್ಟು ಸುದ್ದಿಯಾಗಿತ್ತು. ಕಾರಣ ಏನೇ ಇರಬಹುದು. ಆದರೆ ಇಲ್ಲಿ ಒಂದು ಬಿರುಕೇ ಇಷ್ಟು ಸುದ್ದಿ ಮಾಡುವ ಸ್ಥಿತಿಯಲ್ಲಿರುವಾಗ ಒಂದೊಮ್ಮೆ ಅಲ್ಲಿನ ಎಂಜಿನಿಯರ್‌ಗಳೇ ಡ್ಯಾಮ್ ಕೊನೆಯ ಹಂತ ತಲುಪಿದೆ ಎಂದು ಮುಂದಿನ ದಿನ ಹೇಳಿದರೂ ಯಾರೂ ಅದರ ನಾಶದ ಬಗ್ಗೆ ಚಕಾರ ಎತ್ತಲಿಕ್ಕಿಲ್ಲ, ಆ ಡ್ಯಾಮ್ ಯಾವತ್ತಾದರೂ ಕೊನೆಯ ಹಂತ ತಲುಪಿದಾಗ ಕೂಡ, ಪ್ರಾಕ್ಟಿಕಲ್ ಆಗಿ ಕೆಡವಲೇಬೇಕಾದ ಸ್ಥಿತಿ ಬಂದಾಗ ಕೂಡ ಅಂಥದ್ದೊಂದು ಸಾಹಸಕ್ಕೆ ಬಿಡಿ, ಸೊಲ್ಲೆತ್ತಲೂ ಸಾಧ್ಯವಾಗದ ಸ್ಥಿತಿ ನಮ್ಮಲ್ಲಿದೆ. ಇದು ಮಂಡ್ಯದ ಕಥೆಯಷ್ಟೇ ಅಲ್ಲ, ಎಲ್ಲೆಲ್ಲಿ ಪ್ರಜಾಪ್ರಭುತ್ವವಿದೆಯೋ ಅಲ್ಲೆಲ್ಲ ಈ ಡ್ಯಾಮ್‌ಗಳದ್ದು ತಲೆನೋವು ಇದ್ದೇ ಇದೆ, ಇಲ್ಲದಿದ್ದರೆ ಮುಂದೊಂದು ದಿನ ಕಟ್ಟಿಟ್ಟದ್ದೇ. ಅಣೆಕಟ್ಟುಗಳು ಶಾಶ್ವತವೆನ್ನುವ ರೀತಿ ಬದುಕುವುದು, ಬದುಕು ಕಟ್ಟಿಕೊಳ್ಳುವುದು, ಅವಲಂಬಿಸುವುದು ಸರಿ. ಆದರೆ ಅದಕ್ಕೊಂದು ಅಂತ್ಯಕಾಲ ಬರುವುದರೊಳಗೆ ಅಲ್ಲೊಂದು ಪರಿಹಾರ ಸಿದ್ಧವಾಗಿರಬೇಕು, ಅದಕ್ಕೆ ಅಣಿಯಾಗಬೇಕು.

ನಿಮಗೆ ಹಳೆಯ ಬೃಹತ್ ಅಣೆಕಟ್ಟುಗಳನ್ನು ನೋಡಿದಾಗ ಎಂಜಿನಿಯರಿಂಗ್ ಮಾರ್ವೆಲ್ ಎಂದೆನಿಸಬಹುದು. ಅದರ ಅತಿವಿಸ್ತಾರ, ಆಳ, ಎತ್ತರ, ಅಗಲ ಇವೆಲ್ಲ ಭವ್ಯವೆನಿಸಬಹುದು. ಚಿಕ್ಕಪುಟ್ಟ ಅಣೆಕಟ್ಟುಗಳಲ್ಲಿ ರಭಸದಿಂದ ಹರಿಯುವ ನೀರು ನಯನ ಮನೋಹರವೆನಿಸಬಹುದು. ಆದರೆ ಇದೆಲ್ಲ ತಿಳಿದ ನಂತರ ನನಗೆ ಎಲ್ಲ ಅಣೆಕಟ್ಟುಗಳೂ ಮೊದಲು ಹೇಳಿದಂತೆ ಭೂಮಿಯ ಹಾರ್ಟ್ ಬ್ಲಾಕ್‌ನಂತೆ ಕಾಣಿಸುತ್ತವೆ. ಇನ್ನು ಎಂಬತ್ತು, ತೊಂಬತ್ತು, ನೂರು ವರ್ಷ ದಾಟಿದ ಅಣೆಕಟ್ಟುಗಳು ದೀರ್ಘಕಾಲ ಬಾಳಿ, ಎಲ್ಲ ವೈಭವವನ್ನು ಕಂಡು, ತನ್ನ ಬದುಕಿನ ಉದ್ದೇಶ ಮುಗಿಸಿ ಶರಶಯ್ಯೆಯಲ್ಲಿ ಮಲಗಿ, ಒಂದು ಅಂತ್ಯವನ್ನು ನೋಡಿ ಅಂತ್ಯ ಕಾಣುವ ಹಂಬಲದ ಗಾಂಗೇಯ (ಗಂಗೆ-ನದಿಗೆ ಜನಿಸಿದವ)- ಭೀಷ್ಮ ನಂತೆ ಕಾಣಿಸುತ್ತದೆ.

# ಅಂಚೆ ಗ್ರಾಹಕರಿಗೂ ವಕ್ಕರಿಸಿದ ಸೈಬರ್ ವಂಚಕರು

ಜನಜಾಗೃತಿ
ಡಾ. ಅಮ್ಮಸಂದ್ರ ಸುರೇಶ್
vveditoped@gmail.com

ತಂತ್ರಜ್ಞಾನ ಮುಂದುವರಿದಂತೆ ಸೈಬರ್ ಅಪರಾಧಗಳು ಕೂಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಮನುಷ್ಯನ ಜೀವನವನ್ನು ಸುಲಭಗೊಳಿಸಿರುವ ತಂತ್ರಜ್ಞಾನವೇ ಇಂದು ಕಂಟಕವಾಗಿ ಪರಿಣಮಿಸುತ್ತಿದೆ. ಸೈಬರ್ ಅಪರಾಧಿಗಳು ದಿನಕ್ಕೊಂದು ಹೊಸ ಮಾರ್ಗವನ್ನು ಕಂಡುಕೊಂಡು ಅಮಾಯಕರ ಲಕ್ಷಾಂತರ ಹಣವನ್ನು ದೋಚುತ್ತಿದ್ದಾರೆ. ಈ ಬಗ್ಗೆ ಎಚ್ಚರದಿಂದಿರದಿದ್ದರೆ ಜನರು ದೊಡ್ಡ ನಷ್ಟ ಅನುಭವಿಸುವುದು ಖಚಿತ.

ಆನ್‌ಲೈನ್ ವಂಚನೆಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಎಷ್ಟೇ ಕಠಿಣ ಕಾನೂನು, ನೀತಿ-ನಿಯಮಗಳನ್ನು ರೂಪಿಸಿದರೂ ವಂಚಕರು ಅಮಾಯಕರಿಗೆ ಟೋಪಿಹಾಕುತ್ತಲೇ ಇದ್ದಾರೆ. ಈ ವಿಷಯದಲ್ಲಿ ಎಚ್ಚರಿಕೆಯಿಂದ ಇರುವಂತೆ ಕಾಲಾನುಕಾಲಕ್ಕೆ ಸೂಚಿಸುತ್ತಿದ್ದರೂ ಅಮಾಯಕರು ಯಾಮಾರುತ್ತಲೇ ಇರುವುದು ದುರ್ದೈವದ ವಿಷಯವಾಗಿದೆ. ಪೊಲೀಸ್ ಇಲಾಖೆಗೆ ಆನ್‌ಲೈನ್ ವಂಚನೆಯನ್ನು ನಿಯಂತ್ರಿಸುವುದು ಮತ್ತು ಆರೋಪಿಗಳನ್ನು ಪತ್ತೆಹಚ್ಚುವುದು ಕಷ್ಟವಾಗುತ್ತಿದೆ.

ಕಳೆದ 4 ವರ್ಷಗಳಲ್ಲಿ ಕರ್ನಾಟಕ ರಾಜ್ಯವೊಂದರಲ್ಲೇ ಸೈಬರ್ ವಂಚನೆಗೆ ಸಂಬಂಧಿಸಿ 56,261 ಪ್ರಕರಣಗಳು ದಾಖಲಾಗಿವೆ. ಸೈಬರ್ ವಂಚನೆಯನ್ನು ತಡೆಯುವ ಹಾಗೂ ವಂಚನೆಗೊಳಗಾದವರಿಗೆ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಈಗಾಗಲೇ ರಾಜ್ಯದ ಪ್ರತಿ ಜಿಲ್ಲೆ ಮತ್ತು ನಗರ ವ್ಯಾಪ್ತಿಗಳಲ್ಲಿ ಒಂದೊಂದು ಸೈಬರ್ ಅಪರಾಧ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ (ರಾಜ್ಯದಲ್ಲಿ ಇಂಥ 43 ಠಾಣೆಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ). ಇಂಥ ಠಾಣೆ ಗಳಲ್ಲಿನ ಸಿಬ್ಬಂದಿಗೆ ಸೈಬರ್ ಅಪರಾಧಗಳ ತನಿಖಾ ಕ್ರಮಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. 1930 ಮತ್ತು 112 ಸಹಾಯ ವಾಣಿ ಆರಂಭಿಸಲಾಗಿದೆ. ಆನ್‌ಲೈನ್ ವಂಚಕರು ಜನರಿಗೆ ಮೋಸ ಮಾಡಲು ಹೊಸ ಮಾರ್ಗಗಳನ್ನು ಕಂಡು ಕೊಳ್ಳುತ್ತಿದ್ದಾರೆ. ಇಂಥ ದುರುಳರು ಬ್ಯಾಂಕ್ ಅಥವಾ ಅಂಚೆ ಕಚೇರಿ ಹೆಸರಿನಲ್ಲಿ ಕರೆಮಾಡಿ ಅಥವಾ ಎಸ್‌ಎಂಎಸ್ ಕಳಿಸಿ, ಒಟಿಪಿ ಪಡೆದು, ಹಿರಿಯ ನಾಗರಿಕರು

ಮತ್ತು ಮಹಿಳೆಯರು ಸೇರಿದಂತೆ ಬಹಳಷ್ಟು ಜನರನ್ನು ವಂಚಿಸುತ್ತಿದ್ದಾರೆ. ಈ ವಂಚಕರು ಅಂಚೆ ಕಚೇರಿ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಅಧಿಕಾರಿ ಗಳ ಹೆಸರಲ್ಲಿ ಕರೆಮಾಡಿ ಅಮಾಯಕರನ್ನು ಹೀಗೆ ವಂಚಿಸು ತ್ತಾರೆ. ಇಂಥ ಯಾವುದೇ ಇಲಾಖಾಧಿಕಾರಿಗಳು ಸಾರ್ವಜನಿಕರೊಂದಿಗೆ ಅಧಿಕೃತವಾಗಿ ಫೋನ್ ಮೂಲಕ ವ್ಯವಹರಿಸುವುದಿಲ್ಲ ಮತ್ತು ಸಾರ್ವಜನಿಕರ ಅಂಚೆ ಕಚೇರಿ ಉಳಿತಾಯ ಖಾತೆ ಅಥವಾ ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕಿನ ವ್ಯವಹಾರಗಳಿಗೆ ಸಂಬಂಧಿಸಿದ ಒಟಿಪಿಯನ್ನು ಫೋನ್ ಮೂಲಕ ಯಾವುದೇ ಕಾರಣಕ್ಕೂ ಕೇಳುವುದಿಲ್ಲ ಎಂಬುದನ್ನು ಗ್ರಾಹಕರು ಮೊದಲು ಅರಿಯಬೇಕು. ಹೀಗಾಗಿ ಗ್ರಾಹಕರು ಒಟಿಪಿಯನ್ನು ಫೋನ್ ಮೂಲಕ ಯಾರೊಂದಿಗೂ ಹಂಚಿಕೊಳ್ಳಬಾರದು; ಆನ್‌ಲೈನ್ ಹಣ ವರ್ಗಾವಣೆ ಅಥವಾ ಒಟಿಪಿಯನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವ ಮೊದಲು ಸಮೀಪದ ಅಂಚೆ ಕಚೇರಿಗೆ ತೆರಳಿ ಈ ಕುರಿತು ಖಾತ್ರಿಪಡಿಸಿಕೊಳ್ಳಬೇಕು.

ಯಾವುದೇ ರೀತಿಯ ಹಣಕಾಸು ವಹಿವಾಟಿನ ಪ್ರಕ್ರಿಯೆಗಳಲ್ಲಿ ತೊಡಕುಂಟಾದಾಗ ಗ್ರಾಹಕರು ಸಮೀಪದ ಅಂಚೆ ಕಚೇರಿಗೆ ನೇರವಾಗಿ ತೆರಳಿ ಅದನ್ನು ಪರಿಹರಿಸಿಕೊಳ್ಳಬೇಕು. ಅಂಚೆ ಕಚೇರಿ ಅಥವಾ ಯುಪಿಐ ಆಧರಿತ ಆನ್‌ಲೈನ್ ಸೇವಾ ಸಂಸ್ಥೆಗಳ ಹೆಸರಿನಲ್ಲಿ ಗ್ರಾಹಕರಿಗೆ ಕರೆಮಾಡುವ ವಂಚಕರು, ಬ್ಯಾಂಕ್ ಅಕೌಂಟ್ ನಂಬರ್, ಎಟಿಎಂ ಕಾರ್ಡ್ ನಂಬರ್, ಸಿವಿವಿ ನಂಬರ್, ಒಟಿಪಿ, ಎಟಿಎಂ ಪಿನ್ ನಂಬರ್‌ಗಳನ್ನು ಕೇಳುತ್ತಾರೆ, ಗೂಗಲ್ ಪೇ, ಫೋನ್ ಪೇ ಅಥವಾ ಯುಪಿಐ ಆಧರಿತ ಇತರೆ ಆನ್‌ಲೈನ್ ಹಣಕಾಸು ವರ್ಗಾವಣೆ ಅಪ್ಲಿಕೇ ಷನ್‌ಗಳ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಲು ಹೇಳುತ್ತಾರೆ ಅಥವಾ ಕೋಡ್‌ಗಳನ್ನು ಕೇಳಿಪಡೆದು ವಂಚಿಸುತ್ತಾರೆ. ಇಂಥ ಗೌಪ್ಯ ಸಂಖ್ಯೆ/ಮಾಹಿತಿಗಳನ್ನು ಯಾರಿಗೂ, ಯಾವ ಕಾರಣಕ್ಕೂ ನೀಡಬಾರದು; ಆನ್‌ಲೈನ್ ಹಣಕಾಸು ವ್ಯವಹಾರಕ್ಕಾಗಿ ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕಿನ ಅಧಿಕೃತ ಅಪ್ಲಿಕೇಷನ್‌ಗಳನ್ನು ಗ್ರಾಹಕರು ಬಳಸಬೇಕು.

ಇನ್ನು ಗ್ರಾಹಕರು ತಮ್ಮ ಮೊಬೈಲ್‌ಗಳಲ್ಲಿ ವಿವಿಧ ರೀತಿಯ ಆ್ಯಪ್‌ಗಳನ್ನು ಅನಗತ್ಯವಾಗಿ ಡೌನ್‌ಲೋಡ್ ಮಾಡಿ ಇನ್‌ಸ್ಟಾಲ್ ಮಾಡಿಕೊಳ್ಳಬಾರದು ಮತ್ತು ಅಪರಿಚಿತ ವ್ಯಕ್ತಿಗಳು ಕಳುಹಿಸುವ APK, installation file ಅಥವಾ ಲಿಂಕ್‌ಗಳನ್ನು ಯಾವುದೇ ಕಾರಣಕ್ಕೂ install ಅಥವಾ ಕ್ಲಿಕ್ ಮಾಡಬಾರದು. 'ನಿಮ್ಮ ಹೆಸರಿಗೆ ಒಂದು ಪಾರ್ಸಲ್/ಸ್ಪೀಡ್ ಪೋಸ್ಟ್ ಬಂದಿದೆ. ನಿಮ್ಮ ವಿಳಾಸ ಸರಿಯಿಲ್ಲದ ಕಾರಣ ಅಂಚೆ ಕಚೇರಿಯಲ್ಲಿ ಇಟ್ಟುಕೊಳ್ಳಲಾಗಿದೆ. ಈ ಕೆಳಗಿನ ಲಿಂಕ್ ಅನ್ನು ಕ್ಲಿಕ್ ಮಾಡಿ ನಿಮ್ಮ ಸರಿಯಾದ ವಿಳಾಸವನ್ನು ದಾಖಲಿಸಿ' ಎಂಬ ಮೊಬೈಲ್ ಸಂದೇಶಗಳನ್ನು ಕೆಲವು ಆನ್‌ಲೈನ್ ವಂಚಕರು ಗ್ರಾಹಕರಿಗೆ ಕಳಿಸುತ್ತಾರೆ. ಅವರಿತ್ತ ಸೂಚನೆಯಂತೆ ಒಂದೊಮ್ಮೆ ಗ್ರಾಹಕರೇದರೂ ಇಂಥ ಲಿಂಕ್‌ಗಳನ್ನು ಕ್ಲಿಕ್ ಮಾಡಿ ವಿವರಗಳನ್ನು ದಾಖಲಿಸಿದರೆ ವಂಚನೆಗೊಳಗಾಗುವುದು ಖಂಡಿತ. ಆದ್ದರಿಂದ ಇಂಥ ಸಂದೇಶಗಳಿಗೆ ಪ್ರತಿಕ್ರಿಯಿಸಲು ಹೋಗಬಾರದು. 'ಪಾರ್ಸಲ್‌ಗಳಲ್ಲಿ ಕೆಲವು ಸಂಶಯಾಸ್ಪದ ವಸ್ತುಗಳನ್ನು ಪತ್ತೆಮಾಡಿದ್ದೇವೆ' ಎಂದು ಕಾನೂನು ಜಾರಿ ಪ್ರಾಧಿಕಾರದ ಅಧಿಕಾರಿಗಳ ಸೋಗಿನಲ್ಲಿ ಜನರಿಗೆ ಕರೆಮಾಡಿ ಮೋಸ ಮಾಡುವ ಪ್ರಯತ್ನಗಳೂ ನಡೆಯುತ್ತಿವೆ.

ಗ್ರಾಹಕರು ತಮ್ಮ ಪರವಾಗಿ ವಹಿವಾಟು ನಡೆಸಲು ಅಪರಿಚಿತ ವ್ಯಕ್ತಿಗಳೊಂದಿಗೆ ತಮ್ಮ ಮೊಬೈಲ್ ಬ್ಯಾಂಕಿಂಗ್‌ನ ವಿವರಗಳನ್ನು ಹಂಚಿಕೊಳ್ಳಬಾರದು. ಉದ್ಯೋಗದ ಆಫರ್‌ಗಳ ಆಮಿಷವೊಡ್ಡುವ ಅಥವಾ ಸಾಮಾಜಿಕ ಮಾಧ್ಯಮಗಳ ಮೂಲಕ ಸುಲಭವಾಗಿ ಹಣ ಗಳಿಸುವ ಅವಕಾಶ ನೀಡುವುದಾಗಿ ಹೇಳಿಕೊಳ್ಳುವ ಅಪರಿಚಿತರೊಂದಿಗೆ ಗ್ರಾಹಕರು ತಮ್ಮ ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಖಾತೆಯ ವಿವರಗಳನ್ನು ಹಂಚಿಕೊಳ್ಳಬಾರದು. ವಂಚಕರು ಮಾಡಿದ ಕರೆಯ ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡಲು ಸಾಧ್ಯವಾಗದೆ ತಮ್ಮ ಬ್ಯಾಂಕ್ ಖಾತೆಯಿಂದ ಹಣ ಕಳೆದುಕೊಂಡವರ ಸಂಖ್ಯೆಯೇನೂ ಕಡಿಮೆಯಿಲ್ಲ, ಇಂಥವರಲ್ಲಿ ಕೆಲವರು ಪೊಲೀಸರಿಗೆ ದೂರು ನೀಡಿದರೆ, ಮತ್ತೆ ಕೆಲವರು ಇದನ್ನು ಗೌಪ್ಯವಾಗಿ ಇಡುತ್ತಿದ್ದಾರೆ.

ಸೈಬರ್ ಕ್ರೈಂ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರಾಜ್ಯದ ಸಿಐಡಿ ಕಚೇರಿಯಲ್ಲಿ 'ಸಿಸಿಐಟಿಆರ್' ಘಟಕವನ್ನು ಪ್ರಾರಂಭ ಮಾಡಲಾಗಿದೆ. ಅಲ್ಲದೆ ಕೇಂದ್ರ ಸರಕಾರ ಕೂಡ ಸಾರ್ವಜನಿಕರ ಅನುಕೂಲಕ್ಕಾಗಿ 'ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್' ಅನ್ನು ಪ್ರಾರಂಭಿಸಿದೆ. ಆನ್‌ಲೈನ್ ವಂಚನೆಗೊಳಗಾದವರು ಸೈಬರ್ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡುವುದು ಪ್ರಯಾಸದಾಯಕವಾದರೆ, ಈ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕವೇ ದೂರು ದಾಖಲಿಸಬಹುದು. ಹೀಗೆ ದೂರು ದಾಖಲಾದ ಕೆಲವೇ ಕ್ಷಣಗಳಲ್ಲಿ, ವಂಚನೆಗೊಳಗಾದವರನ್ನು ಸಂಬಂಧಿತ ಸೈಬರ್ ಪೊಲೀಸ್ ಠಾಣೆಯಿಂದಲೇ ದೂರವಾಣಿ ಮೂಲಕ ಸಂಪರ್ಕಿಸಲಾಗುತ್ತದೆ. ಅಗತ್ಯ ವಿವರಗಳನ್ನು ಪಡೆದ ನಂತರ ಸೈಬರ್ ಪೊಲೀಸರು ಕಾರ್ಯಪ್ರವೃತ್ತರಾಗುತ್ತಾರೆ. ಒಟ್ಟಿನಲ್ಲಿ, ಸೈಬರ್ ವಂಚನೆಯ ಕುರಿತು ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕು.

(ಲೇಖಕರು ಹವ್ಯಾಸಿ ಬರಹಗಾರರು)

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಇದು ವಿಷಾದನೀಯ

ಏಳನೇ ವೇತನ ಆಯೋಗದ ಶಿಫಾರಸಿನ ಅನ್ವಯ ರಾಜ್ಯ ಸರಕಾರಿ ನೌಕರರ ವೇತನ ಮತ್ತು ವಿವಿಧ ಭತ್ಯೆಗಳ ಪರಿಷ್ಕರಣೆ ಮಾಡಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರಿಗೆ ಕೃತಜ್ಞತೆ-ಅಭಿನಂದನೆ ಸಲ್ಲಿಸಲೆಂದೇ ಬೆಂಗಳೂರು ಅರಮನೆ ಮೈದಾನದಲ್ಲಿ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿದೆ. ಇದರಲ್ಲಿ ಸರಕಾರಿ ನೌಕರರು ಭಾಗವಹಿಸುವುದಕ್ಕೆ ಅನುವಾಗಲೆಂದು ಸರಕಾರವು ಆ.17ರಂದು ವಿಶೇಷ ಸಾಂದರ್ಭಿಕ ರಜೆ ಘೋಷಿಸಿರುವುದು ವರದಿಯಾಗಿದೆ. ಇದು ವಿಷಾದನೀಯ. ರಾಜ್ಯಾದ್ಯಂತ ಮಳೆ ವಿಕೋಪ, ಡೆಂಘೀ ಜ್ವರದ ಆತಂಕದಿಂದ ಜನರು ಪರಿತಪಿಸುತ್ತಿರುವಾಗ, ಪೂರ್ವೋತ್ತರ ಎರಡು ದಿನಗಳ ರಜಾದಿನದೊಟ್ಟಿಗೆ ಮತ್ತೊಂದು ದಿನ ರಜೆ ಘೋಷಿಸಿ ಸರಕಾರದ ಯಂತ್ರವನ್ನು ಸ್ಥಗಿತಗೊಳಿಸುವುದು ಎಷ್ಟು ಸರಿ?

- **ಬೆಳ್ಳಿ ಚಂದ್ರಶೇಖರ ಶೆಟ್ಟಿ**, ಬೆಂಗಳೂರು

### ಎಚ್ಚರಿಕೆಯ ಗಂಟೆ

ಪ್ರಕೃತಿಯ ಎದುರು ನಾವೆಲ್ಲಾ ಶೂನ್ಯ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ವಯನಾಡಿನಲ್ಲಾದ ದುರಂತ ನಮ್ಮ ರಾಜ್ಯದಲ್ಲೂ ಆಗುವ ದಿನ ಬಹಳ ದೂರವಿಲ್ಲ, ಪಶ್ಚಿಮ ಘಟ್ಟಗಳನ್ನು ನಾವು ಸಂರಕ್ಷಿಸದಿದ್ದರೆ ಇದು ತಪ್ಪಿದ್ದಲ್ಲ.

ನಮ್ಮ ರಾಜಕಾರಣಿಗಳು ತಮ್ಮ ಲಾಭಕ್ಕಾಗಿ ಪ್ರಕೃತಿಯನ್ನು ನುಂಗಿ ನೀರು ಕುಡಿಯುವಂಥ ಯೋಜನೆಗಳನ್ನು ರೂಪಿಸು ವುದು ಸತತವಾಗಿ ನಡೆಯುತ್ತಿದೆ. ಈ ಪರಿಪಾಠಕ್ಕೆ ಇನ್ನಾದರೂ ಅಂತ್ಯ ಹಾಡಬೇಕು. ಅತ್ಯಂತ ಸೂಕ್ಷ್ಮವಲಯ ಎನಿಸಿರುವ ಪಶ್ಚಿಮಘಟ್ಟ ಶ್ರೇಣಿ ಭಾರತಕ್ಕೆ ವರದಾನವಿದ್ದಂತೆ. ಪ್ರವಾಸೋದ್ಯಮ, ರಿಯಲ್ ಎಸ್ಟೇಟ್ ಹೆಸರಿನಲ್ಲಿ ಆ ವಲಯವನ್ನು ವಾಣಿಜ್ಯೀಕರಣಗೊಳಿಸಿದರೆ ಅಪಾಯ ಕಟ್ಟಿಟ್ಟಬುತ್ತಿ. ಪ್ರಕೃತಿ ಉಳಿದರೆ ಮಾತ್ರವೇ ನಾವು ನಾಳೆಗಳನ್ನು ಕಾಣಲು ಸಾಧ್ಯ. ಪ್ರಕೃತಿಯ ಅಸ್ತಿತ್ವಕ್ಕೆ ಸಂಚಕಾರ ತರುವಂಥ ಯಾವುದೇ ಅಭಿವೃದ್ಧಿ ಯೋಜನೆಗಳ ಘೋಷಣೆಯಾದರೂ ಪಕ್ಷಭೇದ ಮರೆತು ಅವನ್ನು ವಿರೋಧಿಸುವುದು ನಮ್ಮೆಲ್ಲರ ಕರ್ತವ್ಯ ವಾಗಬೇಕು.

- **ಬೇಲೂರು ಅರುಣಕುಮಾರ ಶೆಟ್ಟಿ**, ಬೆಂಗಳೂರು

**ಓದುಗರ ಒಣಿಗೆ ಭೇಟಿ ಕೊಡಿ**
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

## ಭಟ್ಟರ್ ಸ್ಕಾಚ್

**ರವಿ ದೇವರಾಯನದುರ್ಗ, (ಇಮೇಲ್ ಮೂಲಕ)**
ಭಟ್ರೇ, ದಿಲ್ಲಿಗೆ ಹೋಗಿ ವರಿಷ್ಠರ ಮುಂದೆ ಎಲ್ಲವನ್ನೂ ವಿವರಿಸುವೆ ಎಂದು ವಿಪಕ್ಷ ನಾಯಕ ಅಶೋಕ್ ಹೇಳಿದ್ದಾರಲ್ಲ?
**- ಅದ್ಸರಿ, ಯಾವ ಭಾಷೆಯಲ್ಲಿ ವಿವರಿಸುತ್ತಾರಂತೆ, ವಸಿ ಕೇಳ್ಬೇಕಿತ್ತು!**

**ನವೀನ ಕೆ.ಪಾಟೀಲ, ತುಮಕೂರು**
ಭಟ್ರೇ, ಹಿಂದೂ ಎನ್ನುವುದು ಅನೈತಿಕ, ಅನಾಚಾರಗಳಿಂದ ಕೂಡಿದೆ ಎಂದು ಸಾಣೇಹಳ್ಳಿ ಸ್ವಾಮೀಜಿ ಹೇಳಿದ್ದಾರಲ್ಲ?
**- ಅವರ ಬುದ್ಧಿಗೆ ಆಗಾಗ ಸಾಣೆ ಹಿಡಿಯುತ್ತಿರಬೇಕು!**

**ಅನುಪಮಾ ಹಿರೇಮಠ, ಧಾರವಾಡ**
ಭಟ್ರೇ, ಸಾಣೇಹಳ್ಳಿ ಸ್ವಾಮೀಜಿ ಅವರನ್ನು ನೀವು ಆಗಾಗ ಟೀಕಿಸುತ್ತೀರಲ್ಲ, ಕಾರಣ?
**- ಟೀಕೆಯನ್ನೂ ಪ್ರೀತಿ ಎಂದು ಅವರು ತಿಳಿದುಕೊಳ್ಳುವುದರಿಂದ!**

**ಟಿ.ಟಿ.ಸಾಲಿಮಠ, ಚಿತ್ರದುರ್ಗ**
ಭಟ್ರೇ, ತಮ್ಮನ್ನು ಟೀಕಿಸುವವರನ್ನು 'ಕುಡುಕರು' ಎಂದು ಸಿರಿಗೆರೆ ಸ್ವಾಮೀಜಿಗಳು ಹೇಳಿದ್ದಾರಲ್ಲ?
**- ಕಠೋರ ಸತ್ಯಗಳನ್ನು ಸ್ವಾಮೀಜಿಗಳು ಸಾರ್ವಜನಿಕವಾಗಿ ಹೇಳಬಾರದಿತ್ತು!**

**ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ಶಿಷ್ಯ 'ನನ್ನಂಥ ಯಂಗ್ ಬ್ಲಡ್ ರಾಜ್ಯಕ್ಕೆ ಬೇಕಿದೆ' ಅಂತ ಹೇಳಿದ್ದಾರಲ್ಲ?
**- ಅಷ್ಟೂ ಸೆಲ್ಫ್ ಮಾರ್ಕೆಟಿಂಗ್ ಮಾಡಿಕೊಳ್ಳದಿದ್ದರೆ ಹೇಗೆ?!**

**ವೇಣುಗೋಪಾಲ ಕುಂಟಿಕೊಪ್ಪ, ಕಡೂರು**
ಭಟ್ರೇ, ರಾಜ್ಯ ಸರಕಾರದ ಗ್ಯಾರಂಟಿಗಳಿಗೆ ಕತ್ತರಿ ಬೀಳೋದು ಗ್ಯಾರಂಟಿಯಾ?
**- ಕತ್ತರಿ ಇಲ್ಲದಿದ್ದರೆ ಬ್ಲೇಡು!**

**ಕೆ.ವಿ.ಭಾಸ್ಕರ, ನಾಗಮಂಗಲ**
ಭಟ್ರೇ, ಜೆಡಿಎಸ್ ಮುಂದೆ ಬಿಜೆಪಿಯಲ್ಲಿ ವಿಲೀನ ಆಗಬಹುದಾ?
**- ಈಗಿನ ವಿದ್ಯಮಾನ ನೋಡಿದ್ರೆ, ಜೆಡಿಎಸ್‌ನೊಳಗೆ ಬಿಜೆಪಿ ವಿಲೀನ ಆದಿದ್ದರೆ ಸಾಕು!**

**ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ಸದ್ಯ ವಿದೇಶ ಪ್ರವಾಸ ಇಲ್ವಾ?
**- ನಾನು ದೇಶದಲ್ಲಿ ಇರಬೇಕೋ ಬೇಡವೋ ಎಂದು ನೀವಲ್ಲ ನಿರ್ಧಾರ ಮಾಡಿದಂತಿದೆ!**

**ಎಲ್.ವಿ.ಸತೀಶ್, ಮೈಸೂರು**
ಸರ್, ದಿನಾಲು ಕಂಡು ಹಿಡಿದ್ದು ಕಾರನ್ನಾ, ಪೆಟ್ರೋಲನ್ನಾ?
**- ಪೆಟ್ರೋಲ್ ತರಲು ಕಾರಲ್ಲಿ ಹೋಗಿದ್ದು ಅಂದ್ರೆ, ಯಾವುದು ಮೊದಲು ಅಂತ ಊಹಿಸು!**

# ಮಾನ್ಯತೆಯೇ ದೊರಕದ ಟ್ರಿಬ್ಯುನಲ್ ಅದು!

**ಶಶಾಂಕಣ**
ಶಶಿಧರ ಹಾಲಾಡಿ
shashidhara.halady@gmail.com

ಲಾಲಾ ಲಜಪತ್ ರಾಯ್ ಅವರ ಹೆಸರನ್ನು ನೀವೆಲ್ಲಾ ಕೇಳಿರಬೇಕು. ಅವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡು, ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದರು. 1921ರಿಂದ 1923ರ ತನಕ ಜೈಲಿನಲ್ಲಿದ್ದರು. 1928ರಲ್ಲಿ ಸೈಮನ್ ಕಮಿಷನ್ ಭಾರತಕ್ಕೆ ಭೇಟಿ ನೀಡಿತು; ಭಾರತೀಯರ ಹಿತಚಿಂತನೆ ಮಾಡುತ್ತದೆ ಎನ್ನಲಾದ ಆ ಕಮಿಷನ್‌ನಲ್ಲಿ ಭಾರತೀಯ ಸದಸ್ಯರೇ ಇರಲಿಲ್ಲ! 30.10.1928ರಂದು 'ಸೈಮನ್ ಗೋ ಬ್ಯಾಕ್' ಪ್ರತಿಭಟನೆಯು ಲಾಹೋರಿನಲ್ಲಿ ನಡೆದಿದ್ದು, ಅದರ ನೇತೃತ್ವವನ್ನು ಲಾಲಾ ಲಜಪತ್ ರಾಯ್ ವಹಿಸಿದ್ದರು. ಅವರದ್ದು ಶಾಂತಿಯುತ ಪ್ರತಿಭಟನೆ; ಕಪ್ಪು ಬಾವುಟ ಪ್ರದರ್ಶನ. ಆದರೆ, ಜೇಮ್ಸ್ ಎ. ಸ್ಕಾಟ್ ಎಂಬ ಬ್ರಿಟಿಷ್ ಪೊಲೀಸ್ ಸೂಪರಿಂಟೆಂಡೆಂಟ್‌ನು ಅವರ ಮೇಲೆ ಲಾಠಿ ಚಾರ್ಜ್ ಮಾಡಿಸಿದ; ಅವನು ಅದೆಷ್ಟು ತೀವ್ರವಾಗಿ ಅವರನ್ನು ಬಡಿಸಿದ್ದನೆಂದರೆ, 17.11.1928ರಂದು ರಾಯ್ ಅವರು ಆ ಏಟಿನಿಂದ ಮೃತಪಟ್ಟರು. ಅವರ ಮೇಲೆ ಬ್ರಿಟಿಷ್ ಪೊಲೀಸರು ಲಾಠಿಚಾರ್ಜ್ ಮಾಡಿದ್ದನ್ನು, ಒಬ್ಬ ವ್ಯಕ್ತಿ ಎದುರಿನಲ್ಲಿದ್ದ, ಅವನೇ ಭಗತ್‌ಸಿಂಗ್.

ಜೇಮ್ಸ್ ಎ. ಸ್ಕಾಟ್‌ನಿಗೆ ತಕ್ಕ ಪಾಠ ಕಲಿಸಬೇಕು ಎಂದು ಭಗತ್‌ಸಿಂಗ್ ನಿರ್ಧರಿಸಿ, ರಾಜಗುರು, ಸುಖದೇವ್ ಥಾಪರ್, ಚಂದ್ರಶೇಖರ್ ಆಜಾದ್ ಮೊದಲಾದವರೊಡನೆ ಸೇರಿ, ಒಂದು ತಂಡ ಕಟ್ಟಿ, ಬಂದೂಕುಗಳನ್ನು ತರಿಸಿಕೊಂಡ. ಇವರ ತಂಡ ಜೇಮ್ಸ್ ಎ. ಸ್ಕಾಟ್‌ನ ಮೇಲೆ ಗುಂಡು ಹಾರಿಸಿತು; ಆದರೆ, ಸ್ಕಾಟ್ ಬದಲು ಜಾನ್ ಪಿ. ಸಾಂಡರ್ಸ್ ಎಂಬಾತನನ್ನು ಸಾಯಿಸಲಾಯಿತು. ಈತನು, ಲಾಹೋರಿನ ಪೊಲೀಸ್ ವಿಭಾಗದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿದ್ದ. ಸಾಂಡರ್ಸ್ ಮೇಲೆ ಗುಂಡು ಹಾರಿಸಿದ್ದು ರಾಜಗುರು.

ಬ್ರಿಟಿಷರು ನಮ್ಮ ದೇಶದಲ್ಲಿ ನಡೆಸಿದ ಅತಿ ಕ್ರೂರ ಎಂಬಂಥ ಕೆಲವು ಘಟನೆಗಳನ್ನು ನಾವಿಂದು ಮರೆತೇ ಬಿಟ್ಟಿದ್ದೇವೆ! ಈ ನಿಟ್ಟಿನಲ್ಲಿ ನೋಡಿದರೆ, ಭಾರತೀಯರು ಉದಾರ ಹೃದಯದವರು; ಅನ್ಯಾಯಗಳನ್ನು ಮರೆತು, ಕ್ಷಮಿಸಿದಂಥ ಸಜ್ಜನರು; ಇಂದಿಗೂ ಬ್ರಿಟಿಷರ ಕೆಲವು ಅನ್ಯಾಯಗಳ ಹೆಚ್ಚಿನ ವಿವರಗಳನ್ನು ಜನಸಾಮಾನ್ಯರಿಗೆ ಸ್ಪಷ್ಟವಾಗಿ ತಿಳಿಯದಂತೆ ಮಾಡಿ, ಬ್ರಿಟಿಷರನ್ನು ಪರೋಕ್ಷವಾಗಿ ಹೊಗಳುವ ಜನರೂ ನಮ್ಮದು! ಇವರು ಭಗತ್ ಸಿಂಗ್‌ನನ್ನು ನಡೆಸಿಕೊಂಡ ರೀತಿ ಕ್ರೂರಾತಿಕ್ರೂರ.

ಕೇವಲ 23 ವರ್ಷ ಬದುಕಿದ್ದ ಭಗತ್ ಸಿಂಗ್‌ನಿಗೆ, ಅಧಿಕೃತ ಮಾನ್ಯತೆ ಇಲ್ಲದ (ನಿಜ, ಅಧಿಕೃತ ಮಾನ್ಯತೆ ಇಲ್ಲದ) ಒಂದು ಟ್ರಿಬ್ಯುನಲ್ ಮೂಲಕ ವಿಚಾರಣೆ ನಡೆಸಿ, ಮರಣದಂಡನೆಯನ್ನು ಬ್ರಿಟಿಷ್ ಸರಕಾರ ವಿಧಿಸಿತ್ತು, ಈ ವಿಚಾರವು ಇಂದಿಗೂ ಸಾಕಷ್ಟು ಪ್ರಚಾರಕ್ಕೆ ಬಂದಿಲ್ಲ ಎನ್ನಬಹುದು. ಇಂದಿಗೂ ಜನಸಾಮಾನ್ಯರಲ್ಲಿ ಭಗತ್ ಸಿಂಗ್‌ನ ಕುರಿತು ಅಪಾರ ಗೌರವ ಇದ್ದು, ಆತ ನಮ್ಮ ದೇಶಕ್ಕಾಗಿ ತನ್ನ ಪ್ರಾಣವನ್ನು ಕೊಟ್ಟ ಧೀರಯುವಕ ಎಂಬ ಮಾಹಿತಿ ಇದೆ; ಆದರೆ, ಅಂದಿನ ಕಾನೂನುವ್ಯಾಪ್ತಿ ಮೀರಿದ ಒಂದು ವ್ಯವಸ್ಥೆಯ ಮೂಲಕ ಆತನಿಗೆ ಮರಣ ದಂಡನೆ ವಿಧಿಸಲಾಯಿತು ಮತ್ತು ಇದು ಬ್ರಿಟಿಷ್ ಸರಕಾರ ಮಾಡಿದ ಘೋರ ಅನ್ಯಾಯಗಳಲ್ಲಿ ಒಂದು ಎಂಬ ವಿಚಾರದ ಸಮಗ್ರ ಅರಿವಿಲ್ಲ.

ಈ ರೀತಿ ಹೇಳಲು ದಾಖಲೆಗಳಿವೆ. ಅಂದು ಪ್ರಚಲಿತವಿದ್ದ, ಬ್ರಿಟಿಷರೇ ಹೊಗಳಿಕೊಂಡಿರುವ ನ್ಯಾಯವ್ಯವಸ್ಥೆಯ ವ್ಯಾಪ್ತಿಯಲ್ಲೇ, 'ನ್ಯಾಯದಾನದ ಮೂಲ ತತ್ವ, ಸಿದ್ಧಾಂತಗಳಿಗೆ ತಿಲಾಂಜಲಿ ಇಟ್ಟು, ಭಗತ್ ಸಿಂಗ್‌ನಿಗೆ ಮರಣದಂಡನೆಯನ್ನು ವಿಧಿಸಲಾಯಿತು' ಎಂದು ಸುಪ್ರೀಂ ಕೋರ್ಟ್, ಆ ನಂತರ ಅಭಿಪ್ರಾಯ ಪಟ್ಟಿದೆ! ಇದು ಬ್ರಿಟಿಷರು ನಡೆಸಿದ ಈ ಕುಕೃತ್ಯದ ಕುರಿತಾಗಿ ಸ್ಪಷ್ಟ ಮತ್ತು ಖಚಿತ ಅಭಿಪ್ರಾಯವೇ ಸರಿ.

ಬ್ರಿಟಿಷರು ರೂಪಿಸಿರುವ ವ್ಯವಸ್ಥೆಯಂತೆ, ನ್ಯಾಯ ನೀಡುವಾಗ, ಆರೋಪಿತರು ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಲೇಬೇಕು ಎಂಬುದು ಪ್ರಾಥಮಿಕ ಅಂಶ. ಆದರೆ ಅಂಥ ಒಂದು ಸಮರ್ಪಕ ಅವಕಾಶವನ್ನು ನೀಡದೇ ಭಗತ್‌ಸಿಂಗ್‌ನನ್ನು ಗಲ್ಲಿಗೆ ಏರಿಸಲಾಯಿತು! ಇದನ್ನು ನಡೆಸಿದ್ದು ಬ್ರಿಟಿಷ್ ಸರಕಾರದ ನ್ಯಾಯಾಂಗ ವ್ಯವಸ್ಥೆ!

ಭಗತ್ ಸಿಂಗ್ ಜನಿಸಿದ್ದು ಪಂಜಾಬಿನಲ್ಲಿ, ಸೆಪ್ಟೆಂಬರ್ 1907ರಲ್ಲಿ, ಆತ ಜನಿಸಿದ ಊರು ಇಂದು ಪಾಕಿಸ್ತಾನಕ್ಕೆ ಸೇರಿಹೋಗಿದೆ. 1928ರಲ್ಲಿ ಆತನನ್ನು ಗಲ್ಲಿಗೇರಿಸಿದ ಲಾಹೋರ್ ಸಹ ಪಾಕಿಸ್ತಾನಕ್ಕೆ ಸೇರಿಹೋಯಿತು. ಭಗತ್ ಸಿಂಗನು ಬ್ರಿಟಿಷರ ವಿರುದ್ಧ ಹೋರಾಡಿದ ರೀತಿಗೆ ಗಾಂಧೀಜಿಯವರ ಸಹಮತವಿರಲಿಲ್ಲ! ಬ್ರಿಟಿಷರ ವಿರುದ್ಧ ಗುಂಡು ಹಾರಿಸಬಾರದು ಎಂಬುದು ಅವರ ಖಚಿತ ನಿಲುವು; ಭಗತ್ ಸಿಂಗ್‌ನ ಜೀವವನ್ನು ಉಳಿಸಲು ಗಾಂಧೀಜಿ ಮತ್ತು ಅವರ ಪಕ್ಷ ಪ್ರಯತ್ನಿಸಲಿಲ್ಲ ಎಂಬ ಅಭಿಪ್ರಾಯವೂ ಇದೆ.

ಸಶಸ್ತ್ರ ಹೋರಾಟದ ಮೂಲಕ ಬ್ರಿಟಿಷರನ್ನು ಓಡಿಸಬಹುದು ಎಂದುಕೊಂಡಿದ್ದವರ ಗುಂಪಿಗೆ ಭಗತ್ ಸಿಂಗ್ ಸೇರುತ್ತಾನೆ. 1928ರಲ್ಲಿ ಬ್ರಿಟಿಷರು ಸೈಮನ್ ಕಮಿಷನ್ ಸ್ಥಾಪಿಸಿದರು. ಆದರೆ ಆ ಸಮಿತಿಯಲ್ಲಿ ಭಾರತೀಯರೇ ಇರಲಿಲ್ಲ! ಇದನ್ನು ಕಾಂಗ್ರೆಸ್ ಸಹಿತ ಎಲ್ಲರೂ ವಿರೋಧಿಸಿದರು. ಅಹಿಂಸಾತ್ಮಕ ಹೋರಾಟದಲ್ಲಿ ನಂಬಿಕೆ ಇಟ್ಟಿದ್ದ ಕಾಂಗ್ರೆಸ್‌ನ ಲಾಲಾ ಲಜಪತ್ ರಾಯ್ ಅವರ ನೇತೃತ್ವದಲ್ಲಿ ಅಹಿಂಸಾತ್ಮಕ ಮೆರವಣಿಗೆಯೊಂದು 30.10.1928ರಂದು ಲಾಹೋರ್‌ನಲ್ಲಿ ಹೊರಟಿತು. ಲಾಹೋರಿನ ಪೊಲೀಸ್ ಸೂಪರಿಂಟೆಂಡೆಂಟ್ ಜೇಮ್ಸ್ ಎ. ಸ್ಕಾಟ್ ಎಂಬಾತ ಈ ಮೆರವಣಿಗೆಯ ಮೇಲೆ ಲಾಠಿ ಚಾರ್ಜ್ ಮಾಡಿಸಿದ್ದು ಮಾತ್ರವಲ್ಲ, ಲಾಲಾ ಲಜಪತ್ ರಾಯ್ ಅವರ ಮೇಲೆ ತಾನೇ ಖುದ್ದಾಗಿ ಹಲ್ಲೆ ಮಾಡಿದ. ಅಂದು ಏಟು ತಿಂದ ಲಾಲಾ ಲಜಪತ್ ರಾಯ್ ಅವರು ಕೆಲವೇ ದಿನಗಳಲ್ಲಿ ಮೃತಪಟ್ಟರು.

ಲಾಲಾ ಲಜಪತ್ ರಾಯ್ ಕೊಲೆಗೆ ಸೇಡಿನ ರೂಪದಲ್ಲಿ 1928ರಲ್ಲಿ ಭಗತ್ ಸಿಂಗ್ ಮತ್ತು ಅವರ ತಂಡದವರು ಹಾರಿಸಿದ ಗುಂಡಿಗೆ, ಚಂದ್ರಶೇಖರ ಆಜಾದರು ಬೆಂಬಲ ನೀಡಿದ್ದರು. ಆ ಸಂದರ್ಭದಲ್ಲಿ, ಸಾಂಡರ್ಸ್ ಎಂಬ ಪೊಲೀಸ್ ಅಧಿಕಾರಿ ಮತ್ತು ಚನನ್ ಸಿಂಗ್ ಎಂಬ ಪೊಲೀಸ್ ಸತ್ತುಹೋದರು. ಗುಂಡು ಚಲಾಯಿಸಿದ ತಕ್ಷಣ, ಭಗತ್‌ಸಿಂಗ್ ಮೊದಲಾದವರು ಸೈಕಲ್ ಹತ್ತಿ ತಪ್ಪಿಸಿಕೊಂಡರು. ವಿವಿಧ ವೇಷಗಳನ್ನು ಧರಿಸಿ, ಕಾನ್‌ಪುರ, ಹೌರಾ ಮೊದಲಾದ ಸ್ಥಳಗಳಲ್ಲಿ ತಲೆಮರೆಸಿಕೊಂಡರು.

ಆದರೆ ಭಗತ್‌ಸಿಂಗ್‌ನ ಹೃದಯದಲ್ಲಿ ಬ್ರಿಟಿಷರ ವಿರುದ್ಧದ ಹೋರಾಟದ ಕಿಡಿಯು ಜ್ವಾಲೆಯಾಗಿ ಉರಿಯತೊಡಗುತ್ತದೆ. ಸಾಂಡರ್ಸ್‌ನಂಥ ಬ್ರಿಟಿಷ್ ಪೊಲೀಸರನ್ನು ಸಾಯಿಸುವುದು ಮಾತ್ರವಲ್ಲ, ಬ್ರಿಟಿಷರ ವಿರುದ್ಧದ ಹೋರಾಟದ ತಮ್ಮ ವಿಧಾನವು ನಮ್ಮ ದೇಶದ ಜನರಿಗೆ ತಿಳಿಯುವಂತೆ ಮಾಡಬೇಕು, ಅದಕ್ಕೆ ಪ್ರಚಾರ ನೀಡಬೇಕು ಎಂಬುದು ಅವರ ಅಭಿಮತ.

ಅದಕ್ಕೆಂದೇ, 18.12.1928ರಂದು ಅವರ 'ಹಿಂದುಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್' (ಎಚ್‌ಎಸ್‌ಆರ್‌ಎ) ಸಂಘಟನೆಯು ಒಂದು ಕರಪತ್ರ ಹೊರಡಿಸಿ, ಲಾಲಾ ಲಜಪತ್ ರಾಯ್ ಅವರ ಕೊಲೆಗೆ ಪ್ರತಿಯಾಗಿ ಈತನನ್ನು ಸಾಯಿಸಿದ್ದೇವೆ ಎಂದು ಹೇಳಿಕೆ ನೀಡಿತು. ಅಂದು ಅದರ ಕಮಾಂಡರ್ ಇನ್ ಚೀಫ್ ಆಗಿದ್ದುದು ಬಲರಾಜ್. ತಮ್ಮ ಹೋರಾಟಕ್ಕೆ ಹೆಚ್ಚು ಪ್ರಚಾರ ನೀಡಬೇಕು, ಇನ್ನೊಂದು ನಾಟಕೀಯ ಕೆಲಸವನ್ನು ಮಾಡಬೇಕು ಎಂದು ಭಗತ್ ಸಿಂಗ್ ಮತ್ತು ಸಂಗಡಿಗರು ಮಾಡಿದರು. 8.4.1929ರಂದು ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ ದೆಹಲಿಯ ಅಸೆಂಬ್ಲಿಯ ಸಾರ್ವಜನಿಕ ಗ್ಯಾಲರಿಯಿಂದ ಎರಡು ಕಚ್ಚಾ ಬಾಂಬ್ ಎಸೆದರು. ಆ ಬಾಂಬುಗಳಿಂದ ಯಾರನ್ನೂ ಸಾಯಿಸುವ ಉದ್ದೇಶ ಹೊಂದಿರಲಿಲ್ಲ, ಬದಲಿಗೆ ಪ್ರಚಾರವೇ ಮುಖ್ಯ ಉದ್ದೇಶ. ಕಚ್ಚಾ ಬಾಂಬ್‌ಗಳ ಜತೆಗೆ ಕರಪತ್ರಗಳನ್ನು ತೂರಿಬಿಟ್ಟರು. ಇಬ್ಬರೂ 'ಇಂಕ್ವಿಲಾಬ್ ಜಿಂದಾಬಾದ್' ಎಂದು ಘೋಷಣೆ ಕೂಗುತ್ತಾ, ಅಲ್ಲಿದ್ದ ಪೊಲೀಸರಿಗೆ ತಮ್ಮನ್ನು ತಾವು ಒಪ್ಪಿಸಿಕೊಂಡರು. ಈ ಸಮಯದಲ್ಲಿ ಸಾಂಡರ್ಸ್ ಕೊಲೆಯನ್ನು ಇವರೇ ಮಾಡಿದ್ದು ಎಂದು ಇನ್ನೂ ಬಯಲಾಗಿರಲಿಲ್ಲ.

ಅಸೆಂಬ್ಲಿ ಹಾಲ್ ಕಚ್ಚಾ ಬಾಂಬ್ ಸ್ಫೋಟದ ವಿಚಾರಣೆ ನಡೆದು, ಭಗತ್ ಸಿಂಗ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಆ ಬಾಂಬ್ ಸ್ಫೋಟದಲ್ಲಿ ಯಾವುದೇ ಜೀವಹಾನಿ ಆಗಿರಲಿಲ್ಲ, ಆದರೂ ಜೀವಾವಧಿ ಶಿಕ್ಷೆ ವಿಧಿಸಿತು ಬ್ರಿಟಿಷ್ ನ್ಯಾಯದಾನ ವ್ಯವಸ್ಥೆ! ಈ ನಡುವೆ 15.4.1929ರಂದು ಲಾಹೋರಿನಲ್ಲಿ ಎಚ್‌ಎಸ್‌ಆರ್‌ಎ ನಡೆಸುತ್ತಿದ್ದ ಸಣ್ಣ ಮಟ್ಟದ ರಹಸ್ಯ ಬಾಂಬ್ ಕಾರ್ಯಾಗಾರವನ್ನು ಬ್ರಿಟಿಷ್ ಪೊಲೀಸರು ಪತ್ತೆ ಹಚ್ಚಿದರು. ಸಹರಾನ್‌ಪುರದಲ್ಲಿದ್ದ ಇನ್ನೊಂದು ಪುಟ್ಟ ಕಾರ್ಯಾಗಾರವನ್ನು ಸಹ ಪತ್ತೆಹಚ್ಚಲಾಯಿತು. ಅಲ್ಲಿದ್ದ ಕೆಲಸಗಾರರೇ ಬ್ರಿಟಿಷ್ ಪೊಲೀಸರಿಗೆ ಮಾಹಿತಿಯನ್ನು ನೀಡಿದ್ದರು! ಈ ಮಾಹಿತಿಯನ್ನು ಕೆದಕುತ್ತಾ ಹೋದ ಪೊಲೀಸರು, ಸಾಂಡರ್ಸ್ ಕೊಲೆ ಪ್ರಕರಣಕ್ಕೆ ಒಂದು ತಿರುವು ಕೊಟ್ಟು, ಭಗತ್ ಸಿಂಗ್, ಸುಖದೇವ್, ರಾಜಗುರು ಮತ್ತು ಇತರ 21 ಜನರ ಮೇಲೆ ಆ ಕೊಲೆ ಪ್ರಕರಣ ಹೊರಿಸಿದರು.

ಭಗತ್ ಸಿಂಗ್ ಮತ್ತು ಅವರ ಸಹವರ್ತಿಗಳನ್ನು ಇನ್ನಷ್ಟು ತೀವ್ರವಾದ ಶಿಕ್ಷೆಗೆ ಗುರಿಪಡಿಸಬೇಕು ಎಂದು ಬ್ರಿಟಿಷರು ನಿರ್ಧರಿಸಿದರು. ಇತರ ಪ್ರಸಿದ್ಧ ರಾಜಕೀಯ ಕೈದಿಗಳಂತೆ ಅವರಿಗೆ ಆರಾಮವಾದ ಜೈಲುಗಳನ್ನು ನೀಡಲಿಲ್ಲ; ಬದಲಿಗೆ ಕಠಿಣವಾಗಿ ನಡೆಸಿಕೊಂಡರು. ಅಂದು ನಮ್ಮನ್ನು ಆಳುತ್ತಿದ್ದ ವೈಸ್‌ರಾಯ್ ಇರ್ವಿನ್‌ನು, ಈ ನಡುವೆ, ಇವರ ಪ್ರಕರಣದ ತನಿಖೆಗೆಂದು ವಿಶೇಷ ಟ್ರಿಬ್ಯುನಲನ್ನು (ನ್ಯಾಯಮಂಡಳಿ) 1.5.1930ರಂದು ಸ್ಥಾಪಿಸಿದನು. ಇದರಲ್ಲಿ ಮೂವರು ನ್ಯಾಯಾಧೀಶರಿದ್ದರು.

ಅದು ನೀಡಿದ ತೀರ್ಪನ್ನು ಕೇವಲ ಇಂಗ್ಲೆಂಡಿನಲ್ಲಿದ್ದ 'ಪ್ರೈವಿ ಕೌನ್ಸಿಲ್'ನಲ್ಲಿ ಮಾತ್ರ ಮರು ಅಪೀಲ್ ಮಾಡಬಹುದು ಎಂಬ ಕಠೋರ ಷರತ್ತನ್ನು ವೈಸ್‌ರಾಯ್ ಇರ್ವಿನ್ ವಿಧಿಸಿದನು. ಬ್ರಿಟಿಷರ ಈ ನ್ಯಾಯದಾನದ ಪ್ರಕ್ರಿಯೆ ಎಷ್ಟು ಏಕಪಕ್ಷೀಯವಾಗಿತ್ತೆಂದರೆ, ಆರೋಪಿತರು ತಮ್ಮ ಕೇಸನ್ನು ಡಿಫೆಂಡ್ ಮಾಡುವಂತಿರಲಿಲ್ಲ. ಆ ನ್ಯಾಯಾಲಯದ ಆವರಣದಲ್ಲಿ ಆರೋಪಿಗಳು ಹಾಜರಿರಬೇಕೆಂದೇ ಇರಲಿಲ್ಲ ಮತ್ತು ಎಕ್ಸ್ ಪಾರ್ಟಿಯಾಗಿ ಅಂದರೆ, ಅವರ ಅನುಪಸ್ಥಿತಿಯಲ್ಲಿ ಶಿಕ್ಷೆಯನ್ನು ವಿಧಿಸಲಾಗಿತ್ತು!

7.10.1930ರಂದು ವಿಶೇಷ ಟ್ರಿಬ್ಯುನಲ್ ತನ್ನ ತೀರ್ಪನ್ನು ನೀಡಿತು. ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಇವರಿಗೆ ಸಾಂಡರ್ಸ್ ಪ್ರಕರಣದಲ್ಲಿ ಮರಣದಂಡನೆ ವಿಧಿಸಲಾಯಿತು. ಕುಂದನ್ ಲಾಲ್‌ಗೆ ಏಳು ವರ್ಷ, ಪ್ರೇಮ್ ದತ್‌ಗೆ ಐದು ವರ್ಷ ಶಿಕ್ಷೆ ಮತ್ತು ಏಳು ಮಂದಿಗೆ ಗಡಿಪಾರಿನ ಶಿಕ್ಷೆ ವಿಧಿಸಲಾಯಿತು. ಇಲ್ಲೊಂದು ದೊಡ್ಡ ವ್ಯಂಗ್ಯ, ಅನ್ಯಾಯ, ಮೋಸ ನಡೆದಿತ್ತು. ವೈಸ್‌ರಾಯ್ ಇರ್ವಿನ್ ರೂಪಿಸಿದ ಮತ್ತು ಭಗತ್ ಸಿಂಗ್‌ಗೆ ಮರಣದಂಡನೆ ವಿಧಿಸಿದ ಈ ವಿಶೇಷ ಟ್ರಿಬ್ಯುನಲ್, ಕೊನೆಗೂ ಅಧಿಕೃತ ಮಾನ್ಯತೆಯನ್ನು ಪಡೆಯಲೇ ಇಲ್ಲ. ಅಂದಿನ ನಿಯಮದಂತೆ, ಬ್ರಿಟಿಷ್ ಪಾರ್ಲಿಮೆಂಟಿನ ಸೆಂಟ್ರಲ್ ಅಸೆಂಬ್ಲಿಯಲ್ಲಿ ಈ ವಿಶೇಷ ಟ್ರಿಬ್ಯುನಲ್‌ಗೆ ಮಾನ್ಯತೆ ದೊರಕಬೇಕಿತ್ತು; ಆದರೆ, ಯಾವುದೇ ಮಾನ್ಯತೆ ಪಡೆಯದೇ ಇರುವ ಈ ಟ್ರಿಬ್ಯೂನಲ್ ಭಗತ್ ಸಿಂಗ್ ಮತ್ತು ಅವರ ಗೆಳೆಯರಿಗೆ ಗಲ್ಲುಶಿಕ್ಷೆ ವಿಧಿಸಿತ್ತು. ಆ ಟ್ರಿಬ್ಯೂನಲ್‌ಗೆ ಯಾವುದೇ ಸಾಂವಿಧಾನಿಕ ಅಧಿಕಾರ ಕೊನೆಯ ತನಕವೂ ದೊರಕಲೇ ಇಲ್ಲ. ಅದರ ಅರ್ಥ, ಅಧಿಕೃತ ಮಾನ್ಯತೆ ಇಲ್ಲದ ಒಂದು ಟ್ರಿಬ್ಯೂನಲ್ ರಚಿಸಿದ ಅಂದಿನ ಬ್ರಿಟಿಷ್ ಸರಕಾರ, ಆರೋಪಿಗಳಿಗೆ ತಮ್ಮ ಪ್ರಕರಣವನ್ನು ರಕ್ಷಿಸಿಕೊಳ್ಳುವ ಸಮರ್ಪಕ ಅವಕಾಶ ನೀಡದೇ, ಮರಣದಂಡನೆಯನ್ನು ವಿಧಿಸಿತು!

23.3.1931ರಂದು ಭಗತ್ ಸಿಂಗ್ ಮತ್ತು ಇನ್ನಿಬ್ಬರನ್ನು ಲಾಹೋರಿನಲ್ಲಿ ಬ್ರಿಟಿಷರು ಫಾಶಿ ಶಿಕ್ಷೆ ವಿಧಿಸಿ, ಸಾಯಿಸಿದರು. ಇವರ ವಿಚಾರಣೆಯು ನ್ಯಾಯದಾನದ ಮೂಲಭೂತ ವಿಧಿವಿಧಾನಗಳಿಗೆ ವಿರುದ್ಧವಾಗಿ ನಡೆದಿದೆ ಎಂದು ಸುಪ್ರೀಂ ಕೋರ್ಟ್ ನಂತರ ಹೇಳಿದೆ. 24.3.1931ರಂದು ಅವರನ್ನು ಮರಣದಂಡನೆಗೆ ಒಳಪಡಿಸಬೇಕು ಎಂಬ ಆದೇಶವಿದ್ದರೂ, 23.3.1931ರಂದು ಅವರನ್ನು ಬ್ರಿಟಿಷರು ಸಾಯಿಸಿದರು! ಅವರ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಲಿಲ್ಲ, ಬದಲಿಗೆ, ಜೈಲಿನ ಹಿಂಭಾಗದ ಗೋಡೆಯಲ್ಲಿ ಒಂದು ತೂತು ಮಾಡಿ, ರಹಸ್ಯವಾಗಿ ಹೊರಸಾಗಿಸಿ ಅಂತ್ಯಕ್ರಿಯೆ ಮಾಡಲಾಯಿತು.

ಭಗತ್ ಸಿಂಗ್‌ನನ್ನು ನಾವೆಲ್ಲಾ ಇಂದು ನೆನಪಿಸಿಕೊಳ್ಳುತ್ತಿದ್ದೇವೆ. ಜತೆಯಲ್ಲೇ, ಅಧಿಕೃತ ಮಾನ್ಯತೆ ಇಲ್ಲದ ಒಂದು ಟ್ರಿಬ್ಯೂನಲ್ ಮೂಲಕ ಅವನಿಗೆ ಗಲ್ಲು ಶಿಕ್ಷೆಯನ್ನು ಬ್ರಿಟಿಷರು ವಿಧಿಸಿದರು ಎಂಬುದನ್ನು ಸಹ ನೆನಪಿಸಿಕೊಳ್ಳಲೇಬೇಕು.

## ಪ್ರತಿಸ್ಪಂದನ

ರಮೇಶ ಶಂಕ್ರಪ್ಪ ಮಂಟೂರ

# ಶ್ರೀಗಳು ತಮ್ಮ ಬುದ್ಧಿಗೆ ಸಾಣೆ ಹಿಡಿಯಬೇಕಿದೆ!

ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರು 'ನೂರೆಂಟು ವಿಶ್ವ' ಅಂಕಣದಲ್ಲಿ (ವಿಶ್ವವಾಣಿ ಆ.15) ಸಾಣೇಹಳ್ಳಿ ಶ್ರೀಗಳ ಕುರಿತಾಗಿ ಬರೆದಿರುವ ಲೇಖನ ಮನಸ್ಸಿಗೆ ತಾಗಿತು. ನಿಜ ಭಟ್ರೇ, ಹಿಂದೂ ವಿರೋಧಿ ಮನಸ್ಥಿತಿಯ ಈ ಸಾಣೇಹಳ್ಳಿ ಶ್ರೀಗಳ ಬಗ್ಗೆ ನನ್ನ ಮನಸ್ಸು ಕೂಡ ಹೀಗೆಯೇ ವಿಚಾರಿಸಿದ್ದು ಶತಪ್ರಮಾಣ ಸತ್ಯ. ನನ್ನ ಮನಸ್ಸಿನಲ್ಲಿ ಮೂಡಿದ್ದ ಭಾವನೆಗಳಿಗೆ ಅಕ್ಷರ ರೂಪ ಕೊಟ್ಟ ತಮಗೆ ಕೋಟಿ ಕೋಟಿ ನಮಸ್ಕಾರಗಳು.

ಇಡೀ ಜಗತ್ತಿಗೆ ಮಾದರಿಯಾದ, ಎಲ್ಲ ಧರ್ಮದವರೂ ಓದಬಹುದಾದ ಮತ್ತು ಅನುಸರಿಸಬಹುದಾದ ರಾಮಾಯಣ, ಮಹಾಭಾರತ ಹಾಗೂ ಭಗವದ್ಗೀತೆಗಳನ್ನು ಕೊಟ್ಟ ಹಿಂದೂ ಧರ್ಮದ ಬಗ್ಗೆ ಶ್ರೀಗಳು ಈ ರೀತಿ ಹೇಳುವುದು ಸುತರಾಂ ಸರಿ ಕಾಣುವುದಿಲ್ಲ. ಅವರು ಹಿಂದೂ ಭಕ್ತರು ಕೊಟ್ಟಿರುವ ಪ್ರಸಾದ



ಸ್ವೀಕರಿಸಿ ಓದುತ್ತಾ ಕುಳಿತು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡಿದ್ದಿದ್ದರೆ ಈ ರೀತಿಯ ಹೇಳಿಕೆಗಳನ್ನು ಖಂಡಿತ ಕೊಡುತ್ತಿರಲಿಲ್ಲ. ಸಾಣೇಹಳ್ಳಿ ಶ್ರೀಗಳು ಸ್ವಾಮಿ ವಿವೇಕಾನಂದರ, ವಿಜಯಪುರದ ಸಿದ್ದೇಶ್ವರ ಶ್ರೀಗಳ, ತುಮಕೂರಿನ ಶ್ರೀ ಶಿವಕುಮಾರ ಸ್ವಾಮಿಗಳ, ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳ ಮಾತುಗಳನ್ನು, ಪುಸ್ತಕಗಳನ್ನು, ಕಾಯಕ ಗಳನ್ನು ಕೇಳಿಲ್ಲ, ಓದಿಲ್ಲ ಮತ್ತು ನೋಡಿಲ್ಲ ಎನಿಸುತ್ತದೆ. ಇಂಗ್ಲಿಷ್ ಭಾಷೆಯ ಜ್ಞಾನವಿರುವ ಶ್ರೀಗಳು ಅಕ್ಷತ್ ಗುಪ್ತಾ ಅವರು ಬರೆದಿರುವ 'The Hidden Hindu ' ಪುಸ್ತಕ ಸರಣಿಯನ್ನು ಒಮ್ಮೆ ಓದಿದರೆ ಒಳ್ಳೆಯದು. ಈ ಎಲ್ಲದರಿಂದ ಶ್ರೀಗಳಿಗೆ ಹಿಂದೂ ಧರ್ಮದ ಸಾರ, ಅದರ ವ್ಯಾಪ್ತಿ, ಮಹತ್ವ ಮತ್ತು ಪ್ರಾಮುಖ್ಯದ ಬಗ್ಗೆ ತಿಳಿಯುತ್ತದೆ.

ಸಾಣೇಹಳ್ಳಿ ಶ್ರೀಗಳಂಥ ತಥಾಕಥಿತ ವಿಚಾರವಾದಿಗಳು, ಪ್ರಗತಿಪರ ಚಿಂತಕರು ಇತಿಹಾಸದಲ್ಲಿ ಎಷ್ಟೋ ಜನ ಬಂದುಹೋಗಿದ್ದಾರೆ; ಆದರೆ ಜನರ ಹೃದಯದಲ್ಲಿ, ಅವರ ಕಾಯಕದಲ್ಲಿ, ಪೂಜಾಪದ್ಧತಿಯಲ್ಲಿ ಹಾಗೂ ವಿಧಿ-ವಿಧಾನಗಳಲ್ಲಿ ಹಾಸು ಹೊಕ್ಕಾಗಿರುವ ಹಿಂದೂ ಧರ್ಮದ ಬೇರುಗಳನ್ನು ಯಾರಿಂದಲೂ ಅಲುಗಾಡಿಸಲಾಗಿಲ್ಲ ಎಂಬುದನ್ನು ಮರೆಯಲಾಗದು. ಈಗಲೂ ಕಾಲ ಮಿಂಚಿಲ್ಲ. ಶ್ರೀಗಳು ಮತ್ತಷ್ಟು ಓದಿನಲ್ಲಿ ತೊಡಗಿಸಿಕೊಂಡು ಜ್ಞಾನವನ್ನು ವಿಸ್ತರಿಸಿಕೊಳ್ಳುವುದರ ಕಡೆಗೆ, ಸಮಾಜವನ್ನು ಒಂದುಗೂಡಿಸುವ ಮತ್ತು ಸಮಾಜಮುಖಿ ಕಾಯಕಗಳನ್ನು ಮಾಡುವ ಕಡೆಗೆ ಮನಸ್ಸು ಮಾಡಿದರೆ, ಅದರಿಂದ ಅವರಿಗೂ ಮತ್ತು ಸಮಾಜಕ್ಕೂ ಒಳಿತಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. 'ಸರ್ವೇ ಜನಾಃ ಸುಖಿನೋ ಭವಂತು'.... 'ವಸುಧೈವ ಕುಟುಂಬಕಂ'... 'ಜೈ ಹಿಂದ್'.... 'ವಂದೇ ಮಾತರಂ'.

(ಲೇಖಕರು ಹವ್ಯಾಸಿ ಬರಹಗಾರರು)

# ಬುದ್ಧಿಜೀವಿಗಳ ಇಬ್ಬಂದಿತನ ಮತ್ತು ಜಾಣಕುರುಡು

**ವಿಶ್ಲೇಷಣೆ**
ಗಣೇಶ್‌ಭಟ್ ವಾರಾಣಸಿ
vveditoped@gmail.com

ವಿವಿಧ ದೇಶಗಳಲ್ಲಿ ನಡೆದಿರುವ ಹಾಗೂ ನಡೆಯುತ್ತಿರುವ ಹಿಂಸಾಚಾರ, ದೊಂಬಿ, ನರಮೇಧಗಳಿಗೆ ಲೆಕ್ಕವಿಲ್ಲ. ಆದರೆ, ಕೆಲವು ಕೃತ್ಯಗಳು ಮಾತ್ರ ಜಾಗತಿಕವಾಗಿ ಪ್ರಚಾರವನ್ನು ಪಡೆಯುತ್ತವೆ, ಕೆಲವು ಹಿಂಸಾಚಾರಗಳು ಮಾತ್ರ ಖಂಡಿಸಲ್ಪಡುತ್ತವೆ. ಮಿಕ್ಕಂತೆ, ಕೆಲ ದೇಶಗಳಲ್ಲಿ ನಡೆಯುತ್ತಿರುವ ಎಷ್ಟೋ ಹಿಂಸಾಚಾರಗಳು ಬೆಳಕಿಗೆ ಬರುವುದೇ ಇಲ್ಲ. ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ವಿಚಾರಗಳನ್ನು ಜಗತ್ತಿನ ಮುಂದೆ ಇಡಬೇಕಾದ ಪತ್ರಕರ್ತರು ಹಾಗೂ ಆಕ್ಟಿವಿಸ್ಟ್‌ಗಳು ಹೊಂದಿರುವ ಪಕ್ಷಪಾತ ಧೋರಣೆಯಿಂದಾಗಿ ಜಗತ್ತಿನಲ್ಲಿ ನಡೆದ ಬಹಳಷ್ಟು ಘನಘೋರ ಘಟನೆಗಳು ಜನರನ್ನು ತಲುಪುವುದೇ ಇಲ್ಲ. ನಿಷ್ಪಕ್ಷಪಾತ ಧೋರಣೆಯ ಮಾಧ್ಯಮಗಳು ಇಂದು ವಿರಳ. ಜಗತ್ತಿನ ಬಹುತೇಕ ಪತ್ರಕರ್ತರು ಹಾಗೂ ಆಕ್ಟಿವಿಸ್ಟ್‌ಗಳು ಎಡ ಚಿಂತನೆಗಳಿಂದ ಪ್ರಭಾವಿತರಾಗಿರುವುದು ಕಂಡುಬರುತ್ತದೆ. ಸುದ್ದಿಗಳ ಸತ್ಯಾಸತ್ಯತೆ ಏನೇ ಇರಲಿ, ತಮ್ಮ ಚಿಂತನೆಗೆ ಪೂರಕವಾಗಿರುವ ವಿಚಾರಗಳನ್ನು ಮಾತ್ರವೇ ಅವರು ಪ್ರಚುರಪಡಿಸುತ್ತಾರೆ. ತಮ್ಮ ಅನುಕೂಲಕ್ಕೆ ತಕ್ಕಂತೆ ನಿರೂಪಣೆಗಳನ್ನು ಹೆಣೆಯುವುದರಲ್ಲಿ ಇವರು ಸಿದ್ಧಹಸ್ತರು.

ಆಧುನಿಕ ಜಗತ್ತಿನ ಇತಿಹಾಸದಲ್ಲಿ ಭಾರಿ ನರಮೇಧಗಳನ್ನು ನಡೆಸಿದವರ ಪಟ್ಟಿಯಲ್ಲಿ ಜರ್ಮನಿಯ ನಾಜಿ ನಾಯಕ ಅಡಾಲ್ಫ್ ಹಿಟ್ಲರ್, ಕಾಂಬೋಡಿಯಾದ ಪೋಲ್ ಪಾಟ್ ಹಾಗೂ ಖೆಮರ್ ರೋಗ್, ಇಟಲಿಯ ಫ್ಯಾಸಿಸ್ಟ್ ನಾಯಕ ಬೆನಿಟೊ ಮುಸೊಲಿನಿ ಮುಂತಾದವರ ಹೆಸರು ಎದ್ದುಕಾಣುತ್ತದೆ. ಆದರೆ ಇವರೆಲ್ಲರಿಗಿಂತಲೂ ಹೆಚ್ಚು ಜನರನ್ನು ಸಾಯಿಸಿದ್ದ ಕಮ್ಯುನಿಸ್ಟ್ ನಾಯಕರಾದ ವ್ಲಾದಿಮಿರ್ ಲೆನಿನ್, ಜೋಸೆಫ್ ಸ್ಟಾಲಿನ್, ಮಾವೋ ಝೆಡಾಂಗ್, ಚೆಗುವೆರಾ ಮೊದಲಾದವರು ಮಾತ್ರ ಆದರ್ಶ ವ್ಯಕ್ತಿಗಳಾಗಿ ಆರಾಧಿಸಲ್ಪಡುತ್ತಿದ್ದಾರೆ. ಇಡೀ ಜಗತ್ತಿನಲ್ಲಿ ಕಮ್ಯುನಿಸ್ಟ್ ಕ್ರಾಂತಿಯ ಹೆಸರಿನಲ್ಲಿ ಸಾಯಿಸಲ್ಪಟ್ಟವರ ಸಂಖ್ಯೆ 10 ಕೋಟಿಯನ್ನು ಮೀರುತ್ತದೆ. ಕಮ್ಯುನಿಸಂ ಹೆಸರಿನಲ್ಲಿ ನಡೆದ ನರಮೇಧಗಳ ಬಗ್ಗೆ ಮಾನವಹಕ್ಕುಗಳ ವಕ್ತಾರರಿಗೆ ಯಾವುದೇ ವಿಷಾದಗಳಿಲ್ಲ.

ಇಲ್ಲಿ ಧಾರ್ಮಿಕ ಹಿತಾಸಕ್ತಿಗಳೂ ಬಹುದೊಡ್ಡ ಕೆಲಸವನ್ನು ಮಾಡುತ್ತವೆ. ಭಾರತದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ವ್ಯಕ್ತಿಗಳು ಗಲಭೆಗಳಲ್ಲಿ ಸಾಯಿಸಲ್ಪಟ್ಟರೆ ಅದು ಜಾಗತಿಕ ಸುದ್ದಿಯಾಗಿಬಿಡುತ್ತದೆ. ಮಣಿಪುರ ರಾಜ್ಯದಲ್ಲಿ ಇತ್ತೀಚೆಗೆ ಮೈತೇಯಿ ಹಾಗೂ ಕುಕಿ ಸಮುದಾಯಗಳ ನಡುವೆ ನಡೆದ ಸಂಘರ್ಷವನ್ನೇ ತೆಗೆದುಕೊಳ್ಳೋಣ. ಈ ಸಂಘರ್ಷದಲ್ಲಿ ಸುಮಾರು 60 ಸಾವಿರ ಮಂದಿ ಮನೆ-ಮಠಗಳನ್ನು ಕಳೆದುಕೊಂಡಿದ್ದಾರೆ, 224 ಮಂದಿ ಸಾವಿಗೀಡಾಗಿದ್ದಾರೆ. ಸತ್ತವರಲ್ಲಿ ಮೈತೇಯಿಗಳೂ ಇದ್ದಾರೆ, ಕುಕಿಗಳೂ ಇದ್ದಾರೆ. ಬಹುತೇಕ ಮೈತೇಯಿಗಳು ಹಿಂದೂಧರ್ಮಕ್ಕೆ ಹಾಗೂ ಕುಕಿಗಳು ಕ್ರೈಸ್ತಮತಕ್ಕೆ ಸೇರಿದವರು. ಈ ಗಲಭೆಯಲ್ಲಿ ಕುಕಿಗಳ ಚರ್ಚುಗಳೂ, ಮೈತೇಯಿಗಳ ದೇವಸ್ಥಾನಗಳೂ ನಾಶವಾಗಿವೆ. ಆದರೆ ಈ ವೇಳೆ ಮೈತೇಯಿಗಳನ್ನು ಅಪರಾಧಿಗಳನ್ನಾಗಿಯೂ, ಕುಕಿಗಳನ್ನು ಸಂತ್ರಸ್ತರನ್ನಾಗಿಯೂ ಬಿಂಬಿಸಲಾಯಿತು. ಕುಕಿ ಸಮುದಾಯದ ಮಹಿಳೆಯರನ್ನು ನಿರ್ವಸ್ತ್ರರನ್ನಾಗಿಸಿದ ಪ್ರಕರಣದ ನಂತರ ಇಡೀ ಗಲಭೆಯ ತಪ್ಪನ್ನು ಮೈತೇಯಿ ಜನಾಂಗದ ತಲೆಗೆ ಕಟ್ಟಲಾಯಿತು.

ಮಣಿಪುರದಲ್ಲಿ ಜನಾಂಗೀಯ ಕಲಹ ನಡೆದುದು ಇದೇ ಮೊದಲ ಬಾರಿಗೆ ಏನಲ್ಲ. ಕುಕಿಗಳು ಮತ್ತು ನಾಗಾಗಳ ನಡುವೆ ನಡೆಯುತ್ತಿರುವ ರಕ್ತಪಾತಕ್ಕೆ ದಶಕಗಳ ಇತಿಹಾಸವೇ ಇದೆ. ಈ ಸಂಘರ್ಷದಿಂದಾಗಿ ತಿಂಗಳುಗಟ್ಟಲೆ ರಸ್ತೆತಡೆ ಮತ್ತು ಮುಷ್ಕರಗಳು ನಡೆಯುತ್ತಿದ್ದವು. ಆದರೆ, ಕುಕಿ ಮತ್ತು ನಾಗಾಗಳೀರ್ವರೂ ಕ್ರೈಸ್ತ ಮತಾನುಯಾಯಿಗಳಾಗಿರುವುದರಿಂದ ಅವರ ನಡುವಿನ ಗಲಭೆಗಳು ಅಂತಾರಾಷ್ಟ್ರೀಯ ಬಿಡಿ ರಾಷ್ಟ್ರೀಯ ಮಟ್ಟದಲ್ಲೂ ಸುದ್ದಿಯಾಗುತ್ತಲೇ ಇರಲಿಲ್ಲ; ಆದರೆ ಕಳೆದ ವರ್ಷ ಮೈತೇಯಿಗಳು ಹಾಗೂ ಕುಕಿಗಳ ನಡುವೆ ನಡೆದ ಜನಾಂಗೀಯ ಕಲಹವು ಜಾಗತಿಕ ಮಟ್ಟದಲ್ಲಿ ಸುದ್ದಿಯಾಯಿತು. ಮಣಿಪುರದಲ್ಲಿ ಅಲ್ಪಸಂಖ್ಯಾತರಾದ ಕ್ರೈಸ್ತರ ಮೇಲೆ ಬಹುಸಂಖ್ಯಾತ ಹಿಂದೂಗಳು ನಡೆಸುತ್ತಿರುವ ದಾಳಿಯೆಂಬಂತೆ ಬಿಂಬಿಸಲ್ಪಟ್ಟಿತು. ಚರ್ಚುಗಳಿಗಿರುವ ಅಂತಾರಾಷ್ಟ್ರೀಯ ಜಾಲ, ಜಾಗತಿಕ ಮಾಧ್ಯಮಗಳಿಗೆ ಭಾರತದ ಹಾಗೂ ಹಿಂದೂ ಧರ್ಮದ ಮೇಲಿರುವ ಪೂರ್ವಗ್ರಹ, ನರೇಂದ್ರ ಮೋದಿ ಸರಕಾರವನ್ನು ಯಾವುದಾದರೂ ನೆಪದಲ್ಲಿ ಹಣಿಯಬೇಕೆಂಬ ಭಾರತದ ವಿಪಕ್ಷಗಳ ಹಠ ಈ ಎಲ್ಲ ಕಾರಣಗಳಿಂದಾಗಿ ಮಣಿಪುರ ಗಲಭೆಯು 'ಕ್ರೈಸ್ತರ ಮೇಲಿನ ಹಿಂದೂ ಪ್ರಾಬಲ್ಯದ ಹೇರಿಕೆ' ಎಂಬಂತೆ ಜಾಗತಿಕ ಸುದ್ದಿಯಾಗಿ ಬಿತ್ತರಿಸಲ್ಪಟ್ಟಿತು.

ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂ ಸಿಖ್ ಹಾಗೂ ಕ್ರೈಸ್ತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ-ದೌರ್ಜನ್ಯಗಳಿಗೆ ಇಡೀ ಪ್ರಪಂಚವಿಂದು ಕಿವುಡಾಗಿ ಕೂತಿದೆ. ಪಾಕಿಸ್ತಾನದ ಜನಸಂಖ್ಯೆಯ ಕೇವಲ ಶೇ.2.17ರಷ್ಟು ಮಂದಿ (ಸುಮಾರು 52 ಲಕ್ಷ) ಹಿಂದೂಗಳು. ಆದರೆ ಇವರ ಬಲವಂತದ ಮತಾಂತರ ಕಾರ್ಯ ಮುಂದುವರಿದಿದೆ. ಅಲ್ಲಿ ಇದರ ವಿರುದ್ಧ ಯಾವುದೇ ಕಾನೂನು-ಕಾಯ್ದೆ ಇಲ್ಲ. ಪಾಕಿಸ್ತಾನದಲ್ಲಿ ಪ್ರತಿವರ್ಷ 1000ಕ್ಕಿಂತಲೂ ಹೆಚ್ಚು ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದ ಹುಡುಗಿಯರನ್ನು ಅಪಹರಿಸಿ ಬಲವಂತವಾಗಿ ಇಸ್ಲಾಮಿಗೆ ಮತಾಂತರಿಸಿ ಮುಸಲ್ಮಾನರಿಗೆ ವಿವಾಹ ಮಾಡಿಕೊಡಲಾಗುತ್ತಿದೆ. ಇಂಥ ಹೆಣ್ಣುಮಕ್ಕಳಿಗೆ ಅಲ್ಲಿ ಯಾವುದೇ ರೀತಿಯ ಕಾನೂನು ನೆರವು ಸಿಗುವುದಿಲ್ಲ.

ಕೆಲವು ವರ್ಷಗಳ ಹಿಂದೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ನಗರ್ಪಾರ್ಕರ್ ಹೆಸರಿನ ಹಳ್ಳಿಯಿಂದ ರಾಜಿತಾ ಮೇಘ್ವಾರ್ ಎಂಬ 16 ವರ್ಷದ ಹೆಣ್ಣುಮಗಳನ್ನು ಆಶಿಕ್ ಅಹ್ಮದಾನಿ ಎಂಬಾತ ಅಪಹರಿಸಿದ. ಈಕೆಯನ್ನು ಬಲವಂತವಾಗಿ ಇಸ್ಲಾಮಿಗೆ ಮತಾಂತರಿಸಿ ಅಂದೇ ಆಕೆಯ ಇಚ್ಛೆಗೆ ವಿರುದ್ಧವಾಗಿ ಸೈಯದ್ ನವಾಜ್ ಅಲಿ ಎಂಬ ಮುಸಲ್ಮಾನನೊಂದಿಗೆ ಆಕೆಯ ವಿವಾಹವನ್ನು ಮಾಡಲಾಯಿತು. 'ಇದಕ್ಕೆ ಒಪ್ಪದಿದ್ದರೆ ನಿನ್ನ ಹೆತ್ತವರನ್ನು ಕೊಲೆಮಾಡಲಾಗುವುದು' ಎಂದು ಆಕೆಯನ್ನು ಹೆದರಿಸಲಾಗಿತ್ತು. ಎರಡು ತಿಂಗಳ ನಂತರ ಆಕೆ ಅವರ ಬಂಧನದಿಂದ ಹೇಗೋ ತಪ್ಪಿಸಿಕೊಂಡು ತಾಯಿಮನೆಗೆ ಸೇರಿದರೂ, ಪೊಲೀಸರು ಪುನಃ ಆಕೆಯನ್ನು ವಶಕ್ಕೆ ತೆಗೆದುಕೊಂಡರು. ಕೋರ್ಟಿನಲ್ಲಿ ವಿಚಾರಣೆ ನಡೆದು ನ್ಯಾಯಾಧೀಶರು ಆಕೆಯನ್ನು ತಾಯಿಮನೆಯ ಬದಲಿಗೆ ಸರಕಾರ ನಡೆಸುವ ಶೆಲ್ಟರ್ ಹೋಮ್‌ಗೆ ಕಳುಹಿಸಿದರು. ತಾಯಿಮನೆಗೆ ಕಳುಹಿಸುವಂತೆ ಆಕೆ ಮತ್ತು ಆಕೆಯ ಹೆತ್ತವರು ಅತ್ತುಕರೆದು, ನೆಲದಲ್ಲಿ ಹೊರಳಾಡಿ ನ್ಯಾಯಾಲಯವನ್ನು ಬೇಡುತ್ತಿದ್ದ ವಿಡಿಯೋ ಕೆಲವು ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಇಸ್ಲಾಮಿಗೆ ಮತಾಂತರಿಸಲ್ಪಟ್ಟ ಕಾರಣ, ಹಿಂದೂಗಳಾದ ಹೆತ್ತವರ ಮನೆಗೆ ಆಕೆಯನ್ನು ಕಳುಹಿಸುವಂತಿಲ್ಲ ಎಂಬ ಕಾರಣ ನೀಡಿ ಆಕೆಯನ್ನು ಅಲ್ಲಿನ ನ್ಯಾಯಾಲಯವು ಹೀಗೆ ಆಶ್ರಯ ಕೇಂದ್ರಕ್ಕೆ ಕಳುಹಿಸಿತು. ಪಾಕಿಸ್ತಾನದಲ್ಲಿ ನಡೆಯುತ್ತಿರುವ

ಬಲವಂತದ ಮತಾಂತರಕ್ಕೆ ಇದೊಂದು ಉದಾಹರಣೆಯಷ್ಟೇ! ಪ್ರತಿವರ್ಷ ಇಂಥ ಪ್ರಕರಣಗಳು ಸಾವಿರ ಸಂಖ್ಯೆಯಲ್ಲಿ ನಡೆಯುತ್ತಿದ್ದರೂ, ಈ ಕುರಿತಾಗಿ ಯಾವ ಜಾಗತಿಕ ಮಾಧ್ಯಮಗಳೂ ವರದಿ ಮಾಡುವುದಿಲ್ಲ. ಈ ಅಮಾಯಕ ಹೆಣ್ಣು ಮಕ್ಕಳ ಪರವಾಗಿ ಯಾವ ಸ್ತ್ರೀವಾದಿಗಳೂ ಸೊಲ್ಲೆತ್ತುವುದಿಲ್ಲ.

ಜಗತ್ತಿನ ಇತಿಹಾಸದಲ್ಲೇ ಅತಿಹೆಚ್ಚು ಬಾರಿ ಧಾರ್ಮಿಕ ಕಿರುಕುಳ ಮತ್ತು ನರಮೇಧವನ್ನು ಅನುಭವಿಸಿದ 'ಯಝೀದಿ' ಎಂಬ ಹೆಸರಿನ ಸಣ್ಣ ಧಾರ್ಮಿಕ ಸಮುದಾಯವಿದೆ; ಜಾಗತಿಕ ಮಟ್ಟದಲ್ಲಿ 10 ಲಕ್ಷದಷ್ಟು ಜನಸಂಖ್ಯೆಯಿರುವ ಸಮುದಾಯವಿದು. ನವಿಲಿನ ಮೇಲೆ ಕುಳಿತಿರುವ ದೇವರನ್ನು ಆರಾಧಿಸುವ ಯಝೀದಿ ಸಮುದಾಯದ 5 ಲಕ್ಷ ಮಂದಿ ಇರಾಕಿನ ಉತ್ತರ ಭಾಗವಾದ ಸಿಂಜಾರಾ ಪರ್ವತ ಪ್ರದೇಶದ ಆಸುಪಾಸಿನಲ್ಲಿ ವಾಸಿಸುತ್ತಿದ್ದರು. 2014ರಲ್ಲಿ ಐಸಿಸ್ ಉಗ್ರರು ಇವರ ಮೇಲೆರಗಿ ಗಂಡಸರು, ಮಕ್ಕಳು ಮತ್ತು ವಯಸ್ಸಾದವರು ಸೇರಿದಂತೆ 5,000 ಮಂದಿಯನ್ನು ಕೊಂದರು. 10,000 ಹೆಣ್ಣು ಮಕ್ಕಳನ್ನು ಅಪಹರಿಸಿ ಲೈಂಗಿಕ ಜೀತದಾಳುಗಳನ್ನಾಗಿಸಿ ಅವರನ್ನು ಐಸಿಸ್ ಉಗ್ರರಿಗೆ ಹಂಚಲಾಯಿತು. ಆ ಹೆಣ್ಣುಮಕ್ಕಳು ಉಗ್ರರಿಂದ ಅನುಭವಿಸಿದ ಅತ್ಯಾಚಾರ, ಹಿಂಸೆಗೆ ಲೆಕ್ಕವಿಲ್ಲ. ಉಗ್ರರು ಇಂಥ ಓರ್ವ ಹೆಂಗಸನ್ನು ನಾಲ್ಕು ದಿನ ಅನ್ನ ಹಾಕದೆ ಉಪವಾಸ ಕೆಡವಿ, ಕೊನೆಗೆ ಆಕೆಗೆ ತಿಳಿಯದಂತೆ ಆಕೆಯ ಹಸುಳೆಯನ್ನು ಕೊಂದು, ಅದರ ಮಾಂಸದ ಅಡುಗೆಯನ್ನೇ ಆಕೆಗೆ ತಿನ್ನಿಸಿ ಕ್ರೌರ್ಯದ ಪರಮಾವಧಿಯನ್ನು ಮೆರೆದರು. ಫರ್ಯಾಲ್ ಹೆಸರಿನ ಹೆಣ್ಣುಮಗಳನ್ನು ಲೈಂಗಿಕ ಜೀತದಾಳನ್ನಾಗಿಸಿ ವಿವಿಧ ವ್ಯಕ್ತಿಗಳಿಗೆ 6 ಬಾರಿ ಮಾರಲಾಯಿತು. ನೌರ್ ಎಂಬ ಗರ್ಭಿಣಿಯು ಮಗುವಿಗೆ ಜನ್ಮ ನೀಡಿದ ನಂತರ ಅದಕ್ಕೆ ಹಾಲೂಡಿಸಲೂ ಬಿಡದೆ 7 ಬಾರಿ ಆಕೆಯನ್ನು ಮಾರಾಟ ಮಾಡಿದರು.

2014ರಲ್ಲಿ ನಾಡಿಯಾ ಮುರಾದ್ ಹೆಸರಿನ 21 ವರ್ಷದ ಹೆಣ್ಣುಮಗಳನ್ನು ಅಪಹರಿಸಿದ ಉಗ್ರರು ಆಕೆಯ ಮೇಲೆ ಸರಣಿ ಅತ್ಯಾಚಾರವೆಸಗಿ ಬಲವಂತವಾಗಿ ಇಸ್ಲಾಮಿಗೆ ಮತಾಂತರಿಸಿದರು. ಆಕೆ 2015ರಲ್ಲಿ ಉಗ್ರರ ವಶದಿಂದ ಹೇಗೋ ತಪ್ಪಿಸಿಕೊಂಡು ಜರ್ಮನಿ ಸೇರಿ ಅಲ್ಲಿ ಆಶ್ರಯ ಪಡೆದು, ಐಸಿಸ್ ಉಗ್ರರ ವಶದಲ್ಲಿರುವ ಯಝೀದಿ ಹೆಣ್ಣು ಮಕ್ಕಳ ರಕ್ಷಣೆಯ ಕೆಲಸವನ್ನು ಆರಂಭಿಸಿದಳು. ಇವಳ ಸೇವೆಗೆ 2018ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ದೊರಕಿತು. ಇದುವರೆಗೆ 7,000 ಯಝೀದಿ ಮಹಿಳೆಯರನ್ನು ಉಗ್ರರ ವಶದಿಂದ ಬಿಡಿಸಲಾಗಿದೆಯಾದರೂ, ಮಿಕ್ಕ 3,000 ಮಂದಿ ಅವರ ವಶದಲ್ಲಿ ಲೈಂಗಿಕ ಜೀತದಾಳುಗಳಾಗೇ ಉಳಿದುಕೊಂಡಿದ್ದಾರೆ. ಆದರೆ ಈ ಘೋರಘಟನೆಗಳ ಕುರಿತಾಗಿ ಜಾಗತಿಕ ಮಾಧ್ಯಮಗಳಾಗಲೀ, ಸ್ತ್ರೀವಾದಿಗಳಾಗಲೀ ಬಾಯಿ ತೆರೆಯಲೇ ಇಲ್ಲ.

ಬಾಂಗ್ಲಾದೇಶದಲ್ಲಿ ಈಗ ನಡೆಯುತ್ತಿರುವ ಅಲ್ಪಸಂಖ್ಯಾತ ಹಿಂದೂಗಳ ಹತ್ಯೆ ಮತ್ತು ಹಿಂಸೆಯ ವಿಚಾರದಲ್ಲಿ ಕೂಡ ಬಹುತೇಕ ಜಾಗತಿಕ ಮಾಧ್ಯಮಗಳು ಕಣ್ಣುಮುಚ್ಚಿ ಕೂತಿವೆ. ಪ್ಯಾಲೆಸ್ತೀನಿನ ಮೇಲೆ ಇಸ್ರೇಲ್ ದಾಳಿಮಾಡಿದಾಗ ಅತಿರಂಜಿತವಾಗಿ ವರದಿ ಮಾಡುತ್ತಿದ್ದ ಅಲ್ ಜಝೀರಾ, ಬಿಬಿಸಿ ಮೊದಲಾದ ಜಾಗತಿಕ ಮಾಧ್ಯಮಗಳು, ಬಾಂಗ್ಲಾದ ಹಿಂದೂ ನರಮೇಧದ ಬಗ್ಗೆ ತಲೆಕೆಡಿಸಿಕೊಂಡೇ ಇಲ್ಲ. ಅಲ್ಲಿನ ಮಧ್ಯಂತರ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್, 'ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ಆಕ್ರಮಣ ನಡೆಯುತ್ತಿದೆ' ಎಂದು ಸ್ವತಃ ಒಪ್ಪಿಕೊಂಡಿದ್ದಾರೆ. ಆದರೆ, ಪ್ಯಾಲೆಸ್ತೀನಿನ ರಾಫಾದ ಮೇಲೆ ಇಸ್ರೇಲ್ ದಾಳಿಮಾಡಿದಾಗ 'ಆಲ್ ಐಸ್ ಆನ್ ರಾಫಾ' ಎಂದು ಮರುಗಿದ್ದ, ಇಸ್ರೇಲ್ ವಿರುದ್ಧ ಮೆರವಣಿಗೆ ಮಾಡಿ ಪ್ರತಿಭಟಿಸಿದ್ದ ಭಾರತೀಯ ಕಮ್ಯುನಿಸ್ಟರು, ಕಾಂಗ್ರೆಸ್, ಟಿಎಂಸಿ ಮೊದಲಾದ ಜಾತ್ಯತೀತರು, ಸಾಹಿತಿಗಳು ಮತ್ತು ಬುದ್ಧಿಜೀವಿಗಳು, ಬಾಲಿವುಡ್ ಮಂದಿಗೆ ಬಾಂಗ್ಲಾದಲ್ಲಿ ಹಿಂದೂಗಳಿಗೊದಗಿದ ದುಸ್ಥಿತಿ ಕಾಣಿಸುತ್ತಲೇ ಇಲ್ಲ. ಅಲ್ಲಿನ ಹಿಂದೂ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರವನ್ನು ಭಾರತದ ಸ್ತ್ರೀವಾದಿಗಳು ಪ್ರತಿಭಟಿಸುವುದಿರಲಿ, ಆ ಕುರಿತು ಖಂಡನಾ ಹೇಳಿಕೆಯನ್ನೂ ಕೊಟ್ಟಿಲ್ಲ. ಇದು ನಮ್ಮ ಬುದ್ಧಿಜೀವಿಗಳ, ಕಮ್ಯುನಿಸ್ಟರ ಮತ್ತು ಸ್ತ್ರೀವಾದಿಗಳ ಇಬ್ಬಂದಿತನವನ್ನು ಎತ್ತಿತೋರಿಸುತ್ತದೆ.

(ಲೇಖಕರು ಹವ್ಯಾಸಿ ಬರಹಗಾರರು)

# ಎಲ್ಲೆಲ್ಲೂ ಸಂಗೀತವೇ, ಸೌಂದರ್ಯವೇ

**ಗಂಧರ್ವಲೋಕ**
ಮಾಯಾ ಬಾಲಚಂದ್ರ

ಸಂಗೀತದಲ್ಲಿ ಏನಿಲ್ಲ? ಸ್ವರಗಳು, ಸ್ವರಗಳಿಂದ ಆದ ರಾಗಗಳು, ರಾಗಗಳೊಂದಿಗೆ ಮೇಳೈಸುವ ಭಾವಗಳು, ಭಾವಗಳನ್ನು ಸ್ಫುಟವಾಗಿ ಹೊಮ್ಮಿಸುವ ತಾನಗಳು, ಸ್ಥಾಯಿಗಳು, ಅಕ್ಷರಗಳು, ಅಕ್ಷರಗಳಿಂದಾದ ವಾಕ್ಯಗಳು, ವಾಕ್ ಪ್ರಧಾನವಾದ ಸಾಹಿತ್ಯ, ಗೇಯಗಳು, ಕಾವ್ಯಗಳು, ಗೀತೆಗಳು ಇವೆಲ್ಲವುಗಳಿಗೂ ಸಮಯದ ಚೌಕಟ್ಟನ್ನು ಸೃಷ್ಟಿಸಿ, ಶಿಸ್ತುಬದ್ಧವಾದ ಗಣಿತದ ಕ್ರಮಬದ್ಧತೆಯನ್ನು ಒದಗಿಸುವ ತಾಳಗಳು, ಇವೆಲ್ಲವನ್ನೂ ಸಮ್ಮೇಳೈಸಿ, ರಸಪಾಕವಾಗಿಸಿ ಸಿದ್ಧಪಡಿಸುವ ವಿಜ್ಞಾನ... ಇನ್ನೂ ಎಷ್ಟೋ ಸಂಗತಿಗಳನ್ನು ತನ್ನೊಳಗೆ ಅಡಗಿಸಿಕೊಂಡಿರುವ ಸಂಗೀತ ಹೊರಹೊಮ್ಮಿದಾಗ ಇಡೀ ವಿಶ್ವವೇ ನಾದಾಧೀನವಾಗಿಬಿಡುತ್ತದೆ.

ಮೇಲಿನ ಎಲ್ಲ ವಿಚಾರಗಳು ಸ್ವತಂತ್ರವಾದವುಗಳೇ ಆದರೂ, ಒಂದಕ್ಕೊಂದು ಹೊಂದಿಕೊಂಡು ಸಂಪೂರ್ಣವೆನಿಸಿಕೊಳ್ಳುತ್ತವೆ. ರಾಗ ಮತ್ತು ಭಾವ ಸಿದ್ಧಿಗಳ ಅಂತಃಸಂಬಂಧ ರಸಾನುಭವದ ದೃಷ್ಟಿಯಿಂದ ಪ್ರಯೋಜನಕಾರಿ. ಶ್ರುತಿ ಮತ್ತು ಲಯಗಳ ಸಂಬಂಧ ಸಂಗೀತವನ್ನು ಭದ್ರಗೊಳಿಸುವ ಬುನಾದಿ. ವಿಶ್ವಸಂಗೀತದಲ್ಲಿ ಭಾರತೀಯ ಸಂಗೀತದ ಸ್ಥಾನ ಬಹಳ ವಿಶಿಷ್ಟವಾದುದು. ಬೇರೆಲ್ಲ ದೇಶಗಳ ಸಂಗೀತದಲ್ಲಿ ಸ್ವರಗಳು ಇವೆ. ಆ ಸ್ವರಗಳನ್ನು ಆರೋಹಣ, ಅವರೋಹಣಗಳಿಗೆ ಹೊಂದಿಸುವ ಮೇಳಗಳಿವೆ. ಆದರೆ ರಾಗಗಳಿಲ್ಲ. ಡಾ.ಮ್ಯಾನ್‌ಫರ್ಡ್ ಕ್ಲೈಂಟ್ ಅವರ 'ಜನರೇಟಿವ್ ಪ್ರಿನ್ಸಿಪಲ್ ಆಫ್ ಮ್ಯೂಸಿಕಲ್ ಥಾಟ್' ಅನ್ನುವ ಸಂಶೋಧನಾ ಗ್ರಂಥದಲ್ಲಿ, ಇದಕ್ಕೆ ಪೂರಕವಾದ ಅನೇಕ ವಿಚಾರಗಳು ದೊರೆಯುತ್ತವೆ. ಹಾಗೆಯೇ ಬಿ.ಸಿ. ಚೈತನ್ಯದೇವ ಅವರ 'ಮ್ಯೂಸಿಕ್ ಆಫ್ ಇಂಡಿಯಾ' ಗ್ರಂಥದಲ್ಲಿ, ಒಂದೇ ರೀತಿಯ ಸ್ವರಗಳನ್ನು ಹೊಂದಿರುವಂಥ ರಾಗಗಳ ಬಗ್ಗೆ ಬಹಳಷ್ಟು ಶೋಧನೆ, ವಿಶ್ಲೇಷಣೆಗಳನ್ನು ಮಾಡಿದ್ದಾರೆ.

ಬೇರೆ ಬೇರೆ ಸ್ವರಗಳನ್ನು ವಿಭಿನ್ನವಾಗಿ ಸಂಯೋಜಿಸಿ, ಸಿದ್ಧಪಡಿಸಲಾದ ರಾಗಗಳು, ಮೊದಲಿಗೆ ಶ್ರೋತೃಗಳನ್ನು ತಲುಪುತ್ತವೆ. ನಂತರ ವಾಕ್ಯಗಳ ಮೂಲಕ ಸಾಹಿತ್ಯ ಅರ್ಥವಾಗುವುದು. ವಾಕ್ಯಗಳಲ್ಲಿ ಪದಗಳು, ಪದಗಳಲ್ಲಿ ಅಕ್ಷರಗಳು, ಅಕ್ಷರಗಳಲ್ಲಿ ಸ್ವರಗಳು ಹೀಗೆ ಸಂಗೀತದ ಹರಹು ಆಳಕ್ಕೂ, ಎತ್ತರಕ್ಕೂ ವಿಸ್ತರಿಸುತ್ತಾ, ವಿಶಾಲವಾಗುತ್ತಾ ಸಾಗುತ್ತದೆ. 'ಸ್ವತೋ ರಂಜಯತಿ ಶ್ರೋತೃಚಿತ್ತಂ ಸ ಸ್ವರಮುಚ್ಯತೆ' ಎಂದರೆ ತನ್ನಷ್ಟಕ್ಕೆ ತಾನೇ ಕೇಳುವವರ ಮನಸ್ಸಿಗೆ ರಂಜನೆಯನ್ನುಂಟು ಮಾಡುವ ಧ್ವನಿಗಳನ್ನು ಸ್ವರಗಳೆನ್ನುತ್ತೇವೆ. ಧ್ವನಿಯ ವೈಶಿಷ್ಟ್ಯವೇನೂ ಕಡಿಮೆಯದ್ದಲ್ಲ. ಮಾತಿಗೊಂದು ಧ್ವನಿ, ವ್ಯಕ್ತಿಗೊಂದು ಧ್ವನಿ, ಸಮಾಜಕ್ಕೊಂದು ಧ್ವನಿ.. ಹೀಗೆ ಧ್ವನಿಸುತ್ತಾ, ಮಾರ್ದನಿಸುತ್ತಾ ಹೋಗು ತ್ತದೆ. ಅಂದರೆ ಧ್ವನಿ (ಸ್ವರ) ಕೇವಲ ಗಾಯನಕ್ಕೆ ಸೀಮಿತವಲ್ಲ. ಬ್ರಹ್ಮಾಂಡದೆಲ್ಲೆಡೆ ಎಲ್ಲಕ್ಕೂ ಅದರದ್ದೇ ಆದ ಧ್ವನಿಗಳಿವೆ. ಈ ಧ್ವನಿಗಳನ್ನು ಬಾಧಿಸದೆ, ಅದರದ್ದೇ ಪ್ರಕೃತಿಗೆ ಘಾಸಿಯಾಗದಂತೆ ಕಾಳಜಿ ವಹಿಸುವವರು ಸ್ವರಾರಾಧಕರು. ಸ್ವರವನ್ನು ಶ್ರುತಿಬದ್ಧವಾಗಿ, ಕಂಠದಿಂದ ಲೂ, ವಾದ್ಯದಿಂದಲೂ ನುಡಿಸುವವರು ಸುರೀಲರು.

'ಪ್ರಕೃತಿ ಸ್ವರ' ಎನ್ನುವುದನ್ನು ಸಂಗೀತದ ಪಾರಿಭಾಷಿಕ ಶಬ್ದವಾಗಿ ನೋಡದೆ, ಸಾರ್ವತ್ರಿಕವಾಗಿ ನೋಡುವುದಾದರೆ, ಅದು ಪ್ರಕೃತಿಯದ್ದೇ ಆದ ಸ್ವರ. ಪ್ರಕೃತಿಯ ಮೂಲ ಪ್ರವೃತ್ತಿಯನ್ನು ಧ್ವನಿಸುವಂಥ ಪ್ರಕೃತಿಯ ಧ್ವನಿ. ಇದಕ್ಕೆ ಧಕ್ಕೆಯಾಗದಂತೆ ವರ್ತಿಸುವವರು ಕಾಳಜಿ ವಹಿಸುವವರು ಸುರೀ ಪ್ರವೃತ್ತಿಯವರು. ಮತ್ತೆ ಸಂಗೀತದ ಪರಿಭಾಷೆಗೆ ಮರಳಿದರೆ ಸಂಗೀತದ ಸಪ್ತ ಸ್ವರಗಳಲ್ಲಿ 'ಪ್ರಕೃತಿ ಸ್ವರ' ಎಂದರೆ ಎರಡು ಮಾತ್ರ. ಅವು 'ಸ' ಮತ್ತು 'ಪ' ಮಾತ್ರ. ಪ್ರಕೃತಿ ಸ್ವರಗಳು ನಿರ್ದಿಷ್ಟವಾಗಿರುವ ಸ್ವರಗಳು. ಇವು ಎಲ್ಲ ರಾಗಗಳಲ್ಲಿಯೂ ಒಂದೇ ತೆರನಾಗಿದ್ದು, ಬದಲಾಗದೆ ಉಳಿಯುತ್ತವೆ. ಉಳಿದ ಐದು ಸ್ವರಗಳು ವಿಕೃತಿ ಸ್ವರಗಳೆನಿಸಿಕೊಳ್ಳುತ್ತವೆ. ಇವು ಗಳು ರಾಗದಿಂದ ರಾಗಕ್ಕೆ ಬದಲಾಗುತ್ತಾ ಹೋಗುತ್ತವೆ. ಪ್ರಕೃತಿ ಸ್ವರಗಳು ಮತ್ತು ವಿಕೃತಿ ಸ್ವರಗಳು ವಿರುದ್ಧ ಗುಣ ಸ್ವಭಾವಗಳನ್ನು ಹೊಂದಿದ್ದರೂ ಇವು ಯಾವುವೂ ವಿರುದ್ಧ ಧ್ವನಿಗಳಲ್ಲ. ಸ್ವರಗಳೆಲ್ಲವೂ ಒಂದಕ್ಕೊಂದು ಪರಸ್ಪರ ಪೂರಕವೇ. ಎಲ್ಲವೂ ಒಂದಾಗಿ ರಾಗಕ್ಕೆ ಸಂಪನ್ನತೆಯನ್ನು ಕೊಟ್ಟು ಪೂರ್ಣವಾಗುವಂತೆ ಮಾಡುವ ಗುಣ ಎಲ್ಲ ಸ್ವರಗಳಿಗೂ ಇದೆ. ಹಾಗೆಯೇ ಬ್ರಹ್ಮಾಂಡದಲ್ಲಿನ, ಅಂದರೆ ಪ್ರಕೃತಿ ಯಲ್ಲಿನ ಎಲ್ಲ ಧ್ವನಿಗಳು ಒಂದಕ್ಕೊಂದು ಪೂರಕವೇ ಆಗಿವೆ. ಇಲ್ಲಿ ಯಾವುದೂ ವಿರುದ್ಧವಲ್ಲ. ಎಲ್ಲವೂ ಮೇಳೈಸಿದಾಗಲೇ ಸುಂದರ ಜಗತ್ತು. ಇದು ಪ್ರಕೃತಿ ಸಾರುವ ನೀತಿ. ಸಂಗೀತದ ಜೀವಾಳವೂ ಇದೇ ಆಗಿದೆ. ಸಕಲ ಚರಾಚರಗಳನ್ನು ಒಳಗೊಳ್ಳುವ ಜಗದ ದನಿಯೇ ನಾದ. 'ನಾದಾಧೀನಂ ಜಗತ್ ಸರ್ವಂ..' ನಾದಮಯ ಈ ಲೋಕವೆಲ್ಲ..

ಸಂಗೀತವು ಬೇರೆ ಹಲವು ವಿದ್ಯೆಗಳೊಂದಿಗೆ ಬೆಸೆದುಕೊಂಡು, ತನ್ನನ್ನು ವಿವಿಧ ಮುಖಗಳಿಗೆ ತೆರೆದುಕೊಳ್ಳುವುದರೊಂದಿಗೆ, ಅನ್ಯ ವಿದ್ಯೆಗಳನ್ನೂ ಸಂಪೂರ್ಣಗೊಳಿಸಿದೆ. ನಾಟ್ಯ, ನಾಟಕ, ಯಕ್ಷಗಾನ, ಗಮಕ ಮುಂತಾದವುಗಳನ್ನು ಸಂಗೀತ ಇಲ್ಲದೆ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಪ್ರಾರಂಭದಲ್ಲಿ ಎಲ್ಲವೂ ಸೇರಿ ಒಂದೇ ಆಗಿದ್ದಂಥ ವಿದ್ಯೆ ಕಾಲಕ್ರಮೇಣ ತನ್ನದೇ ಸ್ವತಂತ್ರ ಬೆಳವಣಿಗೆಯಿಂದ ವಿಭಿನ್ನ ಕ್ಷೇತ್ರಗಳಾಗಿ ರೂಪುಗೊಂಡರೂ ಇಂದಿಗೂ ಎಲ್ಲವೂ ಒಂದಕ್ಕೊಂದು ಪೂರಕವಾಗಿಯೇ ಮುಂದುವರಿಯುತ್ತಿವೆ. ಶಾಸ್ತ್ರೀಯ ಸಂಗೀತವನ್ನು ಗಮನಿಸಿದರೆ ಇತ್ತೀಚಿನ ವರ್ಷಗಳಲ್ಲಿ ಅಗಾಧವಾದ ಬದಲಾವಣೆಗಳಾಗಿವೆ. ಶುದ್ಧ ಶಾಸ್ತ್ರೀಯ ಸಂಗೀತ ತನ್ನತನವನ್ನು ಉಳಿಸಿಕೊಂಡಿದ್ದರೂ, ಇದೇ ಶಾಸ್ತ್ರೀಯ ಸಂಗೀತ ಹಲವು ನವ್ಯ ಪ್ರಕಾರಗಳಾದಂಥ ಸುಗಮ ಸಂಗೀತ, ಚಲನಚಿತ್ರ ಸಂಗೀತ ಮುಂತಾದವುಗಳನ್ನು ಕೂಡ ಬೆಳೆಸುತ್ತಿದೆ. ಮನಸ್ಸನ್ನು ವ್ಯಗ್ರಗೊಳಿಸದೆ, ಸ್ನಿಗ್ಧಗೊಳಿಸುವಂಥ ಎಲ್ಲ ಸಂಗೀತವೂ ಪ್ರಸ್ತುತತೆಗೆ ಅವಶ್ಯಕವೇ.

(ಲೇಖಕಿ ಸಂಗೀತ ವಿದುಷಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:235

## ಸಮಾಚಾರ ಸಣ್ಣದಲ್ಲ

### ರಾಜ್ಯಸಭೆ ಉಪ ಚುನಾವಣೆಗೆ ಸಿಂಘ್ವಿ

**ಹೈದರಾಬಾದ್:** ತೆಲಂಗಾಣ ವಿಧಾನಸಭೆಯಿಂದ ರಾಜ್ಯಸಭೆಗೆ ಉಪ ಚುನಾವಣೆ ನಡೆಯಲಿದ್ದು, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್

ಮನು ಸಿಂಘ್ವಿ ಅವರನ್ನು ಅಭ್ಯರ್ಥಿಯಾಗಿಸಲು ಕಾಂಗ್ರೆಸ್ ನಿರ್ಧರಿಸಿದೆ. ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ನಾಯಕ ಕೆ.ಕೇಶವ್ ರಾವ್ ರಾಜ್ಯ ಸಭೆ ಸದಸ್ಯತ್ವಕ್ಕೆ ಜುಲೈನಲ್ಲಿ ರಾಜೀನಾಮೆ ಸಲ್ಲಿಸಿದ್ದರಿಂದ ಉಪ ಚುನಾವಣೆ ಘೋಷಣೆಯಾಗಿದೆ. ಸಿಂಘ್ವಿ ಅವರನ್ನು ಕಣಕ್ಕಿಳಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮ್ಮತಿಸಿದ್ದಾರೆ. ತೆಲಂಗಾಣ ವಿಧಾನಸಭೆಯಲ್ಲಿ ಕಾಂಗ್ರೆಸ್‌ಗೆ 76 ಶಾಸಕರ ಬೆಂಬಲವಿದ್ದು, ಸಿಂಘ್ವಿ ಗೆಲುವು ನಿಶ್ಚಿತ ಎಂದು ಪಕ್ಷದ ಪ್ರ.ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ ಗುರುವಾರ ಹೇಳಿದ್ದಾರೆ. ಚುನಾವಣಾ ಆಯೋಗ 9 ರಾಜ್ಯಗಳ 12 ರಾಜ್ಯಸಭಾ ಸ್ಥಾನಗಳಿಗೆ ಕಳೆದ ವಾರ ಉಪಚುನಾವಣೆ ಘೋಷಿಸಿತ್ತು. ಆ.21 ನಾಮಪತ್ರ ಸಲ್ಲಿಸಲು ಕಡೆ ದಿನ. ಸೆ.3ರಂದು ಚುನಾವಣೆ ನಡೆಯಲಿದೆ.

### ಪ್ರಧಾನಿ ಕಿಡಿಗೇಡಿತನ: ಕಾಂಗ್ರೆಸ್ ಕಿಡಿನುಡಿ

**ದೆಹಲಿ:** ಕೆಂಪುಕೋಟೆ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾಪಿಸಿದ 'ಜಾತ್ಯತೀತ ನಾಗರಿಕ ಸಂಹಿತೆ'ಗೆ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

ಪ್ರಧಾನಿ ಮೋದಿ ಕಿಡಿಗೇಡಿತನ, ದುರುದ್ದೇಶ ಯೋಚನೆಗಳಿಗೆ ಮಿತಿಯೇ ಇಲ್ಲ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ ರಮೇಶ್ ಕಿಡಿಕಾರಿದ್ದಾರೆ. ಪ್ರಧಾನಿ ಮೋದಿ ದುರುದ್ದೇಶಪೂರಿತ ವಿಚಾರ ಕೆಂಪುಕೋಟೆಯಲ್ಲಿ ಅನಾವರಣಗೊಂಡಿದೆ. ಈವರೆಗೆ ಭಾರತದಲ್ಲಿ ಕೋಮು ನಾಗರಿಕ ಸಂಹಿತೆ ಇತ್ತು ಎನ್ನುವ ಹೇಳಿಕೆ ಅಂಬೇಡ್ಕರ್‌ಗೆ ಮಾಡುವ ಅವಮಾನ. 1950ರಲ್ಲಿ ಅಂಬೇಡ್ಕರ್ ಹಿಂದೂ ಖಾಸಗಿ ಕಾನೂನಿನಲ್ಲಿ ಬಹುದೊಡ್ಡ ಸುಧಾರಣೆ ತಂದಿದ್ದರು. ಆದರೆ ಆಗ ಆರ್‌ಎಸ್‌ಎಸ್ ಅದನ್ನು ವಿರೋಧಿಸಿತ್ತು ಎಂದು ಕಾಂಗ್ರೆಸ್ ಮುಖಂಡ ಹೇಳಿದ್ದಾರೆ.

### ಜಮ್ಮು-ಕಾಶ್ಮೀರಕ್ಕೆ ಹೊಸ ಡಿಜಿಪಿ ನೇಮಕ

**ಶ್ರೀನಗರ:** ಸದ್ಯದಲ್ಲೇ ಚುನಾವಣೆ ಎದುರಿಸಲಿರುವ ಜಮ್ಮು-ಕಾಶ್ಮೀರಕ್ಕೆ ಹೊಸ ಪೊಲೀಸ್ ಮಹಾ ನಿರ್ದೇಶಕರ(ಡಿಜಿಪಿ) ನೇಮಕವಾಗಿದೆ. ಅವಿಭಜಿತ

ಆಂಧ್ರಪ್ರದೇಶ ರಾಜ್ಯದಲ್ಲಿ ಮಾವೋವಾದಿಗಳಲ್ಲಿ ನಡುಕ ಹುಟ್ಟಿಸಿದ್ದ ಹಿರಿಯ ಐಪಿಎಸ್ ಅಧಿಕಾರಿ ನಳಿನ್ ಪ್ರಭಾತ್ ಕಾಶ್ಮೀರ ಡಿಜಿಪಿಯಾಗಿ ಗುರುವಾರ ನೇಮಕಗೊಂಡಿದ್ದಾರೆ. ನಳಿನ್ ಪ್ರಭಾತ್ ಆಂಧ್ರ ಪ್ರದೇಶ ಕೇಡರ್‌ನ 1992 ಬ್ಯಾಚ್‌ನ ಐಪಿಎಸ್ ಅಧಿಕಾರಿ. ನಕ್ಸಲರ ನಿರ್ಮೂಲನೆಗೆ ನಳಿನ್ ಅವರು ಅನುಸರಿಸಿದ ವಿಧಾನಗಳನ್ನು ಕೇಂದ್ರ ಸರಕಾರವೂ ಶ್ಲಾಘಿಸಿದೆ. ಉತ್ತಮ ಸೇವೆಗಾಗಿ ನಳಿನ್ ಪ್ರಭಾತ್ ಬಹಳಷ್ಟು ಪೊಲೀಸ್ ಪದಕಗಳನ್ನು ಪಡೆದಿದ್ದಾರೆ. ಸದ್ಯ ರಾಜ್ಯದ ಡಿಜಿಪಿಯಾಗಿರುವ ಆರ್.ಆರ್.ಸ್ವೈನ್ ಅವರು ಸೆ.30ರಂದು ನಿವೃತ್ತರಾಗಲಿದ್ದಾರೆ. ನಳಿನ್ ಪ್ರಭಾತ್ ಅ.1ರಿಂದ ಜಮ್ಮು-ಕಾಶ್ಮೀರದ ಪೊಲೀಸ್ ಮಹಾನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

### ಮತ್ತೆ ಪ್ರತಿಭಟನೆ ಆರಂಭಿಸಿದ 'ಫೋರ್ಡಾ'

**ದೆಹಲಿ:** ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣವನ್ನು ಸಿಬಿಐಗೆ ತನಿಖೆಗೆ ಕೋಲ್ಕತ ಹೈಕೋರ್ಟ್ ವಹಿಸುತ್ತಿದ್ದಂತೆ 'ಫೆಡರೇಷನ್ ಆಫ್ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಶನ್' (ಫೋರ್ಡಾ) ಪ್ರತಿಭಟನೆ ಕೊನೆಗೊಳಿಸಿತ್ತು. ಆದರೆ ಆರ್‌ಜಿ ಕರ್

ಕಾಲೇಜಿನಲ್ಲಿ ಪ್ರತಿಭಟನೆ ನಿರತ ವೈದ್ಯರ ಮೇಲೆ ಬುಧವಾರ ತಡರಾತ್ರಿ 50 ಗೂಂಡಾಗಳ ಗುಂಪು ದಾಳಿ ನಡೆಸಿದ್ದನ್ನು ಖಂಡಿಸಿರುವ ಫೋರ್ಡಾ ಸಂಘಟನೆ ಪ್ರತಿಭಟನೆಯನ್ನು ಮತ್ತೆ ಗುರುವಾರ ಆರಂಭಿಸಿದೆ. ಆರೋಗ್ಯ ಸೇವಕರ ರಕ್ಷಣೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರ ಸೋತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಭಾರತೀಯ ವೈದ್ಯಕೀಯ ಸಂಸ್ಥೆ (ಐಎಮ್‌ಎ) ಕೂಡ ದುಷ್ಕರ್ಮಿಗಳ ದಾಳಿಯನ್ನು ಖಂಡಿಸಿದೆ. 'ಈ ದಾಳಿ ಪ್ರತಿಭಟನಾ ನಿರತ ಕಿರಿಯ ವೈದ್ಯರನ್ನು ಗುರಿಯಾಗಿಸಿ ನಡೆಸಿ ದಂತಿದೆ. ಅಧಿಕಾರಿಗಳ ನಿರ್ಲಕ್ಷ್ಯ ಇಲ್ಲಿ ಗೋಚರಿಸುತ್ತಿದೆ' ಎಂದು ಐಎಂಎ ಆಕ್ರೋಶ ವ್ಯಕ್ತಪಡಿಸಿದೆ.

{ಶಿವರಾಜ್ ಸಿಂಗ್ ಚೌಹಾಣ್} ಕೇಂದ್ರ ಕೃಷಿ ಸಚಿವ

**'ಮನ್ ಕಿ ಬಾತ್' ಮಾದರಿಯಲ್ಲೇ ಮಾಸಿಕ 'ಕಿಸಾನ್ ಕಿ ಬಾತ್' ರೆಡಿಯೋ ಕಾರ್ಯಕ್ರಮ ಶೀಘ್ರ ಆರಂಭವಾಗಲಿದೆ. ಕೃಷಿ ಇಲಾಖೆ ಅಧಿಕಾರಿಗಳು-ವಿಜ್ಞಾನಿಗಳು ಆಧುನಿಕ ಕೃಷಿ ಪದ್ಧತಿ ಬಗ್ಗೆ ಮಾಹಿತಿ ನೀಡಲಿದ್ದಾರೆ. ಕೃಷಿ ವಲಯದ ಪುನಶ್ಚೇತನಕ್ಕೆ ಒತ್ತು ನೀಡುವುದು, ರೈತರು-ಕೃಷಿ ವಿಜ್ಞಾನಿಗಳ ನಡುವೆ ಸಂಪರ್ಕ ಏರ್ಪಡಿಸುವುದೇ ಈ ಕಾರ್ಯಕ್ರಮದ ಉದ್ದೇಶ.**

ಸ್ವಾತಂತ್ರ್ಯೋತ್ಸವ ದಿನ ಕೆಂಪುಕೋಟೆಯಲ್ಲಿ ಗುಡುಗಿದ ಮೋದಿ | ಸ್ತ್ರೀ ಶೋಷಣೆ ನಡೆಸುವವರಲ್ಲಿ ಕಠಿಣ ಶಿಕ್ಷೆಯ ಭಯವಿರಬೇಕು

# ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆಯಾಗಬೇಕು: ಪ್ರಧಾನಿ ಮೋದಿ

**ದೆಹಲಿ:** 78ನೇ ಸ್ವಾತಂತ್ರ್ಯೋತ್ಸವದಂದು ದೆಹಲಿಯ ಕೆಂಪು ಕೋಟೆಯಲ್ಲಿ ನಿಂತು 11ನೇ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ, ಮಹಿಳಾ ದೌರ್ಜನ್ಯ ವಿರುದ್ಧ ಕಿಡಿಕಾರಿದ್ದಾರೆ.

ಸ್ತ್ರೀ ದೌರ್ಜನ್ಯ ಎಸಗುವವರ ಮನದಲ್ಲಿ ಗಲ್ಲು ಶಿಕ್ಷೆಯಂತಹ ಭಯ ಮೂಡಬೇಕು. ತಾಯಂದಿರು, ಸಹೋದರಿಯರ ಮೇಲೆ ಹಿಂಸಾಚಾರ ಎಸಗುವ ಮುನ್ನ ಕಠಿಣ ಶಿಕ್ಷೆಯ ಪರಿಣಾಮ ನೆನಪಾಗಬೇಕು ಎಂದು ಪ್ರಧಾನಿ ಮೋದಿ ಗುಡುಗಿದ್ದಾರೆ.

ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತದಲ್ಲಿನ ರಾಜ್ಯ ಸರಕಾರದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವುದನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಿದ್ದಾರೆ.

'ನಿಮ್ಮ ಸಿಟ್ಟು, ಆಕ್ರೋಶ ನನಗೆ ಅರ್ಥವಾಗುತ್ತದೆ' ಎಂದ ಪ್ರಧಾನಿ ಮೋದಿ, ಮಹಿಳೆಯರ ಮೇಲೆ ದೌರ್ಜನ್ಯ ನಡೆದಾಗ ಅದು ದೊಡ್ಡ ಸುದ್ದಿಯಾಗುತ್ತದೆ. ಅದೇ ರೀತಿಯಲ್ಲಿ ಸ್ತ್ರೀ ಪೀಡಕರಿಗೆ, ಅತ್ಯಾಚಾರಿಗಳಿಗೆ, ಸ್ತ್ರೀ ಹಂತಕರಿಗೆ ಕೊಟ್ಟ ಶಿಕ್ಷೆ ವಿಚಾರವೂ ಅಷ್ಟೇ ದೊಡ್ಡ ಸುದ್ದಿಯಾಗಬೇಕು. ಆಗ ಬೇರೆಯವರು ಅಂಥ ಹೀನಕೃತ್ಯದ ಬಗ್ಗೆ ಯೋಚಿಸಲೂ ಭಯ ಪಡುತ್ತಾರೆ ಎಂದು ಹೇಳಿದರು.

ಮಹಿಳಾ ದೌರ್ಜನ್ಯ ಪ್ರಕರಣಗಳಲ್ಲಿ ತ್ವರಿತ ವಿಚಾರಣೆಯಾಗಬೇಕು, ಕಠಿಣ ಶಿಕ್ಷೆ ನೀಡಬೇಕು. ಅತ್ಯಾಚಾರ ನಡೆಸಿದ ವ್ಯಕ್ತಿಗೆ ಗಲ್ಲು ಶಿಕ್ಷೆಯಾಗುತ್ತದೆ ಎಂಬುದು ಸಮಾಜಕ್ಕೆ ತಿಳಿಯಬೇಕು. ರಾಜ್ಯ ಸರಕಾರಗಳು ಇಂಥ ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಮೋದಿ ಹೇಳಿದರು.

ಕೇಂದ್ರ ಸರಕಾರ ಮಹಿಳಾ ನೇತೃತ್ವದ ಅಭಿವೃದ್ಧಿ ಮಾದರಿ ರಚಿಸುತ್ತಿದೆ. ರಕ್ಷಣಾ ವಲಯ, ಸೇನೆ, ನೌಕಾಪಡೆ, ಬಾಹ್ಯಾಕಾಶ ಸಂಶೋಧನೆ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳಾ ಸಾಮರ್ಥ್ಯ ಕಾಣುತ್ತಿದ್ದೇವೆ. ಮಹಿಳೆಯರು ಸ್ವಾವಲಂಬನೆಯತ್ತ ಹೆಜ್ಜೆ ಹಾಕುತ್ತಿದ್ದಾರೆ. ಆದರೆ ಇನ್ನೊಂದೆಡೆ ಅತ್ಯಾಚಾರ-ಕೊಲೆ, ದೌರ್ಜನ್ಯ ನಡೆಯುತ್ತಿವೆ. ಇದೇ ಕಾರಣಕ್ಕೆ ಸಮಾಜದಲ್ಲಿ ಆಕ್ರೋಶ, ಸಿಟ್ಟು ಮಡುಗಟ್ಟಿದೆ. ಅದರ ಭಾವವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ ಎಂದು ಮೋದಿ ನುಡಿದರು.

### 98 ನಿಮಿಷ ಭಾಷಣ ಮಾಡಿದ ಮೋದಿ

ಆಗಸ್ಟ್ 15 ರಂದು ಪ್ರಧಾನಿ ಮೋದಿ ಕೆಂಪುಕೋ ಟೆಯಲ್ಲಿ 98 ನಿಮಿಷಗಳ ಕಾಲ ಭಾಷಣ ಮಾಡುವ ಮೂಲಕ ತಮ್ಮದೇ ದಾಖಲೆಯನ್ನು ಮುರಿದಿದ್ದಾರೆ. ಈ ಮೂಲಕ ಸ್ವಾತಂತ್ರ್ಯೋತ್ಸವದಲ್ಲಿ ದೀರ್ಘಕಾಲ ಭಾಷಣ ಮಾಡಿದ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 2016ರಲ್ಲಿ 96 ನಿಮಿಷ, 2019ರಲ್ಲಿ 92 ನಿಮಿಷ ದೀರ್ಘ ಭಾಷಣದ ಅವಧಿ ಎಂದು ದಾಖಲೆ ಮಾಡಿತ್ತು . ಆದರೆ ಪ್ರಧಾನಿ ತಮ್ಮದೇ ದಾಖಲೆ ಮುರಿದು 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ 98 ನಿಮಿಷಗಳ ಕಾಲ ಭಾಷಣ ಮಾಡಿದ್ದಾರೆ. ಹಾಗೇ ಪ್ರಧಾನಿ ಮೋದಿ ಸತತ 11ನೇ ಬಾರಿ ಧ್ವಜಾರೋಹಣ ನೆರವೇರಿಸಿದ್ದಾರೆ. ಈ ಮೊದಲು ಇಂದಿರಾ ಗಾಂಧಿ 16 ಬಾರಿ ಹಾಗೂ ಜವಾಹರ ಲಾಲ್ ನೆಹರೂ 17 ಬಾರಿ ಧ್ವಜಾರೋಹಣ ನೆರವೇರಿಸಿದ್ದರು.

### ಭಾರತ ಸದಾ ಬಾಂಗ್ಲಾದೇಶದ ಹಿತೈಷಿ

ಕೆಂಪುಕೋಟೆಯಲ್ಲಿ ಪ್ರಧಾನಿ ಮೋದಿ ಬಾಂಗ್ಲಾದೇಶದ ಅರಾಜಕತೆ ಬಗ್ಗೆ ಮೊದಲ ಬಾರಿಗೆ ಮಾತನಾಡಿದ್ದಾರೆ. ಶೀಘ್ರದಲ್ಲೇ ಭಾಂಗ್ಲಾದೇಶ ಸಹಜ ಸ್ಥಿತಿಗೆ ಬರಲಿದೆ ಎಂದು ಭಾವಿಸುತ್ತೇವೆ ಎಂದ ಪ್ರಧಾನಿ, ನಾವು ಸದಾ ಬಾಂಗ್ಲಾದೇಶದ ಹಿತೈಷಿ ಗಳು ಎಂದರು. ಭಾರತದ 140 ಕೋಟಿ ಜನರು ಬಾಂಗ್ಲಾದ ಅಲ್ಪಸಂಖ್ಯಾತರ ಸುರಕ್ಷತೆ ಬಗ್ಗೆ ಚಿಂತಿತ ರಾಗಿದ್ದಾರೆ. ಭಾರತೀಯರು ಅಲ್ಲಿನ ಹಿಂದೂಗಳು, ಅಲ್ಪಸಂಖ್ಯಾತರ ಸುರಕ್ಷತೆ ಖಾತ್ರಿ ಬಯಸುತ್ತಿದ್ದಾರೆ. ನೆರೆರಾಷ್ಟ್ರ ಉತ್ತಮ ಏಳಿಗೆ ಹೊಂದಬೇಕು ಎಂಬುದನ್ನು ನಾವೂ ಬಯಸುತ್ತೇವೆ ಎಂದ ಪ್ರಧಾನಿ ಮೋದಿ, ಬಾಂಗ್ಲಾದೇಶ ಮುಖ್ಯಸ್ಥರಿಗೆ ಸ್ನೇಹ ಸಂದೇಶ ರವಾನಿಸಿದ್ದಾರೆ. ಶೇಖ್ ಹಸೀನಾ ಭಾರತ ದಲ್ಲಿರುವ ಕಾರಣ ಬಾಂಗ್ಲಾದೇಶದಲ್ಲಿ ಭಾರತದ ವಿರುದ್ಧ ಅಸಮಾಧಾನ ವ್ಯಕ್ತವಾಗಿತ್ತು. ಆದರೆ ಮೋದಿ ನಾವು ಶೇಖ್ ಹಸೀನಾ ಪರ ಮಾತ್ರವಲ್ಲ ಇಡೀ ಬಾಂಗ್ಲಾದೇಶದ ಜತೆಗಿದ್ದೇವೆ ಎಂಬ ಸಂದೇಶ ನೀಡಿದ್ದಾರೆ.

## ರಿಕ್ಲೈಮ್ ದಿ ನೈಟ್ ಪ್ರತಿಭಟನೆ

**ಕೋಲ್ಕತ್ತ:** ಕೋಲ್ಕತ್ತ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆಯನ್ನು ಖಂಡಿಸಿ ಪಶ್ಚಿಮ ಬಂಗಾಳದ ರಾಜಧಾನಿ ನಗರದ ಸಾವಿರಾರು ಮಂದಿ, ವಿಶೇಷವಾಗಿ ಮಹಿಳೆಯರು ಬುಧವಾರ ತಡರಾತ್ರಿ 'ರಿಕ್ಲೈಮ್ ದಿ ನೈಟ್' ಪ್ರತಿಭಟನೆ ನಡೆಸಿದರು. ಕೈಗಳಲ್ಲಿ ಮೊಂಬತ್ತಿ ಉರಿಸುತ್ತಾ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಕ್ಷಣವನ್ನು ನೆನಪಿಸುವಂತೆ ಮಧ್ಯರಾತ್ರಿಯೇ ಬೀದಿಗಿಳಿದು ಪ್ರತಿಭಟನೆ ನಡೆಸಿದರು. 'ಅತ್ಯಾಚಾರ ಕೊನೆಗೊಳಿಸಿ' ಅತ್ಯಾಚಾರಿ-ಹಂತಕನಿಗೆ ಕಠಿಣ ಶಿಕ್ಷೆ ವಿಧಿಸಿ, 'ನಮಗೆ ನ್ಯಾಯ ಬೇಕು' ಎಂಬ ಭಿತ್ತಿಪತ್ರಗಳನ್ನು ಹಿಡಿದು ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ನಗರದ ಬೀದಿಗಳಲ್ಲಿ ಜಾಥಾ ನಡೆಸಿ ಗಮನ ಸೆಳೆದರು.

'ಕಚೇರಿಯಲ್ಲಿ 11 ಗಂಟೆ ಕೆಲಸ ಮಾಡಿ ಬಂದರೂ ಈ ರಾತ್ರಿ ನಾನು ಇಲ್ಲಿ ಸೇರಿದ್ದೇನೆ. ಕಾರಣ ಮಹಿಳೆಯರಿಗೆ ರಕ್ಷಣೆ ಭದ್ರತೆ ಸಿಗಬೇಕು. ರಾತ್ರಿ ಹೊತ್ತಿನಲ್ಲಿ ಮಹಿಳೆ ನಿರ್ಭೀತಿಯಿಂದ ಓಡಾಡಲು ಸಾಧ್ಯವಾದರೆ ಸ್ವಾತಂತ್ರ್ಯ ಸಿಕ್ಕಿದೆ ಎಂದರ್ಥ.

ಮಹಿಳೆಯ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿರುವ ಕೃತ್ಯ ಖಂಡಿಸುತ್ತೇವೆ' ಎಂದು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಉದ್ಯೋಗಿ ಮಹಿಳೆಯೊಬ್ಬರು ಹೇಳಿದರು. ಪ್ರತಿಭಟನಾಕಾರರು ಸ್ವಾತಂತ್ರ್ಯ ದಿನಾಚರಣೆಗೆ ನಾಂದಿ ಹಾಡಲು ರಾಷ್ಟ್ರಗೀತೆ ಹಾಡಿದರು. 1977ರಲ್ಲಿ ಇಂಗ್ಲೆಂಡ್‌ನ ಲೀಡ್ಸ್‌ನಲ್ಲಿ ರಾತ್ರಿ ವೇಳೆ ಮಹಿಳೆಯರಿಗೂ ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುವ ಸ್ವಾತಂತ್ರ್ಯ ಪಡೆಯಲು 'ರಿಕ್ಲೇಮ್ ದಿ ನೈಟ್ ಚಳವಳಿ' ಪ್ರಾರಂಭವಾಗಿತ್ತು.

ಒಡಿಶಾ ಬಿಜೆಪಿ ಸರಕಾರದ ಮಹತ್ವದ ಕ್ರಮ
ಸ್ವಾತಂತ್ರ್ಯೋತ್ಸವದಲ್ಲಿ ಡಿಸಿಎಂ ಘೋಷಣೆ

## ಮುಟ್ಟಿನ ದಿನ ವೇತನ ಸಹಿತ ರಜೆ

**ಭುವನೇಶ್ವರ:** ಒಡಿಶಾದಲ್ಲಿನ ಬಿಜೆಪಿ ಸರಕಾರ ರಾಜ್ಯದಲ್ಲಿನ ಸರಕಾರಿ ಹಾಗೂ ಖಾಸಗಿ ವಲಯದ ಮಹಿಳಾ ಉದ್ಯೋಗಿಗಳಿಗೆ ಒಂದು ದಿನದ ಮು ಟ್ಟಿನ ರಜೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಇದು ವೇತನ ಸಮೇತ ರಜೆಯಾಗಿದೆ. ಮಹಿಳೆಯರಿಗೆ ಅನುಕೂಲವಾಗುವಂತಹ ನಿರ್ಧಾರವನ್ನು ಸ್ವಾತಂತ್ರ್ಯೋತ್ಸವ ದಿನದಂದೇ ಘೋಷಿಸಿರುವುದು ಗಮನಾರ್ಹ.

ಕಟಕ್‌ನಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜವಾಬ್ದಾರಿ ಹೊತ್ತಿರುವ ಉಪ ಮುಖ್ಯಮಂತ್ರಿ ಪ್ರವತಿ ಪರಿದಾ ಅವರು, ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ದಿನಕ್ಕೆ ವೇತನ ಸಹಿತವಾಗಿ ಒಂದು ದಿನ ರಜೆ ತೆಗೆದುಕೊಳ್ಳುವ ಅವಕಾಶವನ್ನು ರಾಜ ಬಿಜೆಪಿ ಸರಕಾರ ಮಾಡಿಕೊಟ್ಟಿದೆ ಎಂದು ಘೋಷಿಸಿದರು. ಉದ್ಯೋಗಿಗಳು ಮುಟ್ಟಿನ ದಿನ ಅಥವಾ ಒಂದು ದಿನ ಮೊದಲ ಅಥವಾ 2ನೇ ದಿನ ಈ ರಜೆ ಪಡೆಯಬಹುದಾಗಿದೆ. ಇದೇನೂ ಕಡ್ಡಾಯವಲ್ಲ. ಮಹಿಳಾ ಉದ್ಯೋಗಿಯ ಆಯ್ಕೆಗೆ ಬಿಟ್ಟಿದ್ದು ಎಂದು ಡಿಸಿಎಂ ಸ್ಪಷ್ಟಪಡಿಸಿದರು. ಮುಟ್ಟಿನ ರಜೆ ವಿಚಾರ ದೀರ್ಘ ಕಾಲದಿಂದ ದೇಶದಲ್ಲಿ ಚರ್ಚೆಯಲ್ಲಿದೆ. ಮುಟ್ಟಿನ ರಜೆಯನ್ನು ಕಾನೂನು ಬದ್ಧಗೊಳಿಸಿದರೆ ಮಹಿಳೆಯರ ಉದ್ಯೋಗ ಅವಕಾಶದ ಮೇಲೆ ನಕಾರಾತ್ಮಕ ಪರಿಣಾಮವಾಗಬಹುದು ಎಂದು ಸುಪ್ರೀಂ ಕೋರ್ಟ್, ಬೇಡಿಕೆಗೆ ಸಮ್ಮತಿಸಲು ಅನುಮಾನಿಸಿತ್ತು.

### ಸಿಕ್ಕಿಂ ಹೈಕೋರ್ಟ್ ಕ್ರಮ

**ಸಿಕ್ಕಿಂ ಹೈಕೋರ್ಟ್ ತನ್ನ ಮಹಿಳಾ ಉದ್ಯೋಗಿಗಳಿಗೆ ಅನುಕೂಲವಾಗುವಂತೆ ತಿಂಗಳಲ್ಲಿ 2-3 ದಿನ ಮುಟ್ಟಿನ ರಜೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಅದಕ್ಕಾಗಿ ಹೊಸ ನಿಯಮವನ್ನೂ ರೂಪಿಸಿದೆ. ಈ ಸಂಬಂಧ ಮೇ 29ರಂದು ಅಧಿಸೂಚನೆಯನ್ನೂ ಹೊರಡಿಸಿದೆ.**

ಕಾಂಗ್ರೆಸ್ ಕಚೇರಿ ಸ್ವಾತಂತ್ರ್ಯೋತ್ಸವ

## ದ್ವೇಷ ರಾಜಕೀಯದಿಂದ ದೇಶ ಇಬ್ಭಾಗ: ಖರ್ಗೆ ಕಿಡಿ

**ದೆಹಲಿ:** 'ದೇಶ ವಿಭಜನೆಯ ಭಯಾನಕ ದಿನ' ಎಂಬುದನ್ನು ದ್ವೇಷ ಹರಡುವ ಉದ್ದೇಶದಿಂದಲೇ ಆಚರಿಸ ಲಾಗಿದೆ. ದ್ವೇಷ ಮಯ

ರಾಜಕೀಯ ದೇಶ ಇಬ್ಭಾಗ ಮಾಡುತ್ತಿದೆ. ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸದವರು ಈಗ ಕಾಂಗ್ರೆಸ್‌ಗೆ ಸಲಹೆ ನೀಡುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿಕಾರಿದರು.

ಸ್ವಾತಂತ್ರ್ಯೋತ್ಸವ ಹಿನ್ನೆಲೆ ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಗುರುವಾರ ಬೆಳಗ್ಗೆ ಧ್ವಜಾರೋಹಣ ನೆರವೇರಿಸಿದ ಖರ್ಗೆ, 'ಹರ್ ಘರ್ ತಿರಂಗ ಅಲ್ಲ, ಹರ್ ಘರ್ ನೌಕರಿ ಇಂದಿನ ಅಗತ್ಯ' ಎಂದು ಪ್ರಧಾನಿ ನರೇಂದ್ರ ಮೋದಿ ಸರಕಾರದ ವಿರುದ್ಧ ಹರಿಹಾಯ್ದರು.

ಮೋದಿ ಅವರ 11ನೇ ವರ್ಷದ ಆಡಳಿತದಲ್ಲಿ ದೇಶದಲ್ಲಿನ ಜನಜೀವನ ಬಹಳ ಹದಗೆಟ್ಟಿದೆ. ಆಡಳಿತಗಾರರು ದುರಹಂಕಾರದಿಂದ ಜನರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ದೇಶದಲ್ಲಿ ಪ್ರತಿ ಮನೆಗೂ ಉದ್ಯೋಗ ಬೇಕು, ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಬೇಕು. ಈ ಬೇಡಿಕೆ ಈಡೇರಿಸುವಲ್ಲಿ ತಡವಾದಷ್ಟೂ ಸಮಸ್ಯೆ ಹೆಚ್ಚುತ್ತವೆ ಎಂದರು. ಮೋದಿ ಸರಕಾರದ ಅವಧಿ ಹೆಚ್ಚುತ್ತಿದ್ದಂತೆಯೇ ಜನರಿಗೆ 'ಅಚ್ಛೇ ದಿನ್'(ಒಳ್ಳೆಯ ದಿನಗಳ) ಬದಲು ಕಷ್ಟದ ದಿನಗಳೇ ಬರುತ್ತಿವೆ. ನಿರುದ್ಯೋಗ, ಹಣದುಬ್ಬರ, ಭ್ರಷ್ಟಾಚಾರ ದಿಂದ ಜನತೆ ತತ್ತರಿಸಿದ್ದಾರೆ. ಆರ್ಥಿಕ ಅಸಮಾನತೆ ಮತ್ತು ನಿರುದ್ಯೋಗ ಸಮಸ್ಯೆ ಯಿಂದ ದೇಶದ ಜನತೆಗೆ ನೈಜ ಸ್ವಾತಂತ್ರ್ಯ ಬೇಕಿದೆ ಎಂದು ಖರ್ಗೆ ಹೇಳಿದರು. ಸಾಂವಿಧಾನಿಕ ಮತ್ತು ಸ್ವಾಯತ್ತ ಸಂಸ್ಥೆಗಳು ಸರಕಾರದ ಕೈಗೊಂಬೆಗಳಾಗಿವೆ. ಕಾಂಗ್ರೆಸ್ ಅಧ್ಯಕ್ಷನಾಗಿ ದೇಶದ ಜನತೆಗೆ ನಿರುದ್ಯೋಗ, ಬಡತನ, ಹಣದುಬ್ಬರ, ಅಸಮಾನತೆ ವಿರುದ್ಧ ಹೋರಾಡುವ ಭರವಸೆ ನೀಡುತ್ತೇವೆ. ಸಂವಿಧಾನ ರಕ್ಷಣೆಗೆ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಿ ಎಂದು ಕರೆ ನೀಡಿದ್ದಾರೆ.

### ಪ್ರತಿಪಕ್ಷಗಳೇ ಆಮ್ಲಜನಕ

**ಪ್ರತಿಪಕ್ಷಗಳೇ ಪ್ರಜಾಪ್ರಭುತ್ವಕ್ಕೆ ಆಮ್ಲಜನಕ. ಯಾವುದೇ ಸರಕಾರವಿದ್ದರೂ ಅದೇನಾದರೂ ಅಸಂವಿಧಾನಿಕ ನಡೆ ಕೈಗೊಂಡರೆ ಅದನ್ನು ತಡೆಯುತ್ತವೆ. ಜತೆಗೆ ಸಾರ್ವಜನಿಕರ ಸಮಸ್ಯೆಗಳಿಗೆ ಧ್ವನಿಯಾಗುತ್ತದೆ ಎಂದು ಖರ್ಗೆ ಹೇಳಿದರು.**

ಕೋಲ್ಕತ್ತ ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣ |
ತನಿಖೆ ತೀವ್ರಗೊಳಿಸಿದ ಸಿಬಿಐ ಅಧಿಕಾರಿಗಳ 3 ತಂಡ

## ಹಿರಿಯ ವೈದ್ಯರಿಬ್ಬರಿಗೆ ಸಿಬಿಐ 4 ಗಂಟೆ ಪ್ರಶ್ನೆ

**ಕೋಲ್ಕತ್ತ:** ಪಶ್ಚಿಮ ಬಂಗಾಳದ ಕೋಲ್ಕತ್ತಾ ನಗರದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ರಾತ್ರಿ

ಪಾಳಿಯಲ್ಲಿದ್ದ ಕಿರಿಯ ವೈದ್ಯೆಯ ಅತ್ಯಾಚಾರ, ನಂತರ ಹತ್ಯೆ ಪ್ರಕರಣದ ತನಿಖೆಯನ್ನು ಕೇಂದ್ರ ತನಿಖಾ ದಳ (ಸಿಬಿಐ), ಗುರುವಾರ ತೀವ್ರಗೊಳಿಸಿದೆ.

ಎದೆಗೂಡು ಚಿಕಿತ್ಸಾ ವಿಭಾಗದ ವಾರ್ಡ್‌ಗಳಿರುವ 3ನೇ ಮಹಡಿಯಲ್ಲಿ ಆ.9ರಂದು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರತರಾಗಿದ್ದ 31 ವರ್ಷದ ಕಿರಿಯ ವೈದ್ಯೆ ಅತ್ಯಾಚಾರ ಬಳಿಕ ಕೊಲೆಗೀಡಾದರು. ಪೂರ್ವ ಕೋಲ್ಕತ್ತದ ಹೊರವಲಯದಲ್ಲಿ ಸಾಲ್ಟ್ ಲೇಕ್ ಪ್ರದೇಶದಲ್ಲಿನ ಸಿಜಿಓ ಕಾಂಪ್ಲೆಕ್ಸ್‌ನಲ್ಲಿ ಮತ್ತಿಬ್ಬರು ವೈದ್ಯರನ್ನೂ ಸಿಬಿಐ ತಂಡ ವಿಚಾರಣೆಗೆ ಒಳಪಡಿಸಿದೆ. ಆರ್‌ಜಿ ಕರ್ ಆಸ್ಪತ್ರೆಯ ಎದೆಗೂಡು ಚಿಕಿತ್ಸಾ ವಿಭಾಗದ ಮುಖ್ಯಸ್ಥರಾಗಿ ಆ.1ರಂದು ಅಧಿಕಾರ ವಹಿಸಿಕೊಂಡ ಡಾ.ಅರುಣವ ದತ್ತ ಚೌಧರಿ ಹಾಗೂ ಆಸ್ಪತ್ರೆಯ ಹಿಂದಿನ ಅಧೀಕ್ಷಕ, ಅಪರಾಧ ಕೃತ್ಯ ನಡೆದ ತಕ್ಷಣವೇ ವರ್ಗಾವಣೆಗೊಂಡ ಡಾ. ಸಂಜಯ್ ವಶಿಷ್ಟ ಎಂಬವರನ್ನೂ ಸಿಬಿಐ ಅಧಿಕಾರಿಗಳು ಗುರುವಾರ 4 ಗಂಟೆಗಳ ಕಾಲ ತೀವ್ರ ವಿಚಾರಣೆಗೆ ಒಳಪಡಿಸಿದರು.

ಅದೇ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಮೂವರು ವಿಧಿವಿಜ್ಞಾನ ತಜ್ಞ ವೈದ್ಯರಾದ ಡಾ. ರಿನಾ ದಾಸ್, ಡಾ.ಮೊಲಿ ಬ್ಯಾನರ್ಜಿ, ಡಾ.ಅಪೂರ್ವ ಬಿಸ್ವಾಸ್ ಅವರನ್ನು ಸಿಬಿಐ ಅಧಿಕಾರಿಗಳು ಗುರುವಾರ ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು.

**ಪೊಲೀಸ್ ವೈಫಲ್ಯ:** ಅತ್ಯಾಚಾರ-ಕೊಲೆ ಕೃತ್ಯ ನಡೆದಿದ್ದರೂ 'ಅಸಹಜ ಸಾವು' ಎಂದೇ ಸಾಮಾನ್ಯ ಅಪರಾಧ ಪ್ರಕರಣದಂತೆ ದಾಖಲಿಸಿಕೊಂಡಿದ್ದ ತಲಾ ಪೊಲೀಸ್ ಠಾಣೆಯ ಮುಖ್ಯಾಧಿಕಾರಿ ಪೊಲೀಸ್ ಇನ್‌ಸ್ಪೆಕ್ಟರ್ ಅಭಿಜಿತ್ ಮಂಡಲ್‌ಗೆ ಸಮನ್ಸ್ ನೀಡಿರುವ ಸಿಬಿಐ ಅಧಿಕಾರಿಗಳು, ಒರಿಜಿನಲ್ ಕೇಸ್ ಡೈರಿ ಜತೆಗೆ ವಿಚಾರಣೆ ಹಾಜರಾಗುವಂತೆ ಹಾಗೂ ಮಾಧ್ಯಮದೆದುರು ಯಾವುದೇ ಹೇಳಿಕೆ ನೀಡದಂತೆ ಸೂಚಿಸಿದ್ದಾರೆ.

ಇದಕ್ಕೂ ಮುನ್ನ, ಗಂಭೀರ ಅಷ್ಟೇ ಸೂಕ್ಷ್ಮವಾಗಿರುವ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆಯನ್ನು ಕೋಲ್ಕತ್ತ ಹೈಕೋರ್ಟ್ ನಿರ್ದೇಶನದ ಮೇರೆಗೆ ಬುಧವಾರವಷ್ಟೇ ಕೈಗೆತ್ತಿಕೊಂಡ ಸಿಬಿಐ, ಪ್ರಮುಖ ಆರೋಪಿ ಸಂಜಯ್ ರೇ(31)ಯನ್ನು ಕೋಲ್ಕತ್ತ ಪೊಲೀಸರ ವಶದಿಂದ ತನ್ನ ಸುಪರ್ದಿಗೆ ತೆಗೆದುಕೊಂಡಿತು. ಪೊಲೀಸರು ಸಂಗ್ರಹಿಸಿದ್ದ ಸಾಕ್ಷ್ಯಾಧಾರಗಳನ್ನೂ ವಶಕ್ಕೆ ಪಡೆದುಕೊಂಡಿದೆ.

### 10 ಬಗೆಯ ಗಾಯ

**ಶವ ಪತ್ತೆಯಾದ ಆಸ್ಪತ್ರೆಯಲ್ಲಿಯೇ ಮರಣೋತ್ತರ ಪರೀಕ್ಷೆ, ಪ್ರಾಥಮಿಕ ಪ್ರಯೋಗಾಲಯ ಪರಿಶೀಲನೆ ನಡೆಸಲಾಗಿದೆ. ಆ.9ರ ನಸುಕಿನ 3ರಿಂದ 5 ಗಂಟೆ ನಡುವೆ ಅತ್ಯಾಚಾರ-ಕೊಲೆ ಕೃತ್ಯ ನಡೆದಿದೆ. ವೈದ್ಯೆ ದೇಹದ ಮೇಲೆ 10 ಬಗೆಯ ಗಾಯದ ಗುರುತುಗಳಾಗಿವೆ ಎಂಬುದು ಮರಣೋತ್ತರ ಪರೀಕ್ಷೆಯಿಂದ ತಿಳಿದುಬಂದಿದೆ.**

ಪ್ರತಿಪಕ್ಷ ನಾಯಕನಿಗೆ ಅಪಮಾನ; ಕಾಂಗ್ರೆಸ್ ಮುಖಂಡರ ಕಿಡಿ

## ಕೆಂಪುಕೋಟೆ: ರಾಹುಲ್‌ಗೆ ಹಿಂದಿನ ಸಾಲು

**ದೆಹಲಿ:** ದೆಹಲಿಯ ಕೆಂಪುಕೋಟೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವದಂದು ಪ್ರಧಾನಿ ಮೋದಿ ಧ್ವಜಾರೋಹಣ ನೆರವೇರಿಸಿ ಭಾಷಣ ಮಾಡಿದ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿದ್ದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಹಿಂದಿನ ಸಾಲಿನ ಆಸನ ನೀಡಿರುವುದು ಶಿಷ್ಟಾಚಾರದ ಉಲ್ಲಂಘನೆ. ಪ್ರತಿಪಕ್ಷ ನಾಯಕರನ್ನು ಅಪಮಾನಿಸಲಾಗಿದೆ ಎಂದು ಕಾಂಗ್ರೆಸ್ ಕಿಡಿಕಾರಿದೆ.

ರಾಹುಲ್ ಹಿಂದಿನ ಸಾಲಿನಲ್ಲಿ ಆಸೀನರಾಗಿರುವ ಫೋಟೊವನ್ನು ಕಾಂಗ್ರೆಸ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ. ಈ ವಿಚಾರ ತೀವ್ರ ಚರ್ಚೆಗೆ ಗುರಿಯಾಗಿದೆ.

ದಶಕದ ಬಳಿಕ ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕರೊಬ್ಬರು ಕೆಂಪುಕೋಟೆಯಲ್ಲಿನ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಸಂಪುಟ ಸಚಿವ ಸ್ಥಾನಕ್ಕೆ ಸಮಾನವಾಗಿರುವ ವಿಪಕ್ಷ ನಾಯಕನಿಗೆ ಮೊದಲ ಸಾಲಿನಲ್ಲಿ ಆಸನ ನೀಡದೇ ಹಿಂದಿನ ಸಾಲಿಗೆ ದೂಡಿರುವುದು ಸರಿಯಲ್ಲ ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

ಮೊದಲ ಸಾಲಿನಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಕೇಂದ್ರ ಸಚಿವರಾದ ಅಮಿತ್ ಶಾ, ನಿರ್ಮಲಾ ಸೀತಾರಾಮನ್, ಶಿವರಾಜ್ ಸಿಂಗ್ ಚೌಹಾಣ್, ಎಸ್.ಜೈಶಂಕರ್ ಮತ್ತಿತರರು ಆಸೀನರಾಗಿದ್ದರೆ, ಒಲಿಂಪಿಕ್ಸ್

ಪದಕ ವಿಜೇತರ ನಂತರದ ಸಾಲಿನಲ್ಲಿ ರಾಹುಲ್ ಗಾಂಧಿ ಕುಳಿತು ಕಾರ್ಯಕ್ರಮ ವೀಕ್ಷಿಸಿದ್ದಾರೆ. ಒಲಿಂಪಿಕ್ ಪದಕ ವಿಜೇತರಾದ ಮನು ಭಾಕರ್, ಸರಬ್‌ಜೋತ್ ಸಿಂಗ್, ಹಾಕಿ ತಂಡದ ಕ್ರೀಡಾಪಟುಗಳು ಕುಳಿತಿದ್ದಕ್ಕಿಂತ ಹಿಂದಿನ ಸಾಲಿನಲ್ಲಿ ರಾಹುಲ್‌ಗೆ ಆಸನ ಮೀಸಲಿಡಲಾಗಿತ್ತು. ಆಸನ ವ್ಯವಸ್ಥೆ ರಕ್ಷಣಾ ಸಚಿವಾಲಯದ ಹೊಣೆ. ಆದರೆ, ಆ ಹೊಣೆಯನ್ನು ರಾಜನಾಥ್ ಸಿಂಗ್ ಅವರ ಸಚಿವಾಲಯ ಸರಿಯಾಗಿ ನಿಭಾಯಿಸಿಲ್ಲ ಎಂದು ಕಾಂಗ್ರೆಸ್ ಕಿಡಿಕಾರಿದೆ.

ಜಾಲತಾಣದಲ್ಲಿ ನೆಟ್ಟಿಗರು, ಪ್ರತಿಪಕ್ಷ ನಾಯಕನ ಹುದ್ದೆಗಾದರೂ ಗೌರವ ನೀಡಿ ಮುಂದಿನ ಸಾಲಿನ ಆಸನ ನೀಡಬೇಕಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

### ಸ್ವಾತಂತ್ರ್ಯ ರಕ್ಷಾಕವಚ

**ಇನ್ನೊಂದೆಡೆ, ದೇಶದ ಜನತೆಗೆ 78ನೇ ಸ್ವಾತಂತ್ರ್ಯೋತ್ಸವದ ಶುಭಾಶಯ ಕೋರಿರುವ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, 'ಸ್ವಾತಂತ್ರ್ಯ ಎನ್ನುವುದು ಬರೀ ಪದವಲ್ಲ, ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವ ಅತಿ ದೊಡ್ಡ ರಕ್ಷಣಾ ಕವಚ. ಇದು ಅಭಿವ್ಯಕ್ತಿಯ ಶಕ್ತಿ. ಸತ್ಯ ನುಡಿಯುವ ಸಾಮರ್ಥ್ಯ ಮತ್ತು ಕನಸುಗಳನ್ನು ಈಡೇರಿಸುವ ಭರವಸೆ' ಎಂದು ಹೇಳಿದ್ದಾರೆ.**

## ಅಸ್ಸಾಂ 19 ಬಾಂಬ್: 'ಉಲ್ಫಾ-ಐ' ಬೆದರಿಕೆ

**ಗುವಾಹಟಿ:** ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿರುವಾಗಲೇ ಅಸ್ಸಾಂನ ಪ್ರತ್ಯೇಕತಾವಾದಿ ಉಗ್ರ ಸಂಘಟನೆ 'ಯುನೈಟೆಡ್ ಲಿಬರೇಶನ್ ಫ್ರಂಟ್ ಇಂಡಿಪೆಂಡೆಂಟ್' (ಉಲ್ಫಾ-ಐ) ರಾಜ್ಯದ

19 ಕಡೆ ಬಾಂಬ್ ಅಳವಡಿಸಿರುವುದಾಗಿ ಬೆದರಿಕೆ ಹಾಕಿದ್ದು, ರಾಜ್ಯಾದ್ಯಂತ ಭದ್ರತೆ ಹೆಚ್ಚಿಸಲಾಗಿದೆ. ಪೊಲೀಸ್, ಅರೆಸೇನಾಪಡೆ ಮತ್ತು ಸಿಆರ್‌ಪಿಎಫ್ ಸೇರಿಕೊಂಡು ಬಾಂಬ್ ಶೋಧ ಕಾರ್ಯ ಆರಂಭಿಸಿವೆ.

ಪ್ರತ್ಯೇಕತಾವಾದಿ ಉಗ್ರ ಸಂಘಟನೆ ಸ್ವಾತಂತ್ರ್ಯ ದಿನದಂದೇ ಪ್ರತಿಭಟನೆ ವ್ಯಕ್ತಪಡಿಸಲು ಗುವಾಹಟಿಯ 8 ಕಡೆ ಸೇರಿದಂತೆ ರಾಜ್ಯದ 19 ಕಡೆ ಬಾಂಬ್ ಇಟ್ಟಿರುವುದಾಗಿ ಎಚ್ಚರಿಕೆ ಸಂದೇಶ ನೀಡಿದೆ. ಆದರೆ, ತಾಂತ್ರಿಕ ದೋಷದಿಂದ ಬಾಂಬ್‌ಗಳು ಸ್ಫೋಟಗೊಂಡಿಲ್ಲ. ಬಾಂಬ್ ಇಟ್ಟಿರುವ ಸ್ಥಳಗಳಲ್ಲಿ ಕೆಲವೆಡೆಯ ಚಿತ್ರ ಹಂಚಿಕೊಳ್ಳಲಾಗಿದೆ. ಗುರುವಾರ ಬೆಳಗ್ಗೆ 11.30ರಲ್ಲಿ ಉಲ್ಫಾ-ಐ ಪ್ರಕಟಣೆ ನೀಡಿದೆ. ಹಿಂಸಾತ್ಮಕ ಕೃತ್ಯ ನಡೆಸದಂತೆ ಉಗ್ರ ಸಂಘಟನೆಗೆ ಕರೆ ನೀಡಿರುವ ಡಿಜಿಪಿ ಜಿ.ಪಿ.ಸಿಂಗ್, ರಾಜ್ಯದ ಆಯಕಟ್ಟಿನ ಸ್ಥಳಗಳಲ್ಲಿ ಭದ್ರತೆ ಹೆಚ್ಚಿಸಿದ್ದಾರೆ. ಉಲ್ಫಾ-ಐ ಸಶಸ್ತ್ರ ಹೋರಾಟ ಮೂಲಕ ಅಸ್ಸಾಮಿ ಜನರಿಗೆ 'ಸ್ವತಂತ್ರ, ಸಾರ್ವಭೌಮ ಅಸ್ಸಾಂ' ರಾಷ್ಟ್ರ ಸ್ಥಾಪನೆಯ ಭರವಸೆ ನೀಡಿದೆ.

50 ಗೂಂಡಾಗಳಿಂದ ಪ್ರತಿಭಟನಾ ಆರ್‌ಜಿಕರ್ ವೈದ್ಯರ ಮೇಲೆ ದಾಳಿ

## ಮಧ್ಯರಾತ್ರಿ ಗಲಭೆಗೆ ಸರಕಾರವೇ ಕಾರಣ

**ಕೋಲ್ಕತ್ತ:** ನಗರದಲ್ಲಿನ ಆರ್‌ಜಿ ಕರ್ ವೈದ್ಯಕೀಯ ಕಾಲೇಜು- ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ ಪ್ರತಿಭಟನಾಕಾರರ ಸೋಗಿನಲ್ಲಿ ಬಂದ ದುಷ್ಕರ್ಮಿಗಳ ಗುಂಪು ಕಿರಿಯ ವೈದ್ಯೆಯ ಮೃತದೇಹ ಪತ್ತೆಯಾದ ಕಟ್ಟಡಕ್ಕೆ ನುಗ್ಗಿ ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾರೆ. ಆದರೆ, ಘಟನೆ ನಡೆದ ಸ್ಥಳ 3ನೇ ಮಹಡಿಯಲ್ಲಿ ಇದ್ದುದರಿಂದ ಅವರ ಪ್ರಯತ್ನ ವಿಫಲವಾಗಿದೆ. ಆದರೆ, ದುಷ್ಕರ್ಮಿಗಳು ಆಸ್ಪತ್ರೆಯ ತುರ್ತು ನಿಗಾ ಘಟಕವನ್ನು ಛಿದ್ರಗೊಳಿಸಿದ್ದಾರೆ.

ಪ್ರತಿಭಟನಾ ನಿರತ ವೈದ್ಯರ ಮೇಲೆಯೂ ಹಲ್ಲೆ ನಡೆಸಿದ್ದಾರೆ. ವೈದ್ಯರು ಜೀವ ರಕ್ಷಣೆಗಾಗಿ ಓಡಿಹೋಗಿ ಅಡಗಿಕೊಂಡಿದ್ದಾರೆ. ಗುಂಪು ದಾಂಧಲೆ ನಡೆಸುತ್ತಿದ್ದರೂ ಪೊಲೀಸರು ಮೌನವಾಗಿದ್ದರು. ದಾಳಿ ತಡೆಯಲು ಯತ್ನಿಸಲಿಲ್ಲ ಎಂದು ವೈದ್ಯರು ಆರೋಪಿಸಿದ್ದಾರೆ.

ಕೋಲ್ಕತ್ತದಲ್ಲಿ ಬುಧವಾರ ರಾತ್ರಿಯಿಂದ ಗುರುವಾರ ತಡರಾತ್ರಿವರೆಗೆ

ಹಲವಾರು ಸಂಘಟನೆಗಳು ಸೇರಿ ಮಹಿಳೆಯರಿಗೆ ಸ್ವಾತಂತ್ರ್ಯ ಎಂಬ ಘೋಷದಡಿ ಪ್ರತಿಭಟನೆ ಹಮ್ಮಿಕೊಂಡಿದ್ದವು. ಈ ಪ್ರತಿಭಟನೆಯ ಅವಕಾಶ ಪಡೆದ 50ಕ್ಕೂ ಹೆಚ್ಚಿದ್ದ ದುಷ್ಕರ್ಮಿಗಳ ತಂಡ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗವನ್ನು ಧ್ವಂಸಗೊಳಿಸಿದೆ. ಇದು ಅತ್ಯಾಚಾರ-ಕೊಲೆ ಪ್ರಕರಣದ ಸಾಕ್ಷ್ಯ ನಾಶದ ಕೃತ್ಯವಾಗಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಆದರೆ, ದಾಂಧಲೆ ನಡೆದಿದ್ದು ನಿಜ. ಆದರೆ ವೈದ್ಯೆಯ ಮೃತದೇಹ ಪತ್ತೆಯಾದ ಸ್ಥಳ 3ನೇ ಮಹಡಿಯಲ್ಲಿದೆ. ಅದನ್ನು ರಕ್ಷಿಸಲಾಗಿದೆ. ಗಲಭೆಕೋರರು ಸ್ಥಳಕ್ಕೆ ಹೋಗುವುದನ್ನು ತಡೆಯಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

### ರಾಜ್ಯಪಾಲರ ಆಕ್ರೋಶ

**ದಾಂಧಲೆ ನಡೆದ ಆರ್‌ಜಿ ಕರ್ ಆಸ್ಪತ್ರೆಗೆ ಭೇಟಿ ನೀಡಿದ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ ವಿ ಆನಂದ ಬೋಸ್ ಪ್ರತಿಭಟನಾ ನಿರತ ವೈದ್ಯರನ್ನು ಭೇಟಿಯಾಗಿ ಧೈರ್ಯ ಹೇಳಿದ್ದಾರೆ. ವೈದ್ಯೆ ಮೇಲೆ ನಡೆದ ಕೃತ್ಯ ಭಯಾನಕ, ಇಲ್ಲಿ ಕಾನೂನು ಪಾಲಕರೇ ಪಿತೂರಿ ನಡೆಸಿದ್ದಾರೆ ಎನಿಸುತ್ತಿದೆ. ಇಂತಹ ಭಯದ ಸ್ಥಿತಿ ಸೃಷ್ಟಿಯಾಗಲು ಸರಕಾರವೇ ಕಾರಣ. ಇದು ರಕ್ತಪಾತ ಕೃತ್ಯ ಎಂದು ರಾಜ್ಯಪಾಲರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

## ರಾಹುಲ್ ನವೀನ್ ಇ.ಡಿ ನಿರ್ದೇಶಕ

**ದೆಹಲಿ:** ಜಾರಿ ನಿರ್ದೇಶನಾಲಯದ(ಇ.ಡಿ) ಉಸ್ತುವಾರಿ ನಿರ್ದೇಶಕರಾಗಿದ್ದ ಹಿರಿಯ ಭಾರತೀಯ ಕಂದಾಯ ಸೇವೆ (ಐಆರ್‌ಎಸ್) ಅಧಿಕಾರಿ ರಾಹುಲ್ ನವೀನ್ ಅವರನ್ನು

ಪೂರ್ಣಾವಧಿ ನಿರ್ದೇಶಕರನ್ನಾಗಿ ಗುರುವಾರ ನೇಮಕ ಮಾಡಲಾಗಿದೆ.

1993ರ ಬ್ಯಾಚ್‌ನ ಐಆರ್‌ಎಸ್ ಅಧಿಕಾರಿಯಾದ ರಾಹುಲ್ ನವೀನ್ ಅವರಿಗೆ 2 ವರ್ಷಗಳ ಅವಧಿಗೆ ಇ.ಡಿ ಮುನ್ನಡೆಸುವ ಪೂರ್ಣ ಜವಾಬ್ದಾರಿ ನೀಡಲಾಗಿದೆ. ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರವಧಿ ಕೊನೆಗೊಂಡ ಬಳಿಕ ರಾಹುಲ್ ನವೀನ್ ಉಸ್ತುವಾರಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದರು. ನವೀನ್ ಈ ಮೊದಲು ಇ.ಡಿ ಪ್ರಧಾನ ಕಚೇರಿ ಮುಖ್ಯ ವಿಜಿಲೆನ್ಸ್ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ನವೀನ್ ಅವರ ಅವಧಿಯಲ್ಲೇ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್, ಜಾರ್ಖಂಡ್ ಸಿಎಂ ಹೇಮಂತ್ ಸೊರೇನ್‌ರಂತಹ ಪ್ರಮುಖ ರಾಜಕೀಯ ನಾಯಕರ ಬಂಧನವಾಗಿದೆ. ಜತೆಗೆ ಸಂದೇಶ್ ಖಾಲಿಯಲ್ಲಿ ನಡೆದ ದಾಳಿ ಸಂದರ್ಭವನ್ನೂ ಯಶಸ್ವಿಯಾಗಿ ನಿಭಾಯಿಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### ಗೀತಾ ಯಲ್ಲಪ್ಪಗೆ ಚಿನ್ನದ ಪದಕ

**ಮಾನ್ವಿ:** ಜಿಲ್ಲೆಯ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ 42ನೇ ಘಟಿಕೋತ್ಸವ ಸಮಾರಂಭದಲ್ಲಿ ಪಟ್ಟಣದ ಕಲ್ಮಠ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿನ ವಾಣಿಜ್ಯ ಕಾನೂನು ಎಂಬ ವಿಷಯದಲ್ಲಿ 100 ಅಂಕಗಳಿಗೆ 98 ಅಂಕಗಳನ್ನು ಪಡೆದ ವಿದ್ಯಾರ್ಥಿನಿ ಗೀತಾ ಯಲ್ಲಪ್ಪ ರವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಚಿನ್ನದ ಪದಕವನ್ನು ನೀಡಿ ಗೌರವಿಸಿದರು. ವಿದ್ಯಾರ್ಥಿನಿಯ ಸಾಧನೆಗೆ ಶಿಕ್ಷಣ ಸಂಸ್ಥೆಯಿಂದ ಅಭಿನಂದನೆ ಸಲ್ಲಿಸಿದರು.

### ಸ್ಕೌಟ್ ಗೈಡ್ಸ್ ಘಟಕಕ್ಕೆ ಚಾಲನೆ

**ಮಸ್ಕಿ:** 78ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ಯವಾಗಿ ಪಟ್ಟಣದ ಸರಸ್ವತಿ ವಿದ್ಯಾನಿಕೇತನ ಹಿರಿಯ ಪ್ರಾಥಾಮಿಕ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ಸ್ ಘಟಕವನ್ನು ಗುರುವಾರ ಸ್ಥಾಪನೆ ಮಾಡಲಾಯಿತು. ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ ಹೆಸರಿನಲ್ಲಿ ಸ್ಕೌಟ್ಸ್ ಹಾಗೂ ಗಗನಯಾತ್ರಿ ಕಲ್ಪನಾ ಚಾವ್ಲಾ ಅವರ ಹೆಸರಿನಲ್ಲಿ ಗೈಡ್ಸ್ ಘಟಕವನ್ನು ಮುಖಂಡ ಬಸನಗೌಡ ಪೊಲೀಸ್ ಪಾಟೀಲ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಸಿದ್ದರಾಮ ಗಡ್ಡಿಮಠ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### 78ನೇ ಸ್ವಾತಂತ್ರ್ಯ ದಿನ ಆಚರಣೆ

**ಸಿರವಾರ:** ತಾಲೂಕಿನ ಸ. ಕಿ. ಪ್ರಾ. ಶಾಲೆ, ಲಕ್ಷ್ಮೀ ನಗರ ಕ್ಯಾಂಪ್ ಶಾಲೆಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು, ಈ ಒಂದು ಸಂದರ್ಭದಲ್ಲಿ 5ನೇ ತರಗತಿ ಉತ್ತೀರ್ಣರಾದಂತಹ ವಿದ್ಯಾರ್ಥಿಗಳು, ಮಹಾನ್ ನಾಯಕರ ಭಾವಚಿತ್ರ, ಎಲೆಕ್ಟ್ರಿಕ್ ಬೆಲ್ ಮತ್ತು ಬ್ಲೂಟೂತ್ ಸ್ಪೀಕರ್ ದೇಣಿಗೆಯ ರೂಪದಲ್ಲಿ ನೀಡಿದರು. ಈ ಒಂದು ಸಂದರ್ಭದಲ್ಲಿ ಎಸ್ ಡಿ ಎಮ್ ಸಿ ಅಧ್ಯಕ್ಷರು, ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು, ಊರಿನ ಮುಖಂಡರು, ಮುಖ್ಯ ಗುರುಗಳು, ಸಹ ಶಿಕ್ಷಕರು ಮತ್ತು ಅಡುಗೆ ಸಿಬ್ಬಂದಿ ಹಾಜರಿದ್ದರು.

### ಮಸ್ಕಿ ತಾಪಂನಲ್ಲಿ ಧ್ವಜಾರೋಹಣ

**ಮಸ್ಕಿ:** ಸ್ವಾತಂತ್ರ್ಯೋತ್ಸವ ದಿನಾಚರಣೆ ನಿಮಿತ್ತ ಮಸ್ಕಿ ತಾಲೂಕು ಪಂಚಾಯಿತಿಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಉಮೇಶ್ ಅವರು ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಮುನ್ನ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಲಾಯಿತು. ಶಾಲೆ ವಿದ್ಯಾರ್ಥಿಗಳು ರಾಷ್ಟ್ರಗೀತೆ ಪ್ರಸ್ತುತಪಡಿಸಿದರು. ಈ ವೇಳೆ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಶಿವಾನಂದರಡ್ಡಿ, (ಪಂಚಾಯತ್ ರಾಜ್) ಸೋಮನಗೌಡ, ತಾಪಂ ವ್ಯವಸ್ಥಾಪಕ ಗಂಗಾಧರ ಮೂರ್ತಿ, ಸಿಬ್ಬಂದಿ ಚಂದ್ರಶೇಖರ್, ಬಸವರಾಜ್, ನವೀನ್, ಗಿರಿಯಪ್ಪ, ವಿನೋದ್, ಮಹ್ಮದ್ ಯಾಸೀನ್, ಅಶೋಕ್, ಮೌನೇಶ್, ಪ್ರಕಾಶ್, ಅರ್ಜುನ್, ಲಕ್ಷ್ಮಣ ಇದ್ದರು.

### ದೇಶದ ರಕ್ಷಣೆಗೆ ಬದ್ಧರಾಗಿರಿ: ಕೇಶವರೆಡ್ಡಿ

**ರಾಯಚೂರು:** ಪೂರ್ಣಿಮಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಸ್ವಾತಂತ್ರ್ಯ ದಿನಾಚರಣೆ ಆಚರಿಸಿದರು. ನಂತರ ಧ್ವಜಾರೋಹಣಾ ಮಾಡಿ ಮಾತಾನಾಡಿದ ಸಂಸ್ಥೆಯ ಅಧ್ಯಕ್ಷ ಎಸ್.ಎಲ್. ಕೇಶವರೆಡ್ಡಿ ನಮಗೆ ಸ್ವಾತಂತ್ರ್ಯ ತಂದು ಕೊಟ್ಟ ಹೋರಾಟಗಾರರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಪ್ರತಿಯೊಬ್ಬರು ಜಲ, ಭಾಷೆ, ಸಂಸ್ಕೃತಿ ದೇಶದ ರಕ್ಷಣೆಗೆ ಬದ್ಧರಾಗಿರಬೇಕು. ಹಿರಿಯರು ತಂದು ಕೊಟ್ಟ ಸ್ವಾತಂತ್ರ್ಯವನ್ನು ಉಳಿಸಿ ಕೊಂಡು ಹೋಗುವುದು ನಮ್ಮ ಜವಾಬ್ದಾರಿ. ಶಾಂತಿ, ಸಮೃದ್ಧಿ, ಸೌಹಾರ್ದತೆ ಇರುವ ಈ ದೇಶದಲ್ಲಿ ಸಾಮಾ ಜಿಕ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ ದೇಶಕ್ಕೆ ಏನಾದರೂ ಕೊಡುಗೆ ನೀಡಬೇಕು, ವಿಶೇಷವಾಗಿ ವಿದ್ಯಾರ್ಥಿಗಳು ತಮ್ಮ ಅಧ್ಯಯನದಲ್ಲಿ ಉನ್ನತಿ ಪಡೆ ದು ದೇಶಕ್ಕೆ ಮಾದರಿಯಾಗಬೇಕು, ಎಷ್ಟೋ ಜನ್ಮ ಗಳ ಪುಣ್ಯದ ಫಲವಾಗಿ ನಾವು ಭಾರತ ದೇಶದಲ್ಲಿ ಜನಿಸಿ ದ್ದೇವೆ. ಅದರ ಋಣ ತೀರಿಸುವ ಕೆಲಸ ಆಗಬೇಕು ಎಂದರು.

{ಮಧು ಬಂಗಾರಪ್ಪ} ಸಚಿವ

**ಶರಾವತಿ ನದಿಯಿಂದ ಸೊರಬ, ಆನವಟ್ಟಿ ಮತ್ತು ಶಿರಾಳಕೊಪ್ಪ ಪಟ್ಟಣಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಶಾಶ್ವತ ನೀರಿನ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ಮಾನವ ಎದೆಹಾಲು ಸಂಸ್ಕರಣೆ ಹಾಗೂ ವಿತರಣಾ ಕೇಂದ್ರವನ್ನು ಆರಂಭಿಸಲಾಗಿದ್ದು, ಮೆಗಾನ್ ಆಸ್ಪತ್ರೆಯಲ್ಲಿ ಮೆದುಳು ರೋಗಗಳ ತಪಾಸಣೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕ ಜನವರಿಯಿಂದ ಕಾರ್ಯ ಆರಂಭಗೊಂಡಿದೆ.**



---

## ಭಾರತದಲ್ಲಿರುವ ನಾವೆಲ್ಲ ನಮ್ಮ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ: ತಂಗಡಗಿ

# ಜಿಲ್ಲಾದ್ಯಂತ ಸಂಭ್ರಮದ ಸ್ವಾತಂತ್ರ್ಯೋತ್ಸವ

**ಕೊಪ್ಪಳ:** ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರತಿಯೊಬ್ಬ ಮಹನೀಯರೂ ಭಾರತೀಯರ ಮನದಲ್ಲಿ ಅಜರಾಮರವಾಗಿ ಉಳಿದಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿ ಗುರುವಾರ ಮಾತನಾಡಿದರು. ಸ್ವತಂತ್ರ್ಯ ಭಾರತದಲ್ಲಿರುವ ನಾವೆಲ್ಲ ನಮ್ಮ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ. ಜಾತಿ- ಧರ್ಮದ ಭೇದ-ಭಾವ ಮರೆತು ಎಲ್ಲರೂ ಸಮಾನರಾಗಿ ಶಾಂತಿಯಿಂದ ಬಾಳಬೇಕು. ದೇಶಪ್ರೇಮ ಬೆಳೆಸಿಕೊಳ್ಳಲು ಪ್ರೇರಣೆಯಾದ ಈ ದಿನದಂದು ಸಮ ಸಮಾಜ ಕಟ್ಟಲು ಸಂಕಲ್ಪ ಮಾಡಬೇಕಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಕೊಪ್ಪಳ ಜಿಲ್ಲೆಯ ಹೋರಾಟಗಾರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾದ ಜಿಲ್ಲೆಯ ಧೀಮಂತರು ಹೊಂದಿದ್ದ ದೇಶಪ್ರೇಮದ ಗುಣ ನಮಗೆಲ್ಲ ಸ್ಫೂರ್ತಿ. ಅವರ ಸೇವಾಗುಣ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ಸಚಿವ ಶಿವರಾಜ ತಂಗಡಗಿ ಧ್ವಜಾರೋಹಣ ನೆರವೇರಿಸಿದರು.

ರಾಜ್ಯ ಸರಕಾರ ಕಳೆದ 14 ತಿಂಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದೆ. ಆರ್ಥಿಕ ದುರ್ಬಲ ವರ್ಗದವರಿಗೆ ಪಂಚ ಗ್ಯಾರಂಟಿ ಯೋಜನೆಯಡಿ ಸೌಲಭ್ಯ ಒದಗಿಸಿದ್ದೇವೆ. ಮಹಿಳೆಯರು, ಪಡಿತರ ಚೀಟಿದಾರರು, ಯುವಕರು ಸೇರಿದಂತೆ ರಾಜ್ಯದ ಜನತೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇವೆ. ರಾಜ್ಯ ಸರಕಾರ ಕಳೆದ ಮೇ 2023ರಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ ಮೊದಲ ಸಚಿವ ಸಂಪುಟ ಸಭೆಯಲ್ಲಿ ಜಾರಿ ಮಾಡಿದ ಗ್ಯಾರಂಟಿ ಯೋಜನೆ, ಬಡವರ ಬಾಳು ಬೆಳಗುತ್ತಿವೆ. ಇದಕ್ಕಾಗಿ 2024-25ನೇ ಸಾಲಿನ ಬಜೆಟ್‌ನಲ್ಲಿ 52 ಸಾವಿರ ಕೋಟಿ ರೂ.ಮೊತ್ತ ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

ಕಳೆದ ವರ್ಷ ಮುಂಗಾರು ಹಂಗಾಮಿನಲ್ಲಿ ಬರ ಘೋಷಿಸಿದ ಪ್ರಯುಕ್ತ ಬೆಳೆ ಪರಿಹಾರವಾಗಿ 1,05,024 ರೈತರಿಗೆ 109.08 ಕೋಟಿ ಪರಿಹಾರ ರೈತರ ಖಾತೆಗೆ ಜಮೆ ಮಾಡಲಾಗಿದೆ. ಕಳೆದ ಸಾಲಿನ ಮುಂಗಾರು ಹಂಗಾಮಿನಲ್ಲಿ ಬರ ಜೀವನೋಪಾಯ ಪರಿಹಾರವಾಗಿ ಜಿಲ್ಲೆಯ 51, 245 ಜನ ಸಣ್ಣ ಮತ್ತು ಅತೀ ಸಣ್ಣ ರೈತ ಕುಟುಂಬಗಳಿಗೆ 14.80 ಕೋಟಿ ಪರಿಹಾರ ಹಣ ರೈತರ ಖಾತೆಗೆ ಜಮೆ ಮಾಡಲಾಗಿದೆ. ಇನ್ನು 2023-24 ನೇ ಸಾಲಿನಲ್ಲಿ ಒಟ್ಟು ಹಿಂಗಾರು ಮತ್ತು ಮುಂಗಾರು ಹಂಗಾಮಿನಲ್ಲಿ 75,519 ಫಲಾನುಭವಿಗಳಿಗೆ 84.14 ಕೋಟಿ ಬೆಳೆವಿಮೆ ಹಣ ರೈತರ ಖಾತೆಗೆ ಜಮೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

> **ಕನಕಗಿರಿ ತಾಲೂಕಿನ ಸಿರಿವಾರ ಗ್ರಾಮದಲ್ಲಿ 200 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಪ್ರಸ್ತುತ ವಿಸ್ತೃತ ಯೋಜನಾ ವರದಿ ಸಲ್ಲಿಸಲಾಗಿದೆ. ಆರ್ಥಿಕ ಬಿಡ್ ಕರೆಯಲಾಗಿದ್ದು, ಮುಂದಿನ ದಿನ ಕೊಪ್ಪಳ ಸೇರಿ ಕಲ್ಯಾಣ ಕರ್ನಾಟಕದ ರೈತರಿಗೆ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ವರದಾನ ಆಗಲಿದೆ.**
> -ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ

ಈ ಮೊದಲು ಸಚಿವರು ತೆರೆದ ವಾಹನದಲ್ಲಿ ತೆರಳಿ ಪರೇಡ್ ವೀಕ್ಷಣೆ ಮಾಡಿದರು. ನಂತರ ಪೊಲೀಸ್ ಇಲಾಖೆ, ಗೃಹರಕ್ಷಕ ದಳ ಸೇರಿ ವಿವಿಧ ತಂಡಗಳು ಹಾಗೂ ನಾನಾ ಶಾಲೆ ವಿದ್ಯಾರ್ಥಿಗಳು ಆಕರ್ಷಕ ಪಥ ಸಂಚಲನ ನಡೆಸಿದರು. ಕಾರ್ಯಕ್ರಮದ ನಂತರ ಕೊಪ್ಪಳದ ವಿವಿಧ ಶಾಲೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ ಮಾಡಿದರು.

ಶಾಸಕ ರಾಘವೇಂದ್ರ ಹಿಟ್ನಾಳ ಅಧ್ಯಕ್ಷತೆ ವಹಿಸಿದ್ದರು. ಸಂಸದ ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕಿ ಹೇಮಲತಾ ನಾಯಕ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆಯ, ಎಸ್ಪಿ ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ ಕುಮಾರ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ತಹಸೀಲ್ದಾರ್ ವಿಠ್ಠಲ್ ಚೌಗಲಾ, ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

---

# ಸಿದ್ದೇಶ್ವರ ರಂಗಮಂದಿರದಲ್ಲಿ 78ನೇ ಸಂಭ್ರಮದ ಸ್ವಾತಂತ್ರ್ಯೋತ್ಸವ

**ಕಾರಟಗಿ:** ನಾವು, ನೀವೆಲ್ಲ ಸ್ವಾತಂತ್ರ್ಯದ ಆಶಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಕರಾಗಬೇಕಿದೆ ಎಂದು ತಹಸೀಲ್ದಾರ್ ಎಂ.ಕುಮಾರಸ್ವಾಮಿ ಹೇಳಿದರು.

ಪಟ್ಟಣದ ಸಿದ್ದೇಶ್ವರ ಬಯಲು ರಂಗಮಂದಿರದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಗುರುವಾರ ಮಾತನಾಡಿದರು.

ನಿರಂತರ ಹೋರಾಟ, ತ್ಯಾಗ, ಬಲಿದಾನದಿಂದ ನಮಗೆ ಸ್ವಾತಂತ್ರ್ಯ ದೊರಕಿದೆ. ನಾವು ಮುಂದಿನ ಪೀಳಿಗೆ ದೇಶಭಿಮಾನ, ಸ್ವಾತಂತ್ರ್ಯದ ಮಹತ್ವ ಕುರಿತು ಮತ್ತೆ ಮತ್ತೆ ಸ್ಮರಿಸುತ್ತ ದೇಶ ಮುನ್ನಡೆಸುವ ಬಗ್ಗೆ ತಿಳಿ ಹೇಳಬೇಕಾಗಿದೆ.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರು ಪ್ರತಿಯೊಬ್ಬ ಭಾರತೀಯರ ಮನದಲ್ಲೂ ಅಮರರಾಗಿ ಉಳಿದಿದ್ದಾರೆ. ನಾವೆಲ್ಲೂರ ಅವರ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯೋಣ. ಜಾತಿ ಧರ್ಮ, ಭೇದ-ಭಾವ ಹೊಂದಿದೆ ಎಲ್ಲರೂ ಸಮಾನರಾಗಿ ಶಾಂತಿಯಿಂದ ಬಾಳುತ್ತ ದೇಶವನ್ನು ಮುನ್ನಡೆಸೋಣ ಎಂದರು.

ಕಾರಟಗಿಯ ಸಿದ್ದೇಶ್ವರ ಬಯಲು ರಂಗಮಂದಿರದಲ್ಲಿ ತಹಸೀಲ್ದಾರ್ ಎಂ. ಕುಮಾರಸ್ವಾಮಿ ಗುರುವಾರ ಧ್ವಜಾರೋಹಣ ನೆರವೇರಿಸಿದರು.

ಪಿಐ ಪ್ರದೀಪ್ ಭಿಸೇ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಸರ್ದಾರ ಅಲಿ, ಕೆಪಿಎಸ್ ಪ್ರೌಢಶಾಲಾ ವಿಭಾಗದ ಉಪ ಪ್ರಾಂಶುಪಾಲ ಶರಣಪ್ಪ ಸೋಮಲಾಪುರ ಮಾತನಾಡಿದರು. ಪುರಸಭೆ ಮುಖ್ಯಾಧಿಕಾರಿ ಸುರೇಶ್ ಶೆಟ್ಟರ್ ಪ್ರಾಸ್ತಾವಿಕ ಮಾತನಾಡಿದರು. ಈ ಮೊದಲು ಪೊಲೀಸ್ ಇಲಾಖೆ, ಸ್ಕೌಟ್ಸ್ ಆಂಡ್ ಗೈಡ್, ಗೃಹರಕ್ಷಕ ದಳ, ಅರಣ್ಯ ಇಲಾಖೆ ಸೇರಿ ವಿವಿಧ ಶಾಲೆ ವಿದ್ಯಾರ್ಥಿಗಳು ಆಕರ್ಷಕ ಪಥ ಸಂಚಲನ ನಡೆಸಿದರು. ಮುಖ್ಯಮಂತ್ರಿ ಪದಕ ಪಡೆದ ಅಗ್ನಿಶಾಮಕ ದಳದ ಸಿಬ್ಬಂದಿ ಮಂಜುನಾಥ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಕಾರ್ಯಕ್ರಮದಲ್ಲಿ ಬಿಆರ್‌ಪಿ ರಾಮಪ್ಪ ಕಂಬಳಿ, ಅಗ್ನಿ ಶಾಮಕ ಠಾಣಾಧಿಕಾರಿ ಕೆ. ನರಸಪ್ಪ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಸರ್ದಾರ ಅಲಿ ಇದ್ದರು. ಸಿಆರ್‌ಪಿ ತಿಮ್ಮಣ್ಣ ನಾಯಕ್, ಖಜಾನೆ ಇಲಾಖೆ ಅಧಿಕಾರಿ ಹನುಮಂತಪ್ಪ ತೊಂಡಿಹಾಳ, ಶಿಕ್ಷಕ ಮಂಜುನಾಥ ಚಿಕೇನಕೊಪ್ಪ ನಿರ್ವಹಿಸಿದರು.

---

# ಮುಂದಿನ ವರ್ಷದಿಂದ ಸಾಂಸ್ಕೃತಿಕ ಕಾರ್ಯಕ್ರಮ: ಶಾಸಕ

**ಕುಷ್ಟಗಿ:** ಪಟ್ಟಣದಲ್ಲಿ ಪ್ರತಿವರ್ಷ ಆ.15ರಂದು ಆಯೋಜಿಸುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಕಳೆ ಹೆಚ್ಚಿಸಲು ಮುಂಬರುವ ವರ್ಷದಿಂದ ಸಂತೆ ಬಯಲಿನಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ವಿಧಾನಸಭೆ ವಿಪಕ್ಷ ಮುಖ್ಯ ಸಚೇತಕ ಶಾಸಕ ದೊಡ್ಡನಗೌಡ ಪಾಟೀಲ್ ಹೇಳಿದರು.

ಪಟ್ಟಣದ ಬನ್ನಿಕಟ್ಟೆ ಬಳಿಯ ಸಂತೆ ಬಯಲಿನಲ್ಲಿ ಪುರಸಭೆ ವತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಬೆಳಗ್ಗೆ ಸಾರ್ವಜನಿಕ ಧ್ವಜಾರೋಹಣ ನೆರವೇರಿಸಿ ಗುರುವಾರ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಲ್ಲಿ ಸ್ವಾತಂತ್ರ್ಯೋತ್ಸವ ಬಗ್ಗೆ ಸಂಭ್ರಮ ಕಡಿಮೆಯಾಗುತ್ತಿದೆ. ಹಿಂದಿನ ದಿನದಲ್ಲಿ ಸಂತೆ ಬಯಲಿನಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಮತ್ತಿತರೆ ರಾಷ್ಟ್ರೀಯ ಕಾರ್ಯಕ್ರಮಗಳ ನಿಮಿತ್ತ ಸಾರ್ವಜನಿಕ ರಾಷ್ಟ್ರ ಧ್ವಜಾರೋಹಣ ಸಂದರ್ಭದಲ್ಲಿ ಊರಿನ ಹಿರಿಯರು, ಕಿರಿಯರು ಹಾಗೂ ಮಹಿಳೆಯರು ಸ್ವ-ಇಚ್ಛೆಯಿಂದ ಪಾಲ್ಗೊಂಡು ಸಂಭ್ರಮಿಸುತ್ತಿದ್ದರು. ಆಗ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಅಂದಿನ ಸ್ಥಳೀಯ ಸಂಸ್ಥೆ ವತಿಯಿಂದ ಆಯೋಜನೆ ಮಾಡಿ ಸಾರ್ವಜನಿಕರನ್ನು ರಂಜಿಸಲಾಗುತ್ತಿತ್ತು. ಧ್ವಜಾರೋಹಣ ನಿಮಿತ್ತ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸುತ್ತಿರುವುದರಿಂದ ಸಾರ್ವಜನಿಕರಲ್ಲಿ ಆಸಕ್ತಿ ಕಡಿಮೆಯಾಯಿತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಷ್ಟಗಿ ಪಟ್ಟಣದ ಬನ್ನಿಕಟ್ಟೆ ಬಳಿಯ ಸಂತೆ ಬಯಲಿನಲ್ಲಿ ಪುರಸಭೆ ವತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಗುರುವಾರ ಸಾರ್ವಜನಿಕ ಧ್ವಜಾರೋಹಣ ನೆರವೇರಿಸಿ ವಿಧಾನಸಭಾ ವಿಪಕ್ಷ ಮುಖ್ಯ ಸಚೇತಕರಾದ ಶಾಸಕ ದೊಡ್ಡನಗೌಡ ಪಾಟೀಲ್ ಮಾತನಾಡಿದರು.

ಹಿಂದಿನ ಆ ಪರಂಪರೆ ಮರುಕಳಿಸಲು ಮುಂಬರುವ ವರ್ಷದಿಂದ ಸಂತೆ ಬಯಲಿನ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮವನ್ನು ಆಕರ್ಷಿಸಲು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳವ ತೀರ್ಮಾನ ಕೈಗೊಳ್ಳೋಣ ಎಂದ ಶಾಸಕ ದೊಡ್ಡನಗೌಡ, ಸಾರ್ವಜನಿಕರು ಕೂಡ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಕಳೆ ಹೆಚ್ಚಿಸಬೇಕು ಎಂದು ಮನವಿ ಮಾಡಿದರು. ಪುರಸಭೆ ಹಿರಿಯ ಸದಸ್ಯ ಜೆ.ಕೆ.ಹಿರೇಮಠ ಮಾತನಾಡಿ, ಕಾರ್ಯಕ್ರಮದಲ್ಲಿ ಸಾರ್ವಜನಿಕರ ಗೈರುಹಾಜರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ, ಸದಸ್ಯರಾದ ಮಹಾಂತೇಶ ಕಲಭಾವಿ, ಜಯತೀರ್ಥ ಆಚಾರ, ಅಂಬಣ್ಣ ಭಜಂತ್ರಿ ಹಾಗೂ ಸಿಬ್ಬಂದಿ, ಪೌರಕಾರ್ಮಿಕರು ಇದ್ದರು.

---

# ಜಿಲ್ಲಾಡಳಿತದಿಂದ ಸ್ವಾತಂತ್ರ್ಯೋತ್ಸವ ದಿನಾಚರಣೆ

## ಬಡವರ ಬದುಕು ಬದಲಾವಣೆಗಾಗಿ ಗ್ಯಾರಂಟಿ | ಮತ ಗಳಿಕೆಗಾಗಿ ಗ್ಯಾರಂಟಿ ಯೋಜನೆಗಳು ತಂದಿಲ್ಲ

**ರಾಯಚೂರು:** ಸ್ವಾತಂತ್ರ್ಯ ಭಾರತ ನಂತರ ಯಾವುದೇ ಸರಕಾರ ಸಿಂಹಪಾಲನ್ನು ಬಡವರ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಿದ್ದು ಯಾವುದಾದರೂ ಸರಕಾರ ಇದ್ದರೇ ಅದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ. ಬಡವರ ಬದುಕಿನಲ್ಲಿ ಬದಲಾವಣೆ ತರಬೇಕೆಂಬ ಸದುದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ತಂದಿದ್ದು, ಮತಗಳಿಕೆಗಾಗಿ ಅಲ್ಲ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಹೇಳಿದರು.

ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಗೌರವರಕ್ಷೆ ಸ್ವೀಕರಿಸಿ ಮಾತನಾಡಿದರು.

ಜನರ ಆಶೀರ್ವಾದಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಜನರ ನಿರೀಕ್ಷೆಯಂತೆ ಯೋಜನೆಯನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇವೆ. ಐದು ಗ್ಯಾರಂಟಿ ಯೋಜನೆ ಜಾರಿಗೊಂಡಿದ್ದು, ಮತ ಗಳಿಕೆಗಾಗಿ ಈ ಯೋಜನೆ ಕೊಟ್ಟಿಲ್ಲ. ರಾಜ್ಯದಲ್ಲಿ ಶಕ್ತಿಹೀನರು, ಬಡವರ ಕಲ್ಯಾಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಲಾಗಿದೆ ಎಂದರು.

ತುಂಗಭದ್ರಾ ಜಲಾಶಯ ಭರ್ತಿಯಾದರೂ ಗೇಟ್ ಕಡಿತವಾಗಿರುವುದರಿಂದ ಸಾಕಷ್ಟು ನೀರು ನದಿಗೆ ಹರಿದು ಹೋಗಿದೆ. ಗೇಟ್ ಸರಿಪಡಿಸುವ ಕೆಲಸ ಅಧಿಕಾರಿಗಳು ಮಾಡುತ್ತಿದ್ದಾರೆ. ಈಗಾಗಲೇ ಜಲಾಶಯಕ್ಕೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಭೇಟಿ ನೀಡಿದ್ದಾರೆ. ಮತ್ತೆ ಡ್ಯಾಂ ತುಂಬಬೇಕೆಂಬುದು ರೈತರ ನಿರೀಕ್ಷೆ ಇದೆ. ಮತ್ತೆ ಆಗಸ್ಟ್ ಕೊನೆ ವಾರದಲ್ಲಿ ಮತ್ತೆ ಡ್ಯಾಂ ತುಂಬುವ ನಿರೀಕ್ಷೆ ಇದೆ ಎಂದರು.

ಭತ್ತದ ಕಣಜವಾದ ರಾಯಚೂರು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಜನಪ್ರತಿನಿಧಿಗಳು, ಅಧಿಕಾರಿಗಳು ಒಗ್ಗಟ್ಟಾಗಿ ಶ್ರಮಿಸಬೇಕಿದೆ ಎಂದರು. ಒಳ್ಳೆ ವ್ಯವಸ್ತೆ ಬಿಟ್ಟು ಹೋಗಬೇಕಿದೆ. ವ್ಯವಸ್ಥೆಯನ್ನು ಸರಿಯಾದ ಮಾರ್ಗದಲ್ಲಿ ಕರೆದುಕೊಂಡು ಹೋಗುವ ಕೆಲಸ ಮಾಡಬೇಕು.

ಮುಂದಿನ ಪೀಳಿಗೆಗೆ ಒಳ್ಳೆಯ ವ್ಯವಸ್ತೆಯನ್ನು ಬಿಟ್ಟು ಹೋಗಬೇಕಿದೆ. ಸಕರಾತ್ಮಕ ಕನಸುಗಳನ್ನು ಮಕ್ಕಳು ಇಟ್ಟುಕೊಳ್ಳುವಂತ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಿದೆ ಎಂದು ಕರೆ ನೀಡಿದರು. ಜಾತಿ, ಭಾಷೆ, ಪಂಗಡಗಳ ಸಂಕುಚಿತ ಭಾವನೆಯಿಂದ ಹೊರ ಬಂದು ಸ್ನೇಹ ಹಾಗೂ ಸೌಹಾರ್ದತೆಯ ವಾತಾವರಣ ನಿರ್ಮಿಸಿ ದೇಶದ ಒಗ್ಗಟ್ಟು ಮತ್ತು ಏಕತೆಯನ್ನು ಕಾಪಾಡಿ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಬೇಕಿದೆ ಎಂದರು.

ವೇದಿಕೆ ಮೇಲೆ ಶಾಸಕರಾದ ಡಾ.ಎಸ್.ಶಿವರಾಜ್ ಪಾಟೀಲ್, ಬಸನಗೌಡ ದದ್ದಲ, ಎ.ವಸಂತಕುಮಾರ್, ಜಿಲ್ಲಾಧಿಕಾರಿ ನಿತೀಶ್ ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ತುಕಾರಾಂ ಪಾಂಡ್ಯೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಹೆಚ್ಚುವರಿ ಜಿಲ್ಲಾಧಿಕಾರಿ ಶಿವಪ್ಪ ಯಲ್ಲಪ್ಪ ಭಜೇಂತ್ರಿ, ಸಹಾಯಕ. ಆಯುಕ್ತ ಮಹೆಬೂಬಿ, ತಹಸೀಲ್ದಾರ್ ಸುರೇಶ ವರ್ಮಾ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು. 16 ತಂಡಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ವಿವಿಧ ಶಾಲೆಗಳ ಮಕ್ಕಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೆಳೆದವು.

### ಸ್ವಾತಂತ್ರ್ಯ ಸೇನಾನಿಗಳ ಕನಸುಗಳನ್ನು ನನಸು ಮಾಡಬೇಕಿದೆ

**ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಸ್ವಾತಂತ್ರ್ಯ ಸೇನಾನಿಗಳ ಕನಸುಗಳನ್ನು ನನಸು ಮಾಡಬೇಕಿದೆ ಎಂದರು. ಮಹಾತ್ಮಗಾಂಧಿಜೀ, ಜವಾಹರಲಾಲ್ ನೆಹರು, ಸುಭಾಸ್ ಚಂದ್ರ ಬೋಸ್, ಭಗತ್ಸಿಂಗ್, ಚಂದ್ರಶೇಖರ್ ಅಜಾದ್, ಸರ್ದಾರ ವಲ್ಲಭಬಾಯಿ ಪಟೇಲ್, ಡಾ.ಬಿ.ಆರ್.ಅಂಬೇಡ್ಕರ ಸೇರಿದಂತೆ ಅನೇಕ ಮಹನೀಯರ ತ್ಯಾಗ, ಪರಿಶ್ರಮದಿಂದ ಸ್ವಾತಂತ್ರ್ಯ ಪಡೆದಿದ್ದೇವೆ. ಸ್ವಾತಂತ್ರ್ಯದ ಜತೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ಕಲ್ಪಿಸಿದ್ದಾರೆ. ವಿಶ್ವದಲ್ಲಿಯೇ ಅತ್ಯುತ್ತಮವಾದ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ನೀಡಿ, ದೇಶದ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಿದ್ದಾರೆ ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಎಂದರು.**



---

# ಊಟದಲ್ಲಿ ವಿಷ: ಪ್ರಕರಣ ದಾಖಲು

**ರಾಯಚೂರು:** ಜಿಲ್ಲೆಯ ದೇವದುರ್ಗ ತಾಲೂಕಿನ ಆಲ್ಕೋಡ ಗ್ರಾಮದ ಕಸ್ತೂರ ಬಾ ವಸತಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದಲ್ಲಿ ವಿಷ ಸೇರಿಸಿರುವ ಅನುಮಾನ ಪಡುವ ಘಟನೆಯೊಂದು ಬುಧವಾರ ಜರುಗಿದೆ.

ಶಾಲೆಯಲ್ಲಿ ನೂರು ವಿದ್ಯಾರ್ಥಿಗಳು ದಾಖಲಿದ್ದು, 95 ವಿದ್ಯಾರ್ಥಿಗಳು ಹಾಜರಿದ್ದರು. ಮಧ್ಯಾಹ್ನದ ಬಿಸಿಯೂಟಕ್ಕೆ ಅನ್ನ, ಸಾಂಬಾರ್ ತಯಾರಿಸಿದ್ದರು. ಸಾಂಬರ್ ಬಣ್ಣ ಮತ್ತು ವಾಸನೆ ಬದಲಾಗಿರುವುದನ್ನು ಅನುಮಾನಿಸಿದ ಅಡುಗೆ ಸಿಬ್ಬಂದಿ ವಿಜಯಲಕ್ಷ್ಮೀ ತುತ್ತು ಅನ್ನ, ಸಾಂಬರ ಸೇವಿಸಿದ್ದಾರೆ ತಕ್ಷಣ ಅಸ್ವಸ್ಥರಾಗಿದ್ದಾರೆ. ವಿಜಯಲಕ್ಷ್ಮೀಯನ್ನು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಸಾಂಬರ್ ಇದ್ದ ಕೊಠಡಿಯಲ್ಲಿ ಸಿಸಿ ಟಿವಿ ಇಲ್ಲದಿರುವುದು ಅನುಮಾನಕ್ಕೆ ಕಾರಣವಾಗಿದೆ. ಈವಿಷಯ ತಿಳಿದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಡಿ ಬಡಿಗೇರ, ಸಮನ್ವಯಧಿಕಾರಿ ಆರ್. ಇಂದಿರಾ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಸುಖದೇವ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ, ಜಾಲಹಳ್ಳಿ ಪಿಎಸ್‌ಐ ವೈಶಾಲಿ ಜಳಕಿ ವಸತಿ ಶಾಲೆಗೆ ಭೇಟಿ ನೀಡಿ ಮಾಹಿತಿ ಪಡೆದು ಆಹಾರ ಪರಿಶೀಲಿಸಿದರು. ಮುಖ್ಯ ಶಿಕ್ಷಕಿ ಅನಧಿಕೃತ ಗೈರಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ, ವಸತಿ ಶಾಲೆಯಲ್ಲಿ ತಯಾರಿಸಿದ ಅಡುಗೆಯನ್ನು ಮಕ್ಕಳು ಸೇವಿಸಿದ್ದರೆ ಗತಿ ಏನಾಗುತ್ತಿತ್ತು ಎಂದು ದೂರಿದರು. ಈ ಮಧ್ಯೆ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

# ಸರಕಾರಿ ಆಸ್ಪತ್ರೆಗೆ ಸಚಿವ ಪಾಟೀಲ್ ಭೇಟಿ

**ರಾಯಚೂರು:** ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣಗೊಂಡ 60 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಸರಕಾರಿ ಆಸ್ಪತ್ರೆಯ ಕಾರ್ಯಚಟುವಟಿಕೆ ಆರಂಭ ಹಿನ್ನೆಲ್ಲೆಯಲ್ಲಿ ವೈದ್ಯಕೀಯ ಶಿಕ್ಷಣ, ಕೌಶಲಭಿವೃದ್ಧಿ ಹಾಗೂ ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಅವರು ಭೇಟಿ ನೀಡಿ, ಪರಿಶೀಲನೆ ಮಾಡಿದರು. ಈ ವೇಳೆ ಮಾತನಾಡಿದ ಅವರು ಆಸ್ಪತ್ರೆಗೆ ಬರುವ ಗರ್ಭಿಣ ಹಾಗೂ ಬಾಣಂತಿ ಮತ್ತು ನವಜಾತ ಶಿಶುಗಳಿಗೆ ಉತ್ತಮ ಚಿಕಿತ್ಸೆ ನೀಡುವ ಮೂಲಕ ಸಾರ್ವಜನಿಕರಿಗೆ ಅನುಕೂಲ ರೀತಿಯ ಕಾರ್ಯನಿರ್ವಹಿಸುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವರಿಂದ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಕನಡಕವನ್ನು ವಿತರಣೆ ಮಾಡಲಾಯಿತು. ಅಲ್ಲದೆ ಗರ್ಭಿಣ ಹಾಗೂ ಬಾಣಂತಿ ಮಹಿಳೆಯರಿಗೆ ಹಣ್ಣು-ಹಂಪಲು ವಿತರಿಸಲಾಯಿತು. ಈ ವೇಳೆ ವಿಧಾನ ಪರಿಷತ್ ಸದಸ್ಯ ಎ.ವಸಂತ ಕುಮಾರ್, ಡಿಸಿ ನಿತೀಶ್ ಕೆ., ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕರಾಮ್ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಮ್.ಪುಟ್ಟಮಾದಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಸುರೇಂದ್ರ ಬಾಬು, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮಹಿಬೂಬ್ ಜಿಲಾನಿ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ವಿಜಯಶಂಕರ ಇದ್ದರು.

ರಾಯಚೂರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ 2023-24 ನೇ ಸಾಲಿನ ಜಿಲ್ಲಾ ಪ್ರಶಸ್ತಿ ಪುರಸ್ಕೃತ ರಾಘವೇಂದ್ರ ಭಜಂತ್ರಿ ಯವರಿಗೆ ತಾಲೂಕ ಕ್ರೀಡಾಂಗಣದಲ್ಲಿ ನಡೆದ 78 ನೇ ಸ್ವತಂತ್ರ ದಿನಾಚರಣೆಯ ಕಾರ್ಯಕ್ರಮದಲ್ಲಿ ತಾಲೂಕಡಳಿತದ ವತಿಯಿಂದ ಸನ್ಮಾನಿಸಿ ಗೌರವಿಸಿದರು.

---

# ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಿ

**ಮುದಗಲ್:** ಪರಿಶಿಷ್ಟ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮುದಗಲ್ ಘಟಕದ ಸಂಚಾಲಕ ಬಸವರಾಜ ಬಂಕದಮನಿ ಹೇಳಿದರು. ಪಟ್ಟಣ ಸಮೀಪದ ಆಮದಿಹಾಳ ಗ್ರಾಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ಪದಾಧಿಕಾರಿಗಳ ಆಯ್ಕೆ ಮಾಡಿ ನಂತರ ಮಾತನಾಡಿದರು. ಸಮುದಾಯದ ಮುಖಂಡರು ಸರಕಾರದ ಪ್ರತಿಯೊಂದು ಯೋಜನೆಗಳು ಪಡೆದುಕೊಂಡು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು. ದಲಿತ ಕೇರಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಹೋರಾಟ ಮಾಡಲು ಸದಾ ಸಿದ್ದರಾಗಿರಬೇಕೆಂದರು. ಲಿಂಗಸುಗೂರು ತಾಲೂಕು ಸಂಚಾಲಕ ಶರಣಪ್ಪ ಕಟ್ಟಿಮನಿ ಸಭೆ ಅಧ್ಯಕ್ಷತೆ ವಹಿಸಿದ್ದರು. ಆಮದಿಹಾಳ ಗ್ರಾಮ ಘಟಕದ ಗುರುನಾಥ ದೊಡ್ಡಮನಿ (ಸಂಚಾಲಕ) ನಿರುಪಾದಿ ಪೂಜಾರಿ, ದುರುಗಪ್ಪ ಪೂಜಾರಿ, ಯಮನೂರ ಗುಂತಾದ, ನೀಲಪ್ಪ ಗುಂತಾದ, ಶಿವಾನಂದ ಬಡಿಗೇರ, ಮೌನೇಶ ಪೂಜಾರಿ, ಉಲ್ಲಾಸ ಪೂಜಾರಿ(ಸಂಘಟನೆ ಸಂಚಾಲಕರು), ಮುತ್ತಣ್ಣ ಕರಡಿ(ಖಜಾಂಜಿ), ಹುಲುಗಪ್ಪ ಸೋಮಲಾಪುರ,ಮಾನಪ್ಪ ಬಡಿಗೇರ, ಪಕೀರಪ್ಪಆಮದಿಹಾಳ, ಮಹಾಂತೇಶ ಬಡಿಗೇರ, ಮುದುಕಪ್ಪ ಪೂಜಾರಿ (ಹಿರಿಯ ಸಲಹೆಗಾರು) ಇವರನ್ನು ಆಯ್ಕೆ ಮಾಡಲಾಗಿತು. ಪ್ರತಾಪ ಹಿರೇಮನಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# 10 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ: ಸಚಿವ

## ಡಿ.ಎ.ಆರ್ ಮೈದಾನದಲ್ಲಿ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ | ಜಿಲ್ಲೆಯಲ್ಲಿ ಪಬ್ಲಿಕ್ ಸ್ಕೂಲ್ ಸ್ಥಾಪನೆ : ಮಧು ಬಂಗಾರಪ್ಪ

**ಶಿವಮೊಗ್ಗ:** ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ಅಡಚಣೆಯಾಗದಂತೆ ಖಾಲಿ ಇರುವ 10 ಸಾವಿರ ಖಾಯಂ ಶಿಕ್ಷರ ನೇಮಕಾತಿಗೂ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಗುರುವಾರ ನಗರದ ಡಿ.ಎ.ಆರ್ ಮೈದಾನದಲ್ಲಿ ಆಯೋಜಿಸಿದ್ದ 78 ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಮಕ್ಕಳಿಗೆ ಸಮವಸ್ತ್ರ, ಪಠ್ಯಪುಸ್ತಕ, ಶೂ ಮತ್ತು ಸಾಕ್ಸಗಳನ್ನು ಪೂರೈಸಲಾಗಿದೆ. ಈಗಾಗಲೇ 12000 ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗಿದೆ. 45 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. 2015 ರಿಂದ 2020 ನೇ ಸಾಲಿನ ವರೆಗೆ ಅನುದಾನಿತ ಶಾಲಾ ಕಾಲೇಜುಗಳಲ್ಲಿ 5 ಸಾವಿರ ಶಿಕ್ಷರ ನೇಮಕಾತಿ ಅನುಮತಿ ನೀಡಲಾಗಿದೆ ಎಂದು ತಿಳಿಸಿದರು.

ಮಕ್ಕಳಲ್ಲಿನ ಪೌಷ್ಟಿಕತೆ ಹೆಚ್ಚಿಸಲು ವಾರದ ಮೂರು ದಿನ ಹಾಲಿನೊಂದಿಗೆ ರಾಗಿಮಾಲ್ಟ್ ಹಾಗೂ ಒಂದರಿಂದ ಹತ್ತನೇ ತರಗತಿಯ ಸರಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಪ್ರತಿದಿನ ಬಿಸಿಯೂಟ, ಮೊಟ್ಟೆ, ಚಿಕ್ಕಿ ಮತ್ತು ಬಾಳೆಹಣ್ಣು ವಿತರಿಸಲಾಗುತ್ತಿದೆ. ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದೊಂದಿಗೆ ಮುಂದಿನ 3 ವರ್ಷಗಳ ಅವಧಿಗೆ ವಾರದ 6 ದಿನಗಳು ಮೊಟ್ಟೆ ವಿತರಿಸುವ ಯೋಜನೆ ಪ್ರಾರಂಭಿಸಲಾಗಿದೆ. 10 ನೇ ತರಗತಿಯಲ್ಲಿ

ನಗರದ ಡಿ.ಎ.ಆರ್ ಮೈದಾನದಲ್ಲಿ ಆಯೋಜಿಸಿದ್ದ 78 ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿತು.

ಅನುತ್ತೀರ್ಣರಾದ ವಿದ್ಯಾರ್ಥಿಗಳು ಕಲಿಕೆಯಿಂದ ಹಿಂದೆ ಸರಿಯದಂತೆ ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯಕವಾಗುವಂತೆ ಮೂರು ಹಂತದಲ್ಲಿ ಪೂರಕ ಪರೀಕ್ಷೆಗಳನ್ನು ನಡೆಸುತ್ತಿರುವುದಕ್ಕೆ ಸಾರ್ವಜನಿಕರಿಂದ ಉತ್ತಮ ಅಭಿಪ್ರಾಯ ಮೂಡಿದೆ ಎಂದರು.

ಶರಾವತಿ ಹಾಗೂ ಇತರೆ ಯೋಜನೆಗಳ ಮುಳುಗಡೆ ಸಂತ್ರಸ್ತರು ಹಾಗೂ ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆಗೆ ಶಾಶ್ವತ ಪರಿಹಾರ ಕೈಗೊಳ್ಳಲಾಗುತ್ತಿದೆ. ಜಿಲ್ಲೆ ಮತ್ತು ಸರಕಾರದ ಹಂತದಲ್ಲಿ ಸಭೆಗಳನ್ನು ನಡೆಸಲಾಗಿದೆ. ಸಂತ್ರಸ್ತರ ಪರವಾಗಿ ಸುಪ್ರಿಂಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಲು ಹಿರಿಯ ವಕೀಲರೊಬ್ಬರನ್ನು ಈಗಾಗಲೇ ನೇಮಿಸಲಾಗಿದೆ. ವಿಧಾನ ಸಭೆಯಲ್ಲಿ ಐತಿಹಾಸಿಕ ನಿರ್ಣಯವನ್ನು ಅನುಮೋದನೆಗಾಗಿ ಕೇಂದ್ರ ಸರಕಾರಕ್ಕೆ ಸಲ್ಲಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಒಟ್ಟು 41 ಕೆ.ಪಿ.ಎಸ್ ಶಾಲೆಗಳನ್ನು ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಲ್ಲದೇ 2023-24ನೇ ಸಾಲಿನಿಂದ ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಮತ್ತು ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುತ್ತಿದೆ ಎಂದರು.

> ಶರಾವತಿ ನದಿಯಿಂದ ಸೊರಬ, ಆನವಟ್ಟಿ ಮತ್ತು ಶಿರಾಳಕೊಪ್ಪ ಪಟ್ಟಣಗಳು ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಶಾಶ್ವತ ನೀರಿನ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯ ಜನರ ಆರೋಗ್ಯದ ದೃಷ್ಟಿಯಿಂದ ನಗರದಲ್ಲಿ ಕಿದ್ವಾಯಿ ಮಾದರಿಯ ಕ್ಯಾನ್ಸರ್ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಶಿವಮೊಗ್ಗದಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ಮಾನವ ಎದೆಹಾಲು ಸಂಸ್ಕರಣೆ ಹಾಗೂ ವಿತರಣಾ ಕೇಂದ್ರವನ್ನು ಆರಂಭಿಸಲಾಗಿದೆ. ಮೆಗಾನ್ ಆಸ್ಪತ್ರೆಯಲ್ಲಿ ಮೆದುಳು ರೋಗಗಳ ತಪಾಸಣೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕ ಜನವರಿಯಿಂದ ಕಾರ್ಯ ಆರಂಭಗೊಂಡಿದೆ.
>
> - ಮಧು ಬಂಗಾರಪ್ಪ ಸಚಿವ

ರಾಜ್ಯದಲ್ಲಿ ಅನುಷ್ಠಾನಗೊಂಡ ಈ ಎಲ್ಲಾ ಯೋಜನೆಗಳು ದೇಶದಲ್ಲಿಯೇ ಮಾದರಿ ಯೋಜನೆಗಳಾಗಿ ಗುರುತಿಸಲಾಗುತ್ತಿರುವುದು ವಿಶೇಷವೆನಿಸಿದೆ.

ಒಟ್ಟಾರೆಯಾಗಿ ಸರಕಾರದ ಗ್ಯಾರಂಟಿ ಯೋಜನೆಗಳಿಂದ ಪ್ರತಿ ಕುಟುಂಬಕ್ಕೆ ವಾರ್ಷಿಕ 30 ರಿಂದ 50 ಸಾವಿರದ ವರೆಗೆ ಆರ್ಥಿಕ ನೆರವು ಲಭಿಸುತ್ತಿದೆ. ಒಂದು ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ಸುಮಾರು 09 ಕೋಟಿ ರು.ಗಳ ಹಣಕಾಸು ಸೌಲಭ್ಯವು ಯಾವುದೇ ಮಧ್ಯವರ್ತಿಗಳಿಲ್ಲದೆ ತಲುಪಿಸುತ್ತಿರುವುದು ನಾಡಿನ ಜನ ಹೆಮ್ಮೆ ಪಡುವ ಸಂಗತಿಯಾಗಿದೆ ಎಂದರು.

ವಿವಿಧ ತುಕಡಿಗಳು ಆಕರ್ಷಕ ಪಥಸಂಚನದಲ್ಲಿ ಸಾಗಿದರು. ಸಾಮೂಹಿಕ ವ್ಯಾಯಾಮ ಹಾಗೂ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಯಿತು. ಪಥಸಂಚಲನದಲ್ಲಿ ಪ್ರಥಮ ಸ್ಥಾನ ಮೊರಾರ್ಜಿ ವಸತಿ ಶಾಲೆ, ದ್ವಿತೀಯ ಸ್ಥಾನ ಭಾರತ್ ಸ್ಕೌಟ್ಸ್ ಬಾಲಕರ ಶಾಲೆ ಹಾಗೂ ತೃತೀಯ ಸ್ಥಾನವನ್ನು ಜ್ಞಾನದೀಪ ಶಾಲೆ ವಿದ್ಯಾರ್ಥಿಗಳು ಪಡೆದುಕೊಂಡರು.

ಉತ್ತಮ ಸೇವೆ ಸಲ್ಲಿಸಿದ 5 ಜನ ಅಧಿಕಾರಿ, ಸಿಬ್ಬಂದಿಗಳು, ಅಲ್ಪಸಂಖ್ಯಾತ ಇಲಾಖೆಯ ಅಡಿ ಬರುವ ಪ್ರೌಢಶಾಲೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ಅಂಗಾಂಗ ದಾನ ಮಾಡಿದ ದಿ.ಉಲ್ಲಾಸ್ , ದಿ.ಲಲಿತಮ್ಮ ಕುಟುಂಬ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕರಾದ ಬಲ್ಕೀಶ್ ಬಾನು, ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಕುಮಾರ್, ಜಿ.ಪಂ. ಸಿಇಓ ಎನ್.ಹೇಮಂತ್, ಇತರೆ ಅಧಿಕಾರಿಗಳು, ವಿದ್ಯಾರ್ಥಿಗಳು, ಸಾರ್ವಜನಿಕ ರು ಹಾಜರಿದ್ದರು.

## ಸಮಾಚಾರ ಸಣ್ಣದಲ್ಲ

### ಧ್ವಜಾರೋಹಣ ಕಾಣದ ಸರಕಾರಿ ಪಶು ಆಸ್ಪತ್ರೆ

**ಹೊಸನಗರ:** ಹೊಸನಗರ ಮೂಲ ಸ್ಥಾನದಲ್ಲಿರುವ ಹಾಗೂ ತಾಲೂಕು ಆಸ್ಪತ್ರೆಯಾಗಿರುವ ಸರಕಾರಿ ಪಶು ವೈದ್ಯ ಇಲಾಖೆಯ ಆಸ್ಪತ್ರೆಯಲ್ಲಿ 9 ಗಂಟೆಯವರೆವಿಗೂ 78ನೇ ಧ್ವಜಾರೋಹಣ ಭಾಗ್ಯ ಕಂಡಿಲ್ಲದಿರುವುದು ದುರದುಷ್ಟಕರ ಸಂಗತಿಯಾಗಿದೆ. ತಾಲೂಕು ಕೇಂದ್ರ ಪಶು ವೈದ್ಯ ಕಚೇರಿಯಲಿರುವ ಎಲ್ಲ ನೌಕರರು ಹೊರ ಗುತ್ತಿಗೆದಾರರಾಗಿ ಕೆಲಸ ನಿರ್ವಹಿಸುತ್ತಿದ್ದು, ಸಹಾಯಕ ನಿರ್ದೇಶಕ ಪಶುವೈದ್ಯಾಧಿಕಾರಿ ನಟರಾಜ್‌ರವರಿಗೆ ಎರಡು ಆಸ್ಪತ್ರೆಯಲ್ಲಿ ಸಹಾಯಕ ಪಶು ನಿರ್ದೇಶಕ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿರುವುದರಿಂದ ಧ್ವಜಾರೋಹಣ ಕಾರ್ಯಕ್ರಮ ತಡವಾಗಿದೆ ಎಂದು ಹೇಳಲಾಗಿದೆ. ಈ ಆಸ್ಪತ್ರೆಯಲ್ಲಿಯೇ ಧ್ವಜಾರೋಹಣ ಕಾರ್ಯಕ್ರಮ ನಡೆಯದಿರುವುದು ತಾಲೂಕಿಗೆ ಕಳಂಕವಾಗಿದೆ 9 ಗಂಟೆಯ ನಂತರ ಧ್ವಜಾರೋಹಣ ಕಾರ್ಯಕ್ರಮವನ್ನು ಪಶು ಇಲಾಖೆಯ ಸಹಾಯಕ ನಿರ್ದೇಶಕರಾದ ನಟರಾಜ್‌ರವರು ಆಗಮಿಸಿ ಧ್ವಜಾರೋಹಣ ಕಾರ್ಯಕ್ರಮ ನಡೆಸಲಾಯಿತು. ತಡವಾಗಿರುವುದರಿಂದ ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡಿದಂತಾಗಿದ್ದು ಮುಂದಿನ ಬಾರಿಯಾದರೂ ಬೇಗ ಧ್ವಜಾರೋಹಣ ಕಾರ್ಯಕ್ರಮ ನಡೆಯುತ್ತದೆಯೋ ಕಾದು ನೋಡಬೇಕಾಗಿದೆ?

### ವೈವಿಧ್ಯತೆಯಿಂದ ದೇಶದಲ್ಲಿ ಸ್ಥಿರತೆ

**ಶಂಕರಘಟ್ಟ:** ನಮಗೆ ಲಭಿಸಿರುವ ಸ್ವಾತಂತ್ರ್ಯದ ಸ್ವರೂಪವನ್ನು ಮರುಚಿಂತನೆ ಮಾಡಿಕೊಳ್ಳುವ ಅಗತ್ಯ ಇದೆ. ಭಾರತದ ಪ್ರಜಾತಂತ್ರ ವ್ಯವಸ್ಥೆಯ ಅನುಷ್ಠಾನದಲ್ಲಿ ಸಣ್ಣಪುಟ್ಟ ಊನಗಳಿದ್ದರೂ, ಜಗತ್ತಿನ ಶ್ರೇಷ್ಠ ರಾಷ್ಟ್ರಗಳಲ್ಲಿ ಒಂದಾಗಿ ಸ್ಥಿರತೆ ಕಾಯ್ದುಕೊಂಡಿದೆ ಎಂದು ಕುವೆಂಪು ವಿಶ್ವವಿದ್ಯಾಲದ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ಅಭಿಪ್ರಾಯಟ್ಟರು. ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ 78ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ದೇಶದ ವಿವಿಧ ಭಾಗಗಳಲ್ಲಿನ ವೈವಿಧ್ಯತೆಯೇ ನಮ್ಮ ಶಕ್ತಿ. ದೇಶದ ಉದ್ದಗಲಕ್ಕೂ ಹಬ್ಬಿರುವ ಈ ಬಹುಸಂಸ್ಕೃತಿಯನ್ನು ಒಪ್ಪಿಕೊಂಡು ಸಹೋದರ ಭಾವದಿಂದ ಶಾಂತಿಯುತವಾಗಿ ನೆಲೆಸಲು ಸಂವಿಧಾನ ನಮಗೆ ದಾರಿದೀಪವಾಗಿದೆ ಎಂದರು. ಪರೀಕ್ಷಾಂಗ ಕುಲಸಚಿವ ಪ್ರೊ. ಎಸ್. ಎಂ. ಗೋಪಿನಾಥ್, ಪ್ರೊ. ಎನ್. ಡಿ. ವಿರೂಪಾಕ್ಷ, ಪ್ರೊ. ಗಜಾನನ ಪ್ರಭು, ಡಾ. ರವೀಂದ್ರ ಗೌಡ, ವಿವಿಧ ನಿಕಾಯಗಳ ಡೀನರು, ಪ್ರಾಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಕಾಂಗ್ರೆಸ್ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ

**ಹೊಸನಗರ:** ಹೊಸನಗರದ ಗಾಂಧಿ ಮಂದಿರದಲ್ಲಿರುವ ಕಾಂಗ್ರೆಸ್ ಕಛೇರಿಯ ಆವರಣದಲ್ಲಿ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ ಆಚರಿಸಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಮೌಳಿ ಗೌಡರವರು ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರದಾನ ಕಾರ್ಯದರ್ಶಿಯಾದ ಸದಾಶಿವ ಶ್ರೇಷ್ಠಿ, ಟೌನ್ ಘಟಕದ ಅಧ್ಯಕ್ಷ ಗುರುರಾಜ್, ಶ್ರೀನಿವಾಸ್ ಕಾಮತ್, ರಾಜಮೂರ್ತಿ, ಜಯನಗರ ಗುರು, ಮಹಳ ಘಟಕದ ಅಧ್ಯಕ್ಷಿಣಿ ಸುಮಾ ಸುಬ್ರಹ್ಮಣ್ಯ, ಕೆ ಇಲಿಯಾಸ್, ನೇತ್ರ ಸುಬ್ರಾಯಭಟ್, ಎಂ.ಪಿ. ಸುರೇಶ್, ಮೈನಾವತಿ ರಾಜಮೂರ್ತಿ, ರಾಧಿಕ, ಚಂದ್ರಕಲಾ ನಾಗರಾಜ್, ಪ್ರಭಾಕರ್, ಜಯಶೀಲಪ್ಪ ಗೌಡ, ಮಹಮದ್ ಸಾಬ್, ಸುರೇಶ್ ಕುಮಾರ್, ನಿತ್ಯಾನಂದ ಹೆಚ್.ಎಂ, ಉಬೆದ್ದುಲ್ಲಾ, ನಸೀರ್, ಶಾಹಿನ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

### ಧ್ವಜಾರೋಹಣ ಕಾರ್ಯಕ್ರಮ

**ಹೊಸನಗರ:** ಹೊಸನಗರ ಪಟ್ಟಣ ಪಂಚಾಯತಿ ಆವರಣದಲ್ಲಿ ಆಡಳಿತಾಧಿಕಾರಿ ತಹಸೀಲ್ದಾರ್ ರಶ್ಮೀ ಹಾಲೇಶ್‌ರವರು 78ನೇ ವರ್ಷದ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಾಗಿತ್ತು ಈ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಉಮೇಶ್.ಎಸ್. ಗುಡ್ಡದ್ ಹಾಗೂ ಎಲ್ಲ ಪಟ್ಟಣ ಪಂಚಾಯತ್ ಸಿಬ್ಬಂದಿಗಳು ಪಟ್ಟಣ ಪಂಚಾಯತಿಯ ಸದಸ್ಯರು ಪೌರ ನೌಕರ ವರ್ಗದವರು ಉಪಸ್ಥಿತರಿದ್ದರು.

ವಿ+ ಸೋಮವಾರ

{ ಲಕ್ಷ್ಮೀ ಹೆಬ್ಬಾಳ್ಕರ್ } ಜಿಲ್ಲಾ ಉಸ್ತುವಾರಿ ಸಚಿವೆ

ಮನೆಯ ಬಾಗಿಲಲ್ಲೇ ತಪಾಸಣೆ ನಡೆಸಿ, ಅಗತ್ಯ ಔಷಧಿಗಳನ್ನು ಒದಗಿಸುವ ಗೃಹ ಆರೋಗ್ಯ ಯೋಜನೆಯನ್ನು ಮುಂದಿನ ತಿಂಗಳಿನಿಂದ ರಾಜ್ಯದಲ್ಲಿ ಜಾರಿ ತರಲಾಗುವುದು. ಈ ಯೋಜನೆಯಡಿ ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ಸಮಸ್ಯೆ ಇರುವವರಿಗೆ ಮೂರು ತಿಂಗಳಿಗೆ ಆಗುವಷ್ಟು ಮಾತ್ರೆಗಳನ್ನು ನೇರವಾಗಿ ಮನೆಗಳಿಗೆ ಒದಗಿಸಲಾಗುವುದು.

# ಈಸೂರಿನತ್ತ ನಮ್ಮ ಪಯಣ ಬೈಕ್ ರ್‍ಯಾಲಿ ಕಾರ್ಯಕ್ರಮ

**ಸೊರಬ:** ಏಸೂರು ಕೊಟ್ಟರೂ ಈಸೂರು ಬಿಡೆವು ಎಂಬ ಘೋಷಣೆಯೊಂದಿಗೆ ಸ್ವಯಂ ಪ್ರೇರಿತರಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕೀರ್ತಿ ಈಸೂರು ಗ್ರಾಮಸ್ಥರಿಗೆ ಸಲ್ಲುತ್ತದೆ. ಈಸೂರಿನ ಸ್ವಾತಂತ್ರ್ಯ ಹೋರಾಟ ರೋಮಾಂಚನಕಾರಿಯಾಗಿದ್ದು, ಇತಿಹಾಸದ ಪುಟದಲ್ಲಿ ದಾಖಲಾಗಿದೆ ಎಂದು ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಜೆ.ಎಸ್. ಚಿದಾನಂದ ಗೌಡ ಹೇಳಿದರು.

ಗುರುವಾರ ಪಟ್ಟಣದ ಶ್ರೀರಂಗನಾಥ ದೇವಸ್ಥಾನದ ಮುಂಭಾಗ ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ವತಿಯಿಂದ ಭಾರತ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಈಸೂರಿನತ್ತ ನಮ್ಮ ಪಯಣ ಬೈಕ್ ರ್‍ಯಾಲಿಗೆ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ದೇಶದಲ್ಲಿಯೇ ಮೊದಲ ಸ್ವಾತಂತ್ರ್ಯ ಘೋಷಣೆ ಮಾಡಿಕೊಂಡು ಗ್ರಾಮದ ವೀರಭದ್ರ ದೇವಸ್ಥಾನದಲ್ಲಿ ತ್ರಿವರ್ಣ ಧ್ವಜ ಹಾರಿಸುವ ಮೂಲಕ ಕೆಚ್ಚೆದೆ ತೋರಿದರು. ಇಂತಹ ಗ್ರಾಮದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವುದು ಹೆಮ್ಮೆ ಎನಿಸುತ್ತದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಈಸೂರು ಗ್ರಾಮದತ್ತ ಚಿತ್ತ ಹರಿಸಬೇಕು.

ಬೈಕ್ ರ್‍ಯಾಲಿಗೆ ಚಾಲನೆ ನೀಡಿದ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ತಾಲೂಕು ಅಧ್ಯಕ್ಷ ಡಿ.ಎಸ್. ಶಂಕರ್ ಶೇಟ್ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕರ ತ್ಯಾಗ ಮತ್ತು ಬಲಿದಾನವಿದ್ದು, ಅಂತಹ ಮಹಾತ್ಮರ ಮಾರ್ಗದರ್ಶನ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು. ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿಯಿಂದ ಈಸೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದು ಶ್ಲಾಘನೀಯವಾಗಿದೆ ಎಂದರು. ಪಟ್ಟಣದ ಶ್ರೀ ರಂಗನಾಥ ದೇವಸ್ಥಾನದಿಂದ ಆರಂಭವಾದ ಬೈಕ್ ರ್‍ಯಾಲಿ ಮುಖ್ಯರಸ್ತೆ ಮಾರ್ಗವಾಗಿ ಶಿರಾಳಕೊಪ್ಪ, ಶಿಕಾರಿಪುರ ಮಾರ್ಗವಾಗಿ ಈಸೂರು ತಲುಪಿತು. ನಂತರ ಹುತಾತ್ಮ ಸ್ಮಾರಕದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಸಮಿತಿಯ ಕಾರ್ಯಕರ್ತರು ಮತ್ತು ಸಾರ್ವಜನಿಕರು ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸಮಿತಿಯ ಉಪಾಧ್ಯಕ್ಷ ದತ್ತಾತ್ರೇಯ, ಗಣೇಶ ಓಂ ಪಿಕಲ್ಸ್, ರವಿಕುಮಾರ್, ಹರ್ಷ ಗುಡಿಗಾರ್, ಆದಿತ್ಯ, ವಿಠ್ಠಲ, ಸಾತ್ವಿಕ, ಕಿರಣ, ಅಮೋಘ, ಶೋಭರಾಜ ಮಂಚಿ, ಕೌಶಿಕ ಗೌಡ ಸೇರಿದಂತೆ ಇತರರಿದ್ದರು.

ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ವತಿಯಿಂದ ಭಾರತ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಈಸೂರಿನತ್ತ ನಮ್ಮ ಪಯಣ ಬೈಕ್ ರ್‍ಯಾಲಿಗೆ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ತಾಲೂಕು ಅಧ್ಯಕ್ಷ ಡಿ.ಎಸ್. ಶಂಕರ್ ಶೇಟ್ ಚಾಲನೆ ನೀಡಿದರು.

> ಈಸೂರಿನ ಹೋರಾಟವು ಚರಿತ್ರೆಯ ಪುಟದಲ್ಲಿ ಅಚ್ಚಳಿಯದೇ ಉಳಿಯಬೇಕು. ಈಗಾಗಲೇ ಗ್ರಾಮದಲ್ಲಿ ಈಸೂರಿನ ಹೋರಾಟಗಾರರ ಸ್ಮಾರಕ ನಿರ್ಮಿಸಲಾಗಿದೆ. ಆದರೆ, ಸ್ಮಾರಕದ ಮುಂಭಾಗ ಅಥವಾ ಒಳಾಂಗಣದಲ್ಲಿ ಹೋರಾಟಗಾರರ ಪ್ರತಿಮೆ ನಿರ್ಮಿಸಬೇಕು. ಮಾರ್ಚ್ 8ರಿಂದ 10ರವರೆಗೆ ದೇಶದಲ್ಲಿಯೇ ಕರಾಳದಿನವನ್ನಾಗಿ ಆಚರಿಸಬೇಕು.
>
> -ಜೆ.ಎಸ್. ಚಿದಾನಂದ ಗೌಡ
> ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ

# ಅಗ್ನಿವೀರ್ ನೇಮಕಕ್ಕೆ ಸಿದ್ಧತೆ

**ಶಿವಮೊಗ್ಗ:** ಅಗ್ನಿಪಥ್ ಯೋಜನೆಯಡಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ದೈಹಿಕ ಕ್ಷಮತಾ ಹಾಗೂ ವೈದ್ಯಕೀಯ ಪರೀಕ್ಷೆಗಳನ್ನು ಆ.20ರಿಂದ 31ರವರೆಗೆ ನಗರದ ನೆಹರೂ ಸ್ಟೇಡಿಯಂನಲ್ಲಿ ಆಯೋಜಿಸಲು ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಗುರುದತ್ ಹೆಗಡೆ ಹೇಳಿದರು.

ಗುರುವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿಯ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಶಿವಮೊಗ್ಗ, ದಾವಣಗೆರೆ, ಬಾಗಲಕೋಟೆ, ವಿಜಯಪುರ, ಧಾರವಾಡ, ಉತ್ತರಕನ್ನಡ, ದಕ್ಷಿಣ ಕನ್ನಡ, ಉಡುಪಿ, ಗದಗ, ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಅಭ್ಯರ್ಥಿಗಳ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಈಗಾಗಲೆ ರವಾನಿಸಲಾಗಿದ್ದು, ಪ್ರತಿ ಜಿಲ್ಲೆಗಳ ಅಭ್ಯರ್ಥಿಗಳಿಗೆ ದಿನಾಂಕ ನಿಗದಿಗೊಳಿಸಲಾಗಿದೆ ಎಂದರು.

ದೈಹಿಕ ಮತ್ತು ವೈದ್ಯಕೀಯ ಪರೀಕ್ಷೆಗಳು ನಡೆಯಲಿರುವ ನಗರದ ನೆಹರೂ ಕ್ರೀಡಾಂಗಣದಲ್ಲಿ ಆಯ್ಕೆ ಪರೀಕ್ಷೆಗೆ ಬೇಕಾಗುವ ಎಲ್ಲಾ ರೀತಿಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಸಿ.ಸಿ.ಕ್ಯಾಮರಾ ಅಳವಡಿಸಲು, ವಿದ್ಯುತ್ ಸಂಪರ್ಕ ನಿರಂತರವಾಗಿರುಂತೆ ನೋಡಿಕೊಳ್ಳಲು ಹಾಗೂ ಸೇನಾ ನೇಮಕಾತಿ ಪ್ರಾಧಿಕಾರದ ಅಧಿಕಾರಿ ಸ್ಥಳೀಯವಾಗಿದ್ದು, ಸುಗಮವಾಗಿ ಕಾರ್ಯನಿರ್ವಹಿ ಸಲು ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್, ಅಪರ ಜಿಲ್ಲಾಧಿಕಾರಿ ಸಿದ್ದಲಿಂಗ ರೆಡ್ಡಿ, ಕವಿತಾ ಯೋಗಪ್ಪನವರ್, ಡಿ.ವೈಎಸ್ಪಿ. ಸುರೇಶ್ ಉಪಸ್ಥಿತರಿದ್ದರು.

> ಈ ಸೈನಿಕ ನೇಮಕಾತಿ ರ್‍ಯಾಲಿಯಲ್ಲಿ ಭಾಗವಹಿಸಲು ನೆರೆಯ ಜಿಲ್ಲೆಗಳಿಂದ ಪ್ರತಿದಿನ 800-900 ಅಭ್ಯರ್ಥಿಗಳು ಭಾಗವಹಿಸುತ್ತಿದ್ದು, ಅವರ ಅನುಕೂಲಕ್ಕಾಗಿ ಶುದ್ಧ ಕುಡಿಯುವ ನೀರು, ನೆರಳು, ಉಟೋಪಹಾರ ಹಾಗೂ ಸ್ನಾನ-ಶೌಚಾಲಯ ಮುಂತಾದ ತುರ್ತು ಅಗತ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದ್ದು, ಅದರ ಉಸ್ತುವಾರಿಗಾಗಿ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.
>
> -ಗುರುದತ್ ಹೆಗಡೆ ಜಿಲ್ಲಾಧಿಕಾರಿ

# ನೆಹರು ಮೈದಾನದಲ್ಲಿ 78ನೇ ಸ್ವಾತಂತ್ರ್ಯೋತ್ಸವ ಆಚರಣೆ

**ಹೊಸನಗರ:** ಬಹಳ ವರ್ಷಗಳ ಹೋರಾಟ, ತ್ಯಾಗ ಮತ್ತು ನಿರ್ಣಯದ ನಂತರ ಬಾರತವು ಅಂತಿಮವಾಗಿ ಬ್ರಿಟಿಷ್ ವಸಾಹತುಶಾಹಿ ಆಡಳಿತದ ಹಿಡಿತದಿಂದ ಹೊರಬಂದ ದಿನವನ್ನು ಇಂದು ನೆನಪಿಸುತ್ತದೆ ಎಂದು ಹೊಸನಗರದ ತಹಸೀಲ್ದಾರ್ ರಶ್ಮೀ ಹಾಲೇಶ್‌ರವರು ಹೇಳಿದರು.

ಇಲ್ಲಿನ ನೆಹರು ಮೈದಾನದ ಆವರಣದಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳಿಂದ ವಂದನೆ ಸ್ವೀಕರಿಸಿ 78ನೇ ವರ್ಷದ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ಎಲ್ಲಿಯವರೆಗೆ ಪ್ರಜೆಗಳಿಗೆ ಸ್ವಾತಂತ್ರ್ಯವಿರುತ್ತದೋ ಯಾವ ದೇಶದ ಪ್ರಜೆಗಳು ಸ್ವತಂತ್ರರಾಗಿರುತ್ತಾರೋ ಅಲ್ಲಿಯವರೆಗೆ ದೇಶದ ಅಭಿವೃದ್ಧಿ ,ಪ್ರಜೆಗಳ ಅಭಿವೃದ್ಧಿ ,ನಾಡಿನ ಅಭಿವೃದ್ಧಿ , ಒಂದು ಕುಟುಂಬದ ಅಭಿವೃದ್ಧಿ ನಿರಂತರವಾಗಿ ಸಾಗುತ್ತಿರುತ್ತದೆ. ಇದಕ್ಕೆ ಇಂದಿನ ಭಾರತವೇ ಸಾಕ್ಷಿ ಇಡೀ ಪ್ರಪಂಚದಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಜತೆಗೆ ನಮ್ಮ ದೇಶದಲ್ಲಿ ಎಲ್ಲ ಜಾತಿ ಧರ್ಮದವರು ಇದ್ದು ಎಲ್ಲರೂ ನಾವೆಲ್ಲರೂ ಭಾರತೀಯರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇವೆ ಎಂದರು.

78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಣಾಧಿಕಾರಿ ನರೇಂದ್ರಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಗುರಣ್ಣ ಎಸ್ ಹೆಬ್ಬಾಳ್, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಉಮೇಶ್ ಎಸ್ ಗುಡ್ಡದ್, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಮೂರ್ತಿ, ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಬಸವಣ್ಯಪ್ಪ, ಸಬ್ ಇನ್ಸ್‌ಪೆಕ್ಟರ್ ಶಂಕರ ಗೌಡ ಪಾಟೀಲ್, ದೀಪಕ್ ಸ್ವರೂಪ್, ದೈಹಿಕ ಪರೀವಿಕ್ಷಕರಾದ ಬಾಲಚಂದ್ರರಾವ್, ನಾಡ ಹಬ್ಬಗಳ ಸಮಿತಿಯ ಸದಸ್ಯರಾದ ಎನ್ ಶ್ರೀಧರ ಉಡುಪ, ಶ್ರೀನಿವಾಸ್ ಕಾಮತ್, ರಾಜಮೂರ್ತಿ, ಶಿಕ್ಷಕರಾದ ಕಮಲಾಕರ, ಧನಂಜಯ, ಸುಹಾಸ್, ವರ್ತಕರ ಸಂಘದ ಅಧ್ಯಕ್ಷರಾದ ವಿಜೇಂದ್ರ ಶೇಟ್, ಪಟ್ಟಣ ಪಂಚಾಯತಿ ಸದಸ್ಯರುಗಳು ತಾಲ್ಲೂಕು ಕಚೇರಿಯ ಸಿಬ್ಬಂದಿ ಮಂಜುನಾಥ್ ಕಟ್ಟೆ ಚಿರಾಗ್, ರೇಣುಕಯ್ಯ, ಕೌಶಿಕ್, ಬಾಲಚಂದ್ರ ಹೊಸನಗರದ ಎಲ್ಲ ಸರಕಾರಿ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ತಾಲೂಕಿನಲ್ಲಿ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತ್ತು. ವಿದ್ಯಾರ್ಥಿ ವಿದ್ಯಾರ್ಥಿಗಳಿಂದ ದೇಶ ಭಕ್ತಿ ಗೀತೆಗಳನ್ನು ಹಾಡುವುದರ ಮೂಲಕ ಮನರಂಜನೆ ಕಾರ್ಯಕ್ರಮ ಏರ್ಪಡಿಸಲಾಗುತ್ತು.

ಹೊಸನಗರದ ನೆಹರು ಮೈದಾನದಲ್ಲಿ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವನ್ನು ತಹಸೀ ಲ್ದಾರ್ ರಶ್ಮೀ ಹಾಲೇಶ್‌ರವರ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಎಲ್ಲ ಕ್ಷೇತ್ರಗಳಲ್ಲಿ ಭಾರತ ಉತ್ತಮ ಸಾಧನೆ

**ಶಿವಮೊಗ್ಗ:** ದೇಶ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮೂಲಕ ಭಾರತ ಸ್ವಾವಲಂಬಿಯಾಗಿ ಶಕ್ತಿಶಾಲಿ ರಾಷ್ಟ್ರವಾಗಿ ರೂಪುಗೊಳ್ಳುತ್ತಿದೆ ಎಂದು ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಎನ್.ಗೋಪಿನಾಥ್ ಹೇಳಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿ, ಭಾರತ ದೇಶವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯು ದೇಶಕ್ಕಾಗಿ ಕೆಲಸ ಮಾಡಬೇಕು. ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಜತೆಯಲ್ಲಿ ದೇಶದ ಅಭಿವೃದ್ಧಿಯಲ್ಲೂ ಮಹತ್ತರ ಪಾತ್ರ ವಹಿಸಬೇಕು ಎಂದು ತಿಳಿಸಿದರು.

ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘವು ಉದ್ದಿಮೆದಾರರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದು, ಆಡಳಿತ ಮಂಡಳಿಯು ಸಂಘಟಿತ ಕೆಲಸವನ್ನು ಎಲ್ಲರೊಟ್ಟಿಗೆ ಸೇರಿ ಪ್ರಾಮಾಣಿಕವಾಗಿ ಬದ್ಧತೆಯಿಂದ ಮಾಡುತ್ತಿದೆ. ಎಲ್ಲ ರೀತಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಬಿ.ಗೋಪಿನಾಥ, ಕಾರ್ಯದರ್ಶಿ ವಸಂತ ಹೋಬಳಿದಾರ್, ಸಹ ಕಾರ್ಯದರ್ಶಿ ಜಿ.ವಿಜಯಕುಮಾರ್, ಮಾಜಿ ಅಧ್ಯಕ್ಷ ಜೆ.ಆರ್.ವಾಸುದೇವ, ಡಿ.ಎಂ.ಶಂಕರಪ್ಪ, ಕೆ.ವಿ.ವಸಂತಕುಮಾರ್, ಮಂಜೇಗೌಡ, ಸುರೇಶ್, ಜಿಲ್ಲಾ ವಿತರಕರ ಸಂಘದ ಅಧ್ಯಕ್ಷ ದೇವರಾಜ್, ಮಧುಸೂದನ್ ಐತಾಳ್, ನಟರಾಜ್, ಎಂ.ರಾಜು, ಉದಯಕುಮಾರ್, ರಂಗಪ್ಪ ಶಾಸ್ತ್ರಿ, ಪ್ರದೀಪ್ ವಿ.ಎಲಿ, ಎ.ಎಂ.ಸುರೇಶ್, ಪ್ರಶಾಂತ್ ಶಾಸ್ತ್ರಿ , ಚಂಪಾಲಾಲ್ ಉಪಸ್ಥಿತರಿದ್ದರು.

> ಸ್ವಾತಂತ್ರ್ಯ ಒಂದು ದಿನಕ್ಕೆ ಸೀಮಿತವಾಗದೇ ನಿರಂತರವಾಗಿ ನಡೆಯುವ ಪ್ರಕ್ರಿಯೆ. ಆಂತರಿಕ, ಬಾಹ್ಯ ಬೆದರಿಕೆಗಳಿಗೆ ಜಗ್ಗದೇ ಬದ್ಧತೆಯಿಂದ ಕೆಲಸ ಮಾಡುವ ಗುರಿ ಹೊಂದಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಸಂಕಲ್ಪ ಮಾಡಿ ನಮ್ಮ ಜವಾಬ್ದಾರಿ ನಿರ್ವಹಿಸೋಣ, ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಾಣ ಮಾಡೋಣ .
>
> -ಎನ್.ಗೋಪಿನಾಥ್
> ಕೈಗಾರಿಕಾ ಸಂಘದ ಅಧ್ಯಕ್ಷ

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕೈಗಾರಿಕಾ ಸಂಘದ ಅಧ್ಯಕ್ಷ ಎನ್.ಗೋಪಿನಾಥ್ ಮಾತನಾಡಿದರು.

# ವಿಐಎಸ್‌ಎಲ್‌ನಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ

**ಭದ್ರಾವತಿ:** ನಗರದ ಸೈಲ್- ವಿಐಎಸ್‌ಎಲ್ ವತಿಯಿಂದ ರಜತ ಮಹೋತ್ಸವ ಕ್ರೀಡಾಂಗಣದಲ್ಲಿ 78 ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಸೈಲ್-ವಿಐಎಸ್‌ಎಲ್ ಕಾರ್ಯಪಾಲಕ ನಿರ್ದೇಶಕ ಬಿ.ಎಲ್.ಚಂದ್ವಾನಿ ಧ್ವಜಾರೋಹಣ ನೆರವೇರಿಸಿ, ಕವಾಯತ್ತ ವೀಕ್ಷಿಸಿ, ಪಥಸಂಚಲನ ತಂಡಗಳಿಂದ ಗೌರವ ವಂದನೆ ಸ್ವೀಕರಿಸಿ, ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶಿಶ್ ರೆಡ್ಡಿ ಸಾರ್ವಜನಿಕ ಸಂಪರ್ಕ ಇಲಾಖೆಯ ಮಹಾಪ್ರಬಂಧಕ ಎಲ್.ಪ್ರವೀಣ್ ಕುಮಾರ್, ಕಾರ್ಮಿಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಅಧಿಕಾರಿಗಳ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸೌಹಾರ್ದ ಸಹಿಷ್ಣುತೆ ದೇಶದ ಮಣ್ಣಿನ ಗುಣ

**ಹೊಸನಗರ:** ಸೌಹಾರ್ದ ಸಹಿಷ್ಣುತೆ ದೇಶ ಪ್ರೇಮ ಈ ಭಾರತ ದೇಶದ ಮಣ್ಣಿನ ಭಾಗವಾಗಿದೆ ಎಂದು ಬದ್ರಿಯ ಜುಮ್ಮಾ ಮಸೀದಿಯ ಧರ್ಮಗುರುಗಳಾದ ಬದರುದ್ದೀನ್ ಝೋಹರಿ ಯವರು ಹೇಳಿದರು. ಇಲ್ಲಿನ ಟೌನ್ ಬದ್ರಿಯ ಜುಮ್ಮಾ ಮಸೀದಿಯ ಆವರಣದಲ್ಲಿ ಅದ್ದೂರಿಯಾಗಿ 78ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ಕಾರ್ಯಕ್ರಮ ಏರ್ಪಡಿಸಲಾಗಿದ್ದು ಈ ಕಾರ್ಯಕ್ರಮದಲ್ಲಿ ಮಾತನಾಡಿದರು. ನಾವು ಪೈಗಂಬರ್‌ರವರ ಮಾರ್ಗದರ್ಶನದಲ್ಲಿ ಜೀವನ ಸಾಗಿಸುತ್ತಿದ್ದು ನಮಗೆ ಈ ದೇಶದ ಜನರ ಜತೆಗೆ ಯಾವ ರೀತಿಯಲ್ಲಿ ಬದುಕಬೇಕು ಸೌಹಾರ್ದ ರೀತಿಯಲ್ಲಿ ಬದಕುವುದನ್ನು ದೇಶ ಪ್ರೇಮ ಬೆಳಸಿಕೊಂಡು ಬದುಕುವುದು ಕಲಿಸಿದ್ದಾರೆ. ಹೊಸನಗರ ಸರ್ಕಲ್ ಇನ್ಸ್‌ಪೆಕ್ಟರ್ ಗುರಣ್ಣ ಎಸ್ ಹಬ್ಬಾಳ್, ಪಟ್ಟಣ ಪಂಚಾಯತ್ ಸದಸ್ಯರಾದ ಅಶ್ವಿನಿ ಕುಮಾರ್ ಶಾಹೀನ ನಸೀರ್ ಮುಂಖಂಡರಾದ ಶ್ರೀಧರ ಉಡುಪ ಸಮಿತಿಯ ಅಹಮದ್, ಮಹಮದ್ ಆಲಿ, ಜುಬೇರ್ ಸೈಯದ್, ಯಾಸೀರ್ ಊರಿನ ಪ್ರಮುಖರಾದ ಮಹಮದ್ ಹಾಜೀ, ನಸೀರ್ ಯೂಸುಫ್, ರಫೀಕ್, ಫಾರೂಕ್ ಗಣ್ಯರು ಭಾಗವಹಿಸಿದ್ದರು. 78ನೇ ಸ್ವಾತಂತ್ರ್ಯೋತ್ಸವ ವಿಶೇಷ ಕಾರ್ಯ ಕ್ರಮವಾಗಿ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ಶುಶ್ರೂಕಿ ಶೈಲಜ ಹಾಗೂ ಆಶಾ ಕಾರ್ಯಕರ್ತೆರನ್ನು ಸನ್ಮಾನಿ ಸಲಾಯಿತು. ಕಾರ್ಯ ಕ್ರಮದಲ್ಲಿ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಮದರಸದಲ್ಲಿ ನಡೆಸಿದ ಸ್ಪರ್ಧೆ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿ ಸಲಾಯಿತು.

# ಕಾನುಕೇರಿ ಮಠದಲ್ಲಿ ಶ್ರಾವಣ ಸಂಭ್ರವ

**ಸೊರಬ:** ಶರಣರ ವಚನಗಳು ನಮ್ಮ ಬದುಕಿಗೆ ಮಾರ್ಗದರ್ಶನ ಮಾಡುವುದಷ್ಟೆ ಅಲ್ಲದೆ ಆತ್ಮದ ವಿಮರ್ಶೆಗೂ ಸಹಕಾರಿಯಾಗುತ್ತವೆ ಎಂದು ಜಡೆ ಹಿರೇಮಠ ಹಾಗೂ ಸೊರಬ ಕಾನುಕೇರಿ ಮಠದ ಶ್ರೀಘನಬಸವ ಅಮರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಕಾನುಕೇರಿ ಮಠದಲ್ಲಿ ಪಟ್ಟಣದ ಅಕ್ಕನ ಬಳಗದ ಸಹಯೋಗದಲ್ಲಿ ಶ್ರಾವಣ ಮಾಸ ಪರ್ಯಂತರವಾಗಿ ನಡೆಯುತ್ತಿರುವ ಶ್ರಾವಣ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶರಣರು ಹೇಗೆ ಬದುಕಿದರೋ ಹಾಗೆ ನುಡಿದರು. ಏನು ನುಡಿದರೋ ಹಾಗೆ ನಡೆದರು. ಎಲ್ಲರೂ ಹೀಗೆ ಇರಲು ಸಾಧ್ಯವಿಲ್ಲ. ಪುಣ್ಯ ಬೇಕೆನ್ನುವ ಮನುಷ್ಯ ಪುಣ್ಯ ಕಾರ್ಯವನ್ನು ಮಾಡಲು ಬಯಸುವುದಿಲ್ಲ. ಪಾಪ ಬೇಡವೆನ್ನುವವನು ಪಾಪ ಕಾರ್ಯವನ್ನೇ ಮಾಡುತ್ತಿರುತ್ತಾನೆ. ಇದು ವಿಪರ್ಯಾಸ. ಆದರೆ ಶರಣರು ನುಡಿದಂತೆ ನಡೆದವರು.

ಸಭೆಯಲ್ಲಿ ಬ್ರಹ್ಮ ಕುಮಾರಿ ಚೇತಕ್ಕ ಮಾತನಾಡಿದರು. ಜಾಯಮಾಲಾ ಅಣ್ಣಾಜೀಗೌಡ ನಿರೂಪಿಸಿದರು. ಅಕ್ಕನ ಬಳಗದ ಮಾತೆಯರು ವಚನ ವಾಚಿಸಿ ವಿಶ್ಲೇಷಿಸಿದರು. ಪಟ್ಟಣದ ಉದ್ಯಮಿ ಚನ್ನಬಸಪ್ಪ ಚಿನ್ನಮ್ಮ ಗುತ್ತಿ ದಾಸೋಹ ಸೇವೆ ನೆರವೇರಿಸಿದರು.

ಪಟ್ಟಣದ ಕಾನುಕೇರಿ ಮಠದಲ್ಲಿ ಅಕ್ಕನ ಬಳಗದ ಸಹಯೋಗದಲ್ಲಿ ನಡೆಯುತ್ತಿರುವ ಶ್ರಾವಣ ಸಂಭ್ರಮ ಕಾರ್ಯಕ್ರಮದಲ್ಲಿ ಶ್ರೀಘನಬಸವ ಅಮರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿದರು.

> ಶರಣರ ವಚನಗಳಲ್ಲಿ ಕಾಠಿಣ್ಯವಿಲ್ಲ. ವ್ಯಾಕರಣದ ಗೋಜಲಿಲ್ಲ. ಶಬ್ದದ ಡಾಂಭಿಕತೆ ಇಲ್ಲ. ಓದಲು ಸರಳ ಸರಾಗ. ಆದರೆ ಆಚರಣೆಗೆ ಕಷ್ಟಸಾಧ್ಯ. ಇವು ಕನ್ನಡದ ಮಂತ್ರಗಳು. ಕನ್ನಡದ ಉಪನಿಷತ್ತುಗಳು. ಸಂಸಾರಿಕ ಗೊಂದಲದಲ್ಲಿ ಇದ್ದವರಿಗೆ ವಚನಗಳು ಶಾಂತಿಯ ಮಾರ್ಗವನ್ನು ಬೋಧಿಸುತ್ತವೆ. ಜಾತಿ ಮತವೆನ್ನದೆ ಎಲ್ಲರೂ ಈ ಶ್ರಾವಣ ಸಂಭ್ರಮದಲ್ಲಿ ಪಾಲ್ಗೊಂಡು ಶರಣರ ಜೀವನ ದರ್ಶನ ಮಾಡಿಕೊಳ್ಳಬೇಕು.
>
> -ಅಮರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು,ಕಾನುಕೇರಿ ಮಠ ಸೊರಬ

# ಸುಬ್ಬಯ್ಯ ಕಾಲೇಜಿನಲ್ಲಿ ಸ್ವಾತಂತ್ರ್ಯೋತ್ಸವ

**ಶಿವಮೊಗ್ಗ:** ಭಾರತದ ದೇಶವನ್ನು ಭವಿಷ್ಯ ಯುವ ಪೀಳಿಗೆಯ ಮೇಲೆ ಅವಲಂಭಿತವಾಗಿದ್ದು, ಯುವ ಸಮೂಹಕ್ಕೆ ರಾಷ್ಟ್ರದ ದಿಕ್ಕನ್ನೇ ಬದಲಾವಣೆ ಮಾಡುವ ಶಕ್ತಿಯಿದೆ ಎಂದು ಸುಬ್ಬಯ್ಯ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಸಿದ್ದಲಿಂಗಪ್ಪ ಅಭಿಪ್ರಾಯಪಟ್ಟರು. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ನಮ್ಮ ದೇಶದ ಯುವಕರಿಗೆ ರಾಷ್ಟ್ರವನ್ನು ಬದಲಾಯಿಸುವ ಸಾಮರ್ಥ್ಯವಿದೆ. ಭವಿಷ್ಯವು ಯುವ ಪೀಳಿಗೆಯ ಮೇಲೆ ಅವಲಂಬಿತವಾಗಿದೆ ಎಂದು ಸರಿಯಾಗಿ ಹೇಳಿದಂತೆ. ಆದ್ದರಿಂದ ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು ನಮ್ಮ ಕರ್ತವ್ಯ ಮತ್ತು ನಮ್ಮ ದೇಶವನ್ನು ಉತ್ತಮಗೊಳಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವುದು. ಸ್ವಾತಂತ್ರ್ಯ ದಿನಾಚರಣೆಯ ಪ್ರಮುಖ ಉದ್ದೇಶವೆಂದರೆ ನಮ್ಮ ಯುವಕರನ್ನು ಜಾಗೃತಗೊಳಿಸುವುದಾಗಿದೆ ಎಂದರು. ಬ್ರಿಟಿಷರ ಕಪಿಮುಷ್ಠಿಯಿಂದ ನಮ್ಮ ದೇಶ ಹೇಗೆ ಸ್ವಾತಂತ್ರ್ಯ ಪಡೆಯಿತು ಎಂಬುದನ್ನು ಅವರಿಗೆ ತಿಳಿಸುವುದು. ಸುಬ್ಬಯ್ಯ ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾದ ಡಾ.ವನಮಾಲಾ ಸತೀಶ್ ಸೇರಿದಂತೆ ಹಲವರು ಇದ್ದರು. ವಿದ್ಯಾರ್ಥಿಗಳಿಂದ ರಾಷ್ಟ್ರಭಕ್ತಿ ಪ್ರೇರೇಪಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು.

ವಿಶ್ವವಾಣಿ
# ಆರಾಮ
@vishwavaninews ಬೆಂಗಳೂರು | ಶುಕ್ರವಾರ 16 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

# ಫೋಟೋ ಭಾಷೆ ಬಲ್ಲಿರಾ?

## ಚಿತ್ತ ವಿಹಾರ

### ಪ್ರಯತ್ನದ ಫಲವೇ ಯಶಸ್ಸು

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಎನ್ನುವುದು ಅಷ್ಟು ಸರಳವಾಗಿ ಎಲ್ಲರ ಕೈಗೆಟಕುವ ಅಗ್ಗದ ವಸ್ತುವಲ್ಲ. ಇಲ್ಲಿ ಎಲ್ಲದಕ್ಕೂ ಸ್ಪರ್ಧೆ ಇರಲೇಬೇಕು. ಸ್ಪರ್ಧೆ ಇರದೇ ಹೋದರೆ ಯಶಸ್ಸಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲದಂತಾಗುತ್ತೆ. ತೊಡುವ ಚಪ್ಪಲಿಯಿಂದ ತಿನ್ನುವ ಅನ್ನದವರೆಗೂ ಸ್ಪರ್ಧೆಯಿದೆ. ಸ್ಪರ್ಧೆ ಇರದ ಕ್ಷೇತ್ರವೇ ಇಲ್ಲ. ಪ್ರಯತ್ನ ಎನ್ನುವುದು ಮೂರೇ ಅಕ್ಷರವಾದರೂ ಅದರ ಮಹತ್ವ ತುಂಬಾನೇ ದೊಡ್ಡದು. ಯಶಸ್ಸು ಸಾಗರದಂತೆ ವಿಶಾಲ. ಶಿಖರದಷ್ಟು ಎತ್ತರ. ಈ ಆಳವಾದ ಸಾಗರವನ್ನು ಈಜಲು, ಉತ್ತುಂಗದ ಶಿಖರವನ್ನು ಹತ್ತಲು ಪ್ರಯತ್ನ ಎನ್ನುವ ಪ್ರಬಲ ಅಸ್ತ್ರವೇ ಸಾಕು.

ಸ್ವಯಂ ನಿಯಂತ್ರಣ ಮತ್ತು ನಿರಂತರ ಪರಿಶ್ರಮವೇ ಯಶಸ್ಸಿನ ಮಂತ್ರವಾಗಿದೆ. ಸತತ ಪ್ರಯತ್ನವೇ ನಮ್ಮೆಲ್ಲ ಯಶಸ್ಸುಗಳ ಮೂಲಬೇರು. ಹಗಲಿನ ಹಿಂದೆ ರಾತ್ರಿ, ರಾತ್ರಿಯ ಹಿಂದೆ ಹಗಲು ಇರುವಂತೆ. ಪ್ರಯತ್ನದ ಹಿಂದೆ ಯಶಸ್ಸು, ಯಶಸ್ಸಿನ ಹಿಂದೆ ಪ್ರಯತ್ನವಿರುತ್ತದೆ. ಪ್ರಯತ್ನಕ್ಕೆ ಮನಸ್ಸು ಮಾಡಬೇಕು. ಅದೃಷ್ಟವಿದ್ದರೂ, ಅಕಸ್ಮಾತ್ ಆ ಕೆಲಸ ಕುರಿತು ಮನಸ್ಸು ಮಾಡದೇ ಆಲಸಿಗಳಾಗಿ, ಗೊರಕೆ ಹೊಡೆಯುತ್ತಾ ಕುಳಿತರು, ಯಶಸ್ಸು ನಮ್ಮಿಂದ ದಿನದಿಂದ ದಿನಕ್ಕೆ ದೂರಕ್ಕೆ ಹೋಗುತ್ತದೆ. ಮನಸ್ಸು ಮಾತ್ರ ಎಲ್ಲದರಲ್ಲಿಯೂ ಚಂಚಲೆ. ಅವಳ ಮಾತುಗಳನ್ನು ಪುರಸ್ಕರಿಸದೆ ಸಾರಾಸಗಟಾಗಿ ತಿರಸ್ಕರಿಸಬೇಕು. ಅದೇ ಮೆದುಳು ಸದಾಕಾಲ ಸಕ್ರಿಯ, ಕ್ರಿಯಾಶೀಲ. ಇವಳ ಮಾತುಗಳನ್ನು ಪುರಸ್ಕರಿಸಿದರೆ ಯಶಸ್ಸು ನಮ್ಮ ಕರತಲದಲ್ಲಿರುತ್ತದೆ.

ಪ್ರಯತ್ನಿಸದೇ ಯಶಸ್ಸಿನ ಕನಸು ಕಾಣುವುದು ಶುದ್ಧ ಮೂರ್ಖತನ. ಕನಸುಗಳು ನನಸಾಗಲು ಪ್ರಯತ್ನಿಸಲೇಬೇಕು. ನಮ್ಮ ಪ್ರಾಮಾಣಿಕ ಪ್ರಯತ್ನದ ಎದುರು 'ಸೋಲು' ಎಂಬ ಪದ ಮತ್ತು ಪರಿಕಲ್ಪನೆಯು, ತಾನೇ ಸೋತು ಶರಣಾಗದೆ ಬೇರೆ ದಾರಿಯೇ ಇಲ್ಲ. ಮಹಾನ್ ದಾರ್ಶನಿಕ ಸ್ವಾಮಿ ವಿವೇಕಾನಂದರು ಹೇಳುವಂತೆ 'ಪ್ರಯತ್ನವೆಂಬ ಚಂದ್ರನನ್ನು ಬೆಳಗಿದರೆ, ಯಶಸ್ಸು ಎಂಬ ಬೆಳದಿಂಗಳು ಸಿಗುತ್ತದೆ' ಎನ್ನುವ ಮಾತು ಈ ಸಮಯದಲ್ಲಿ ಅಕ್ಷರಶ: ಅರ್ಥವತ್ತಾದದ್ದು.

• ರಂಗನಾಥ್ ಗುಡಿಮನಿ

## ಇತಿಹಾಸಕ್ಕೊಂದು ಕಿಂಡಿ

ಬ್ರಿಟಿಷ್ ಪೊಲೀಸರ ವಿರುದ್ಧ ಹೋರಾಡುತ್ತಲೇ 27.2.1931ರಂದು ಹುತಾತ್ಮರಾದ ಚಂದ್ರಶೇಖರ ಆಜಾದ್ ಅವರು, ತಾನು ಸಾಯುವ ದಿನ ತನ್ನನ್ನು ಸುತ್ತುವರಿದ ಬ್ರಿಟಿಷ್ ಪೋಲೀಸರತ್ತ ಗುಂಡು ಹಾರಿಸಿ ಮೂವರು ಪೊಲೀಸರನ್ನು ಸಾಯಿಸಿದ್ದರು! ಆದರೆ, ಹೆಚ್ಚಿನ ಸಂಖ್ಯೆಯಲ್ಲಿದ್ದ



ಪೊಲೀಸರು ಇವರತ್ತ ಎಡೆಬಿಡದೆ ಗುಂಡುಹಾರಿಸಿದರು. ಮರವೊಂದರ ಹಿಂದೆ ನಿಂತು, ಪೊಲೀಸರತ್ತ ಗುಂಡುಹಾರಿಸುತ್ತಿದ್ದ ಆಜಾದ್ ಜತೆಯಲ್ಲಿ, ಅಂದು ಇನ್ನೊಬ್ಬ ಕ್ರಾಂತಿಕಾರಿ ಸುಖದೇವ್ ರಾಜ್ ಇದ್ದರು. ತಾನು ಪೊಲೀಸರನ್ನು ಎದುರಿಸುವಾಗ, ರಾಜ್ ತಪ್ಪಿಸಿಕೊಳ್ಳಲು ಆಜಾದ್ ಸಹಾಯ ಮಾಡಿದ್ದರು. ನೆಹರೂ ಅವರು ತಮ್ಮ ಆತ್ಮಕಥೆಯಲ್ಲಿ ಬರೆದಿರುವಂತೆ, ಆಜಾದ್ ಅವರು ಸಾಯುವ ಕೆಲವು ವಾರಗಳ ಮುಂಚೆ ನೆಹರೂ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ್ದರು. ಗಾಂಧಿ -ಇರ್ವಿನ್ ಒಪ್ಪಂದದ ಪ್ರಕಾರ (ಉಪ್ಪಿನ ಸತ್ಯಾಗ್ರಹದ ನಂತರದ ಒಪ್ಪಂದ) ತನ್ನನ್ನು ತಪ್ಪಿತಸ್ಥ ಅಲ್ಲ ಎಂದು ಪರಿಗಣಿಸಲು ಸಾಧ್ಯವೇ ಎಂದು ವಿಚಾರಿಸಿದ್ದರು. ಆದರೆ, ಆಜಾದ್ ಮತ್ತು ಅವರ ತಂಡದ ಹೋರಾಟದ ವಿಧಾನವು ಸರಿಯಲ್ಲ ಎಂದೇ ನೆಹರೂ ಆತ್ಮಕತೆಯಲ್ಲಿ ಬರೆದುಕೊಂಡಿದ್ದಾರೆ.

## ನೀವೂ ಬರೆಯಬಹುದು

**ನಮ್ಮ ವಿಳಾಸ:**
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

'ಫೋಟೋ' ಎಂಬುದು ಒಂದು ಭಾಷೆ; ಆ ಭಾಷೆಯ ಮೂಲಕ ಸಾವಿರ ಭಾವನೆಗಳನ್ನು ವ್ಯಕ್ತಪಡಿಸಬಹುದು. ಸಾವಿರ ಪದಗಳಿಗೆ ಒಂದು ಫೋಟೋ ಸಮಾನ ಎನ್ನುವ ಮಾತೂ ಇದೆ! ಕಲಾತ್ಮಕ ಫೋಟೋಗಳು ವ್ಯಕ್ತಪಡಿಸುವ ಭಾವನೆಗಳು ಮನವನ್ನು ತಟ್ಟಿದರೆ, ಅದೇ ಆ ಫೋಟೋದ ಸಾರ್ಥಕ್ಯ!

• ಬರಹ: ಶಶಾಂಕ್ ಮುದೂರಿ
• ಚಿತ್ರಗಳು: ಕೆ.ಎಸ್.ಮುರುಗೇಂದ್ರ

ಇನ್ನೇನು ಮೂರು ದಿನ - ವಿಶ್ವ ಫೋಟೋಗ್ರಾಫಿ ದಿನ ಬಂದೇ ಬಿಟ್ಟಿತು! (ಆಗಸ್ಟ್ 19) ಒಂದು ಚಿತ್ರವು ಸಾವಿರ ಪದಗಳಿಗೆ ಸಮ ಎಂಬ ಮಾತನ್ನು, ಇನ್ನಷ್ಟು ಸ್ಪಷ್ಟವಾಗಿ, ನಿಖರವಾಗಿ, ವರ್ಣ ರಂಜಿತವಾಗಿ ಬಿಂಬಿಸುವ 'ಫೋಟೋಗ್ರಾಫಿ' ತಂತ್ರಜ್ಞಾನವು, ಕ್ರಮೇಣ ಕಲೆಯ ಒಂದು ಪ್ರಕಾರವಾಗಿ ಬದಲಾಗಿದೆ. ಬದುಕಿನ ಮತ್ತು ಪ್ರಕೃತಿಯ ವಿವಿಧ ಮಗ್ಗುಲುಗಳನ್ನು ಫೋಟೋಗ್ರಾಫಿಯ ಸಹಾಯದಿಂದ ವಾಸ್ತವಸ್ವರೂಪವಾಗಿ ಸೆರೆಹಿಡಿದಷ್ಟು ಬೇರಾವ ಮಾಧ್ಯಮದಿಂದಲೂ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಯೋಚಿಸಿದರೆ, ಫೋಟೋಗ್ರಾಫಿಗೆ ವಿಶಾಲ ವ್ಯಾಪ್ತಿ ಇದೆ, ಹಲವು ಆಯಾಮಗಳಿವೆ, ಅನಂತ ಅವಕಾಶಗಳಿವೆ.

ಈಗ ಒಂದೆರಡು ದಶಕಗಳಿಂದ ಫೋಟೋಗ್ರಾಫಿಯಲ್ಲಿ ನಿಜಕ್ಕೂ ಕ್ರಾಂತಿಯಾಗಿದೆ. ಇಪ್ಪತ್ತನೆಯ ಶತಮಾನದ ಕೊನೆಯ ತನಕ ಹೆಚ್ಚು ಪ್ರಚಾರದಲ್ಲಿದ್ದದ್ದು ಪ್ರಿಂಟ್ ಫೋಟೋಗ್ರಾಫಿ. ಇಪ್ಪತ್ತೊಂದನೆಯ

### ನಿಮ್ಮ ಮೊಬೈಲ್ ಕ್ಲಿಕ್!

ಆಗಸ್ಟ್ 19ನೇ ದಿನಾಂಕವನ್ನು 'ವಿಶ್ವ ಛಾಯಾಗ್ರಹಣ ದಿನ' ಎಂದು ಆಚರಿಸಲಾಗುತ್ತಿದೆ. ಈ ದಿನದ ಸಂಭ್ರಮದಲ್ಲಿ ಪಾಲ್ಗೊಳ್ಳಲು ನಿಮಗೂ ಅವಕಾಶವಿದೆ! ನೀವು ಮೊಬೈಲ್ ಅಥವಾ ಸ್ಮಾರ್ಟ್‌ಫೋನ್‌ನಲ್ಲಿ ಕಲಾತ್ಮಕ ಎನಿಸುವ ಫೋಟೋ ಕ್ಲಿಕ್ಕಿಸುವ ಹವ್ಯಾಸ ಉಳ್ಳವರೇ? ನಿಮ್ಮ ಕೌಶಲದ ಒಂದು ಉದಾಹರಣೆಯನ್ನು ನಮಗೆ ಕಳಿಸಿ! ಭೂದೃಶ್ಯ, ಹಕ್ಕಿ, ವನ್ಯಜೀವಿ, ಪ್ರವಾಸ, ಜನಜೀವನ ಮೊದಲಾದ ಚಿತ್ರಗಳನ್ನು ನೀವು ಕಳಿಸಬಹುದು. ನೀವು ಕ್ಲಿಕ್ಕಿಸಿದ, ಉತ್ತಮ ಎನಿಸುವ ಒಂದು ಚಿತ್ರವನ್ನು ನಮಗೆ ಮೇಲ್ ಮಾಡಿ. ಸೂಕ್ತ ಎನಿಸಿದರೆ ಪ್ರಕಟಿಸುತ್ತೇವೆ. ನಮ್ಮ ಇಮೇಲ್: vishwavanimagazine@gmail.com

-ಸಂ.

ಶತಮಾನದಲ್ಲಿ ಡಿಜಿಟಲ್ ಫೋಟೋಗ್ರಾಫಿಯು ಬಹಳ ಬೆಳೆದಿದೆ; ಈಚಿನ ವರ್ಷಗಳಲ್ಲಂತೂ, ಡಿಜಿಟಲ್ ಫೋಟೋಗ್ರಾಫಿಯು ನಾನಾ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಪ್ರಿಂಟ್ ಫೋಟೋಗ್ರಾಫಿಯ ದಿನಗಳಲ್ಲಿ ಇದ್ದ ಕಲಾತ್ಮಕ ಅಂಶವು, ಇಂದು ಸಾವಿರ ಆಯಾಮದಲ್ಲಿ ತೆರೆದುಕೊಂಡಿದೆ.

### ಒಮ್ಮೆಗೇ ಸಾವಿರಾರು ಫೋಟೋ

ಫಿಲಂ ರೋಲ್ ಮತ್ತು ಪ್ರಿಂಟ್ ಕಾಲದಲ್ಲಿ, ಒಂದು ರೋಲ್ ಫಿಲಂಗೆ ಇಂತಿಷ್ಟೇ ಫೋಟೋ ತೆಗೆಯಬಹುದು ಎಂಬ ಮಿತಿ ಇತ್ತು. ಇಂದು ಡಿಜಿಟಲ್ ಯುಗದಲ್ಲಿ, ಒಮ್ಮ ವ್ಯಕ್ತಿಯು ಕಿರು ಅವಧಿಯಲ್ಲಿ ಅಕ್ಷರಶಃ ಸಾವಿರಾರು ಫೋಟೋ ತೆಗೆಯಬಹುದು. ಆ ಮೂಲಕ, ಫೋಟೋಗಳಲ್ಲಿ ಕಲಾತ್ಮಕ ಅಂಶಗಳನ್ನು ಒಡಮೂಡಿಸುವ ಅವಕಾಶ ಅಧಿಕಗೊಂಡಿದೆ ಎಂಬುದೂ ನಿಜ.

ಈಚಿನ ಒಂದು ದಶಕದಲ್ಲಿ, ಡಿಜಿಟಲ್ ಫೋಟೋಗ್ರಾಫಿಯಲ್ಲಿ ಇನ್ನೊಂದು ಬೆಳವಣಿಗೆಯಾಗಿದೆ. ಅದೇಂದರೆ, ಮೊಬೈಲ್‌ನಲ್ಲಿ ಇರುವ ಶಕ್ತಿ ಶಾಲಿ ಕ್ಯಾಮರಾಗಳು! ಕೆಲವೇ ದಶಕಗಳ ಹಿಂದೆ, ನಮ್ಮ ದೇಶದಲ್ಲಿ ಅಲ್ಲಲ್ಲಿ ಹಲವು ಫೋಟೋಗ್ರಾಫರ್‌ಗಳಿದ್ದರು; ಇಂದು ಕೋಟ್ಯಂತರ ಫೋಟೋಗ್ರಾಫರ್‌ಗಳಿದ್ದಾರೆ! ಕ್ಯಾಮೆರಾ ಹೊಂದಿರುವ ವ್ಯಕ್ತಿಗಳೆಲ್ಲರೂ ಇಂದು ಫೋಟೋಗ್ರಾಫರ್!

ಇಂದು ಒಬ್ಬ ವ್ಯಕ್ತಿಯು ಫೋಟೋಗ್ರಾಫಿಯಲ್ಲಿ ತಕ್ಕಮಟ್ಟಿಗಿನ ಕೌಶಲ್ಯ ತೋರಲು, ಉತ್ತಮ ಫೋಟೋ ತೆಗೆಯಲು ಪ್ರತ್ಯೇಕ ಕ್ಯಾಮೆರಾ ಬೇಕೆಂದಿಲ್ಲ; ಬದಲಿಗೆ, ಗುಣಮಟ್ಟದ ಫೋಟೋ ಕ್ಲಿಕ್ಕಿಸುವ ಹಲವು ಸ್ಮಾರ್ಟ್‌ಫೋನ್‌ಗಳು ಇಂದು ಲಭ್ಯ.

ಜತೆಗೆ, ಕ್ಲಿಕ್ ಮಾಡಿದ ಫೋಟೋಗಳನ್ನು ಮೊಬೈಲ್‌ನಲ್ಲಿ ಎಡಿಟ್, ಪರಿಷ್ಕರಣೆ, ತಪ್ಪುತಿದ್ದುವಿಕೆ ಎಲ್ಲವನ್ನೂ ಮಾಡಬಹುದು! ಕ್ಯಾಮೆರಾದ ಫೋಟೋಗಳ ಗುಣಮಟ್ಟವನ್ನು ಸ್ಮಾರ್ಟ್‌ಫೋನ್‌ಗಳಲ್ಲಿ ನಿರೀಕ್ಷಿಸುವುದು ಕಷ್ಟವಾದರೂ, ಸಾಕಷ್ಟು ಉತ್ತಮ ಮತ್ತು ಕಲಾತ್ಮಕ ಫೋಟೋಗಳನ್ನು ಸ್ಮಾರ್ಟ್‌ಫೋನ್‌ನಲ್ಲಿ ಸೆರೆಹಿಡಿದವರಿದ್ದಾರೆ!

ಅದಕ್ಕೇ ಹೇಳುವುದು, 'ಉತ್ತಮ ಫೋಟೋ ತೆಗೆಯಲು ಬೆಲೆಬಾಳುವ ಕ್ಯಾಮರಾವು ಅತ್ಯಗತ್ಯ ಎನ್ನಲಾಗದು, ಬದಲಿಗೆ, ಕ್ಯಾಮೆರಾ ಹಿಡಿದಿರುವ ವ್ಯಕ್ತಿಯ ಕೌಶಲವೇ ಹೆಚ್ಚು ಮುಖ್ಯ'.

# ಆಂಧ್ರದಲ್ಲೊಂದು ಚನ್ನಪಟ್ಟಣ

• ಮಂಜುನಾಥ ಡಿ. ಎಸ್.

ಭಾರತದ ಕರಕುಶಲ ಸಂಸ್ಕೃತಿಯ ಪರಂಪರೆ ತನ್ನ ವಿಭಿನ್ನ ಶೈಲಿ ಹಾಗು ಸೌಂದರ್ಯದಿಂದಾಗಿ ವಿಶೇಷ ಮಾನ್ಯತೆ ಗಳಿಸಿದೆ. ಇಂತಹ ಪರಂಪರೆಯನ್ನು ಬಿಂಬಿಸುವ ಒಂದು ಗ್ರಾಮ ಆಂಧ್ರ ಪ್ರದೇಶದ ಕೊಂಡಪಲ್ಲಿ. ವಿಜಯವಾಡದ ಸಮೀಪದಲ್ಲಿರುವ ಕೊಂಡಪಲ್ಲಿ ಮರದ ಬೊಂಬೆಗಳ ಹಾಗು ಆಟಿಕೆಗಳ ತಯಾರಿಕಾ ಕೇಂದ್ರವಾಗಿದೆ.

ಕೊಂಡಪಲ್ಲಿ ಬೊಮ್ಮಲು ಎಂದು ಕರೆಯಲ್ಪಡುವ ಬೊಂಬೆಗಳು ಮತ್ತು ಆಟಿಕೆಗಳು ಈ ಪ್ರದೇಶದ ಸಾಂಸ್ಕೃತಿಕ ಪರಂಪರೆ ಮತ್ತು ಸಾಂಪ್ರದಾಯಿಕ ಕರಕುಶಲತೆಗೆ ಸಾಕ್ಷಿಯಾಗಿವೆ. ಕೊಂಡಪಲ್ಲಿ ಬೊಂಬೆಗಳಿಗೆ ಸುಮಾರು ನಾನೂರು ವರ್ಷಗಳ ಇತಿಹಾಸವಿದೆ. ಹದಿನಾರನೆಯ ಶತಮಾನದಲ್ಲಿ ರಾಜಾಸ್ತಾನದಿಂದ ಕೊಂಡಪಲ್ಲಿಗೆ ವಲಸೆ ಬಂದ ಆರ್ಯಕ್ಷತ್ರಿಯರು ಇಲ್ಲಿ ಮರದ ಬೊಂಬೆಗಳ ತಯಾರಿಕೆಯನ್ನು ಪ್ರಾರಂಭಿಸಿದರೆಂದು ತಿಳಿದುಬರುತ್ತದೆ. ಶಿವನಿಂದ ಕರಕುಶಲ ಕಲೆಯ ವರ ಪಡೆದ ಮುಕ್ತಋಷಿ ಈ ಬೊಂಬೆಗಳ ತಯಾರಿಕೆಯ ಮೂಲಪುರುಷರೆಂದು ಭಾವಿಸಲಾಗಿದೆ.

ಈ ಆಟಿಕೆಗಳನ್ನು ತಯಾರಿಸುವ ಪ್ರಕ್ರಿಯೆಗೆ ಕೌಶಲ್ಯ ಹಾಗು ತಾಳ್ಮೆ ಅಗತ್ಯ. ಇದು ಶ್ರಮದಾಯಕ ಚಟುವಟಿಕೆಯೂ ಹೌದು. ಕೊಂಡಪಲ್ಲಿಯಿಂದ ಸುಮಾರು 25 ಕಿಲೋಮೀಟರ್ ದೂರದ ಅರಣ್ಯದಲ್ಲಿ ಬೆಳೆಯುವ 'ತೆಲ್ಲ ಪೊನಿಕಿಟಿ ಎಂಬ ಮೃದುವಾದ ಮರದಿಂದ ಈ ಬೊಂಬೆಗಳನ್ನು / ಆಟಿಕೆಗಳನ್ನು ತಯಾರಿಸುತ್ತಾರೆ. ಈ ಬೊಂಬೆಗಳ / ಆಟಿಕೆಗಳ ತಯಾರಿಕೆ ವಿವಿಧ ಹಂತಗಳಲ್ಲಿ ಸಾಗುತ್ತದೆ. ಮೊದಲ ಹಂತದಲ್ಲಿ ಬೊಂಬೆಗಳ / ಆಟಿಕೆಗಳ ಭಾಗಗಳನ್ನು ಪ್ರತ್ಯೇಕವಾಗಿ ಕೆತ್ತಲಾಗುತ್ತದೆ. ನಂತರ ಈ ಬಿಡಿ

**ವಿಜಯವಾಡ ಸನಿಹದ ಕೊಂಡಪಲ್ಲಿ ಗ್ರಾಮದ ಈ ಪಾರಂಪರಿಕ ಗೊಂಬೆಗಳಿಗೆ ಜಿ.ಐ.ಟ್ಯಾಗ್ ಸಹ ದೊರಕಿದೆ.**

ಭಾಗಗಳನ್ನು ಜೋಡಿಸಿ ಕಲಾಕೃತಿಯನ್ನು ನಿರ್ಮಿಸಲಾಗುತ್ತದೆ. ಇದಾದ ಮೇಲೆ ಮಕ್ಕು ಎಂದು ಕರೆಯಲಾಗುವ - ಹುಣಿಸೆ ಬೀಜದ ಪುಡಿ ಮತ್ತು ಮರದ ಹೊಟ್ಟಿನ ಮಿಶ್ರಣದಿಂದ ತಯಾರಿಸಿದ - ಅಂಟನ್ನು ಇಡೀ ಕಲಾಕೃತಿಯ ಮೇಲೆ ಲೇಪಿಸಲಾಗುತ್ತದೆ. ಈ ಅಂಟು ಒಣಗಿದ ಮೇಲೆ ವರ್ಣಲೇಪನ ಮಾಡುವ ಮೂಲಕ ಕಲಾಕೃತಿಗಳಿಗೆ ಜೀವ ತುಂಬಲಾಗುತ್ತದೆ.

ಪೌರಾಣಿಕ ಪಾತ್ರಗಳು, ಪ್ರಾಣಿಗಳು, ಪಕ್ಷಿಗಳು, ಎತ್ತಿನ ಗಾಡಿ, ಗ್ರಾಮೀಣ ಜೀವನದ ಚಿತ್ರಗಳು, ರಾಷ್ಟ್ರ ಲಾಂಛನಗಳು, ಮುಂತಾದುವುಗಳನ್ನು ಆಧರಿಸಿದ ಮರದ ಕಲಾಕೃತಿಗಳು ಚಿತ್ತಾಕರ್ಷಕವಾಗಿಯೂ, ನೇತ್ರಾನಂದಕರವಾಗಿಯೂ ಇರುತ್ತವೆ. ದಶಾವತಾರ ಮತ್ತು ಡ್ಯಾನ್ಸಿಂಗ್ ಡಾಲ್ ಕೊಂಡಪಲ್ಲಿಯ ವೈಶಿಷ್ಟ್ಯಪೂರ್ಣ ಉತ್ಪನ್ನಗಳಾಗಿವೆ. ಕೊಂಡಪಲ್ಲಿಯ ಉತ್ಪನ್ನಗಳಿಗೆ ಜಿ.ಐ. (ಜಿಯೊಗ್ರಾಫಿಕಲ್ ಐಡೆಂಟಿಫಿಕೇಷನ್) ಟ್ಯಾಗ್ ಸಹ ದೊರಕಿದೆ.

ಈ ಬೊಂಬೆಗಳನ್ನು ಹಬ್ಬಗಳ ಆಚರಣೆಯಲ್ಲಿ ಮಾತ್ರವಲ್ಲದೆ ಜಾನಪದ ಕಥೆಗಳ ಮತ್ತು ಮಹಾಕಾವ್ಯಗಳ ನಿರೂಪಣೆಯಲ್ಲಿಯೂ ಬಳಸಲಾಗುತ್ತದೆ. ಗೃಹಾಲಂಕಾರದಲ್ಲೂ ಕೊಂಡಪಲ್ಲಿಯ ಕರಕುಶಲ ವಸ್ತುಗಳು ಮುಂಚೂಣಿಯಲ್ಲಿವೆ. ವಿದೇಶಗಳಿಗೂ ರಫ್ತಾಗುವುದು ಇವುಗಳ ಜನಪ್ರಿಯತೆಯ ಪುರಾವೆಯಾಗಿದೆ.

ಮರೆಯಾಗುತ್ತಿದ್ದ ಈ ಪಾರಂಪರಿಕ ಕಲೆಗೆ ಮರುಹುಟ್ಟು ನೀಡುವಲ್ಲಿ ಲ್ಯಾಂಕೋ ಇನ್ಸ್ಟಿಟ್ಯೂಟ್ ಆಫ್ ಜನರಲ್ ಹ್ಯುಮಾನಿಟೇರಿಯನ್ ಟ್ರಸ್ಟ್ ನೆರವಾಗಿದೆ.

ಬೆಟ್ಟದ ತಪ್ಪಲಿನಲ್ಲಿರುವ ಈ ಗ್ರಾಮದಲ್ಲಿನ ಸುಮಾರು ಎಂಬತ್ತು ಕುಟುಂಬಗಳು ಬೊಂಬೆಗಳ ತಯಾರಿಕೆ ಹಾಗು ಮಾರಾಟದಲ್ಲಿ ನಿರತವಾಗಿವೆ. ಕೊಂಡಪಲ್ಲಿಯ ಭೇಟಿ ಒಡಿಶಾ ರಾಜ್ಯದ ರಘುರಾಜಪುರ ಕಲಾಗ್ರಾಮವನ್ನು ನೆನಪಿಸಿತು. ಅಲ್ಲದೆ ಇದನ್ನು 'ಆಂಧ್ರಪ್ರದೇಶದ ಚನ್ನಪಟ್ಟಣ' ಎನ್ನಬಹುದಲ್ಲವೆ ಎಂಬ ಆಲೋಚನೆಯನ್ನೂ ಹುಟ್ಟು ಹಾಕಿತು.

# ಶಾಂಡೆಲಿಯರ್ ಟ್ರೀ

• ಡಾ. ರಾಜಗೋಪಾಲ್ ಪಟ್ಟಾಜೆ, ಉಡುಪಿ

ಭೂಮಿ ಆಕಾಶಗಳ ಅಂತರವನ್ನು ಅಳೆಯಲೋ ಎಂಬಂತೆ ಭವ್ಯವಾಗಿ ಎದ್ದುನಿಂತ ರೆಡ್ ವುಡ್ ಟ್ರೀ - ಇದರ ಬಗೆಗೆ ಹಲವು ವರ್ಷಗಳ ಕಾಲ ಕಾಲೇಜು ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದರೂ ಇದರ ಪ್ರತ್ಯಕ್ಷ ದರುಶನ ಒಂದು ದಿನ ನನಗಾಗಬಹುದು ಎಂದು ಎಣಿಸಿರಲಿಲ್ಲ. ಇತ್ತೀಚೆಗೆ ಅಮೆರಿಕೆಯ ಕ್ಯಾಲಿಫೋರ್ನಿಯಾದ ಮಗನ ಮನೆಗೆ ಹೋಗಿದ್ದಾಗ ಅವಕಾಶ ಒದಗಿ ಬಂತು.

ಶಾಂಡೆಲಿಯರ್ ಟ್ರೀ ಅಥವಾ ಡ್ರೈವ್ ಥ್ರೂ ಟ್ರೀ ಇರುವುದು ಕ್ಯಾಲಿಫೋರ್ನಿಯಾ ಪ್ರಾಂತ್ಯದಲ್ಲಿ. ಇದು ಜಗತ್ತಿನ ಪ್ರಸಿದ್ಧ ಕುತೂಹಲಕಾರಿ ಮರಗಳಲ್ಲಿ ಒಂದು. ಪ್ರಾಕೃತಿಕ ಅದ್ಭುತದ ಜೊತೆ ಮಾನವನ ಕುತೂಹಲ ಬೆಸೆದ ನೋಟ.

ಇದರ ಸಾಮಾನ್ಯ ಹೆಸರು ರೆಡ್ ವುಡ್ ಟ್ರೀ. ಇದು ನಗ್ನ ಬೀಜ ವೃಕ್ಷ. ಎತ್ತರ 315 ಅಡಿ. ಎದೆಯುತ್ತರಕ್ಕೆ ಕಾಂಡದ ವ್ಯಾಸ 21 ಅಡಿ. ಸುತ್ತಳತೆ 70 ಅಡಿ. ಮರದ ಪ್ರಾಯ 2,400 ವರ್ಷಗಳು. ಈ ಮರದ ಹತ್ತಿರ ನಿಂತಾಗ ನಾವು ಎಷ್ಟು ಕುಬ್ಜರು ಅನಿಸಿತು. ನೆಲದಿಂದ 100 ಅಡಿ ಎತ್ತರದವರೆಗೆ ಮರದಲ್ಲಿ ಯಾವುದೇ ಗೆಲ್ಲುಗಳಿಲ್ಲ. ಅದರ ಮೇಲೆ ಕಾಂಡದ ಸುತ್ತಲೂ ಅಗಲವಾಗಿ ಹಬ್ಬಿದ ಗೆಲ್ಲುಗಳು ಅಪೂರ್ವ ಗೊಂಚಲುಗಳಾಗಿ ಕಂಗೊಳಿಸುತ್ತವೆ. ಮರವನ್ನು ಅಡಿಮೇಲಾಗಿ ಭಾವಿಸಿದರೆ ಹಲವು ಬಲ್ಬ್‌ಗಳುಳ್ಳ ಅಲಂಕಾರಿಕ ನೇತಾಡುವ ಗೊಂಚಲು ದೀಪವನ್ನು ಹೋಲುತ್ತದೆ. ಇದೇ ಕಾರಣಕ್ಕೆ ಇದಕ್ಕೆ 'ಶಾಂಡೆಲಿಯರ್ ಟ್ರೀ' ಎಂಬ ಹೆಸರು.

ಇಂತಹ ಮರದ ಬುಡದಲ್ಲಿ ಕೊರೆದ ಸುರಂಗವು ಈ ಮರದ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಿದೆ. ಕಾಂಡದ ಬುಡದಲ್ಲಿ ಕೆತ್ತಿದ ಈ ಸುರಂಗ ಮಾರ್ಗದ ಎತ್ತರ 6 ಅಡಿ. ಅಗಲವೂ 6 ಅಡಿ. ಇದರ ಮೂಲಕ ಕಾರು ಪ್ರಯಾಣ ಒಂದು ವಿಲಕ್ಷಣ ಅನುಭವ.

ಈ ಮರವು ಖಾಸಗಿ ಒಡೆತನದಲ್ಲಿದೆ. ಮರದ ಬುಡದ ಸುರಂಗವನ್ನು ಸಾವಿರದ 1930ರಲ್ಲಿ ಕೊರೆ ಯಲಾಯಿತಂತೆ. ಪ್ರತಿದಿನ ಇಲ್ಲಿಗೆ ಸುಮಾರು 500 ಪ್ರವಾಸಿಗರು ಭೇಟಿನೀಡುತ್ತಾರೆ. ಮರದ ಒಳಗಿನ ಡ್ರೈವ್ ಇನ್ ಥ್ರೂ ಪ್ರಯಾಣಕ್ಕೆ 10 ಡಾಲರ್‌ಗಳ ಶುಲ್ಕ ನೀಡಬೇಕು. ಈ ಜಾಗವನ್ನು ಒಂದು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಿದ್ದಾರೆ. ಮರದ ಸುತ್ತ ಮುತ್ತಲಿನ ಜಾಗದಲ್ಲಿ ವಿಶಾಲ ಹುಲ್ಲುಹಾಸು, ಸರೋವರ, ಪ್ರಶಾಂತ ವಾತಾವರಣ.



# ಸನ್ಮಾನ್ಯ ಶ್ರೀ ಬಿ.ವೈ. ರಾಘವೇಂದ್ರ ಅವರಿಗೆ

# ಜನುಮದಿನದ ಹಾರ್ದಿಕ ಶುಭಾಶಯಗಳು

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಬಗ್ಗೆ ಚಿಂತಿಸುತ್ತಾ ಕಾರ್ಯ ಪ್ರವರ್ತತರಾಗಿರುವ ಶ್ರೀ ಬಿ.ವೈ. ರಾಘವೇಂದ್ರರವರು 4ನೇ ಬಾರಿಗೆ ಸಂಸತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಕ್ಷಣದಿಂದಲೇ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ತಮ್ಮ ಪ್ರಯತ್ನಗಳನ್ನು ಮುಂದುವರೆಸಿದ್ದು, ಪ್ರಥಮ ಅಧಿವೇಶನದ ಪ್ರಾರಂಭದಲ್ಲಿಯೇ ಕೇಂದ್ರ ಸರ್ಕಾರದ ಹಲವು ಸಚಿವರನ್ನು ಭೇಟಿಯಾಗಿ ಮನವಿಗಳನ್ನು ಸಲ್ಲಿಸಿದ್ದಷ್ಟೇ ಅಲ್ಲದೇ ಹಲವು ಯೋಜನೆಗಳಿಗೆ ಮಂಜೂರಾತಿ ದೊರಕಿಸಿಕೊಳ್ಳುವಲ್ಲಿಯೂ ಸಫಲರಾಗಿದ್ದಾರೆ.

# ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರರಿಂದ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ

## ಕೇಂದ್ರ ಸರ್ಕಾರದ ಯೋಜನೆಗಳು

● ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರನ್ನು ಭೇಟಿಯಾಗಿ ಈ ಕೆಳಕಂಡ ಬೇಡಿಕೆಗಳನ್ನು ಸಲ್ಲಿಸಿದ್ದು, ಅವುಗಳ ಮಂಜೂರಾತಿಗೆ ಅನುಮೋದನೆ ದೊರಕಿದೆ.

✤ ಶಿವಮೊಗ್ಗ ಲೋಕಸಭಾ ಕ್ಷೇತ್ರಕ್ಕೆ ಅತ್ಯಂತ ತುರ್ತಾಗಿ 4 ಸಂಚಾರಿ ವೈದ್ಯಕೀಯ ಚಿಕಿತ್ಸಾ ವಾಹನಗಳನ್ನು ಮಂಜೂರು ಮಾಡಲು ✤ ಶಿವಮೊಗ್ಗದಲ್ಲಿ ಅತ್ಯಂತ ಅವಶ್ಯಕವಾಗಿ ಬೇಕಾಗಿರುವ Small Industries Development Bank of India (SIDBI) ಬ್ಯಾಂಕ್ ಶಾಖೆಯನ್ನು ತೆರೆಯಲು ✤ ಶಿವಮೊಗ್ಗದ ಪ್ರತಿಷ್ಠಿತ ಗುಡ್ಡೆಕಲ್‌ನಲ್ಲಿ ಪ್ರತಿಷ್ಠಾಪಿಸಲಾಗುತ್ತಿರುವ ವಿಶ್ವದಲ್ಲಿಯೇ ಅತೀ ಎತ್ತರದ 151 ಅಡಿ ಎತ್ತರದ ಶ್ರೀ ಬಾಲಸುಬ್ರಹ್ಮಣ್ಯ ಪುತ್ಥಳಿಗೆ ನಿರ್ಮಾಣ ಮಾಡಲು ✤ ಈ ಹಿಂದೆ ಶಿವಮೊಗ್ಗಕ್ಕೆ ಮಂಜೂರು ಮಾಡಲಾಗಿದ್ದ ಮೆಕ್ಕೆಜೋಳ ಸಂಶೋಧನಾ ಕೇಂದ್ರವನ್ನು ಆದಷ್ಟು ಬೇಗನೇ ಪ್ರಾರಂಭಿಸುವಂತೆ ಮನವಿ ಸಲ್ಲಿಸಲಾಯಿತು.

● ಕೇಂದ್ರ ಸರ್ಕಾರದ ಭೂ ಸಾರಿಗೆ ಮಂತ್ರಾಲಯದ ಸಚಿವರಾದ ಶ್ರೀ ನಿತಿನ್ ಜೈರಾಂ ಗಡ್ಕರಿರವರಿಗೆ ನೀಡಿದ ಮನವಿಯನ್ವಯ 2024–25 ನೇ ಸಾಲಿನಲ್ಲಿ ಶಿವಮೊಗ್ಗ ಲೋಕಸಬಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ದಿನಾಂಕ 28.06.2024 ರಂದು ಅನುಮೋದನೆ ಪಡೆಯಲಾಗಿದೆ.

## ರಾಷ್ಟ್ರೀಯ ಹೆದ್ದಾರಿ

✤ ರಾಷ್ಟ್ರೀಯ ಹೆದ್ದಾರಿ 766 ಸಿ ಬೈಂದೂರಿನಿಂದ ರಾಣೆಬೆನ್ನೂರು ವರೆಗೆ ಹಲವು ಭಾಗಗಳಲ್ಲಿ ದ್ವಿಪಥರಸ್ತೆ ನಿರ್ಮಾಣ ಮಾಡಲಾಗಿದ್ದು ಬಾಕಿ ಉಳಿದ ಭಾಗಗಳಲ್ಲಿ ದ್ವಿಪಥರಸ್ತೆ ನಿರ್ಮಾಣ ಪೂರ್ಣಗೊಳಿಸಲು – 56 ಕಿ.ಮೀ. ✤ ರಾಷ್ಟ್ರೀಯ ಹೆದ್ದಾರಿ 369 ಇ ಸಾಗರದಿಂದ ಮರಕುಟಕವರೆಗೆ (ಸಿಗಂಧೂರು ಸೇತುವೆ ಮೂಲಕ) ದ್ವಿಪಥ ರಸ್ತೆಯನ್ನು ಸಾಗರ ಪಟ್ಟಣದ ಬೈಪಾಸ್ ಸೇರಿ ನಿರ್ಮಾಣ ಮಾಡಲು– 62 ಕಿ.ಮೀ. ✤ ರಾಷ್ಟ್ರೀಯ ಹೆದ್ದಾರಿ 169 ಎ ಆಗುಂಬೆ ಘಾಟಿ ರಸ್ತೆಯನ್ನು ದ್ವಿಪಥ ರಸ್ತೆಯಾಗಿ ಅಗಲೀಕರಣ ಮಾಡಿ ಅಭಿವೃದ್ಧಿಗೊಳಿಸಲು – 20 ಕಿ.ಮೀ. ✤ ರಾಷ್ಟ್ರೀಯ ಹೆದ್ದಾರಿ 69 ತಾಳಗುಪ್ಪ ಚೂರಿಕಟ್ಟೆಯಿಂದ ಸಾಗರದವರೆಗೆ ಮತ್ತು ಸಾಗರದಿಂದ ಆನಂದಪುರವರೆಗೆ ದ್ವಿಪಥ ರಸ್ತೆ ನಿರ್ಮಾಣ ಮಾಡಲು – 32 ಕಿ.ಮೀ.

**ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾತಿಗೆ ಕೋರಿದ್ದು ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಮಂಜೂರಾತಿಯ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ**

✤ ರಾಷ್ಟ್ರೀಯ ಹೆದ್ದಾರಿ 169 ಎ ಮೇಗರವಳ್ಳಿಯಿಂದ ಸೋಮೇಶ್ವರದವರೆಗೆ ಆಗುಂಬೆ ಘಾಟಿ ರಸ್ತೆಗೆ ಪರ್ಯಾಯವಾಗಿ ಸುರಂಗ ಮಾರ್ಗದ ದ್ವಿಪಥ ರಸ್ತೆ ನಿರ್ಮಾಣ. ✤ ರಾಷ್ಟ್ರೀಯ ಹೆದ್ದಾರಿ 66 ಕುಂದಾಪುರದಿಂದ ಗಂಗೊಳ್ಳಿ ಮೀನು ಬಂದರಿನವರೆಗೆ ರಸ್ತೆ ಹಾಗೂ ಸೇತುವೆ ನಿರ್ಮಾಣ –7.20 ಕಿ.ಮೀ.

✤ ರಾಷ್ಟ್ರೀಯ ಹೆದ್ದಾರಿ 66 ಬೈಂದೂರಿನಿಂದ ತಾರಾಪತಿ ಅಳವೆಕೋಡಿಯ ವಿವಿದೋದ್ದೇಶದ ಬಂದರಿನವರೆಗೆ 3.80 ಕಿ.ಮೀ ಉದ್ದದ ರಸ್ತೆ ಹಾಗು ಸೇತುವೆ ನಿರ್ಮಾಣ. ✤ ರಾಷ್ಟ್ರೀಯ ಹೆದ್ದಾರಿ 66 ರ ಬೈಂದೂರು ವ್ಯಾಪ್ತಿಯಲ್ಲಿ 6 ಅಂಡರ್ ಪಾಸ್ (ಯಡತರೆ, ತ್ರಾಸಿ, ತಲ್ಲೂರು, ಮುಳಕಟ್ಟೆ, ಹೆಮ್ಮಾಡಿ, ತಾಲ್ಲೂಕು ಕಛೇರಿ ಬಳಿ) ಹಾಗು 2 ಪ್ಲೈಓವರ್, ಸರ್ವೀಸ್ ರಸ್ತೆ ಮತ್ತು ಹೈಮಾಸ್ಟ್ ದೀಪಗಳನ್ನು ಅಳವಡಿಸುವುದು. ✤ ಕೊಡಚಾದ್ರಿಯಿಂದ ಕೊಲ್ಲೂರಿನವರೆಗೆ ಕೇಬಲ್ ಕಾರ್ ನಿರ್ಮಾಣದ ಪಥನಕ್ಷೆ ಹಾಗು ಕಾರ್ಯಸಾಧ್ಯತೆ ವರದಿಗೆ 2022–23ರಲ್ಲಿ ಅನುಮೋದನೆ ನೀಡಲಾಗಿದ್ದು, ಈ ವರ್ಷದಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. ✤ ರಾಷ್ಟ್ರೀಯ ಹೆದ್ದಾರಿ 66 ಮರವಂತೆ ಕಡಲಿನ ಬಳಿ ರಸ್ತೆ ಬದಿಯ ಪಾರ್ಕಿಂಗ್ ಮತ್ತು ಸವಲತ್ತುಗಳನ್ನು ಅಳವಡಿಸಲು ಕ್ರಮ ವಹಿಸಲಾಗಿದೆ– 2.5 ಕಿ.ಮೀ. ✤ ಶಿವಮೊಗ್ಗ ನಗರದ ಉತ್ತರ ಭಾಗದಲ್ಲಿ 16 ಕಿ.ಮೀ ಗಳ ಬೈಪಾಸ್ ರಸ್ತೆ ನಿರ್ಮಾಣ. ✤ ರಾಜ್ಯ ಹೆದ್ದಾರಿ 25 ಶಿವಮೊಗ್ಗ–ಹೊನ್ನಾಳಿ–ಹರಿಹರ–ಮರಿಯಮ್ಮನಹಳ್ಳಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಅಭಿವೃದ್ಧಿಪಡಿಸುವುದು– 182 ಕಿ.ಮೀ. ✤ ಕೇಂದ್ರ ರೈಲ್ವೇ ಇಲಾಖೆ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ರವರುಗಳನ್ನು ಭೇಟಿಯಾಗಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾತಿ ದೊರಕಿಸಿಕೊಡಲು ಕೋರಿದ್ದು ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಮಂಜೂರಾತಿಯ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

## ರೈಲ್ವೆ ಕಾಮಗಾರಿಗಳು

✤ ಯಶವಂತಪುರದಿಂದ ಶಿವಮೊಗ್ಗ ಕ್ಕೆ ವಂದೇ ಭಾರತ್ ರೈಲು ✤ ಶಿವಮೊಗ್ಗ – ಬೀರೂರು ಮಾರ್ಗ ಡಬ್ಲಿಂಗ್ ✤ ಭದ್ರಾವತಿ ರೈಲು ನಿಲ್ದಾಣ ಅಭಿವೃದ್ಧಿ ✤ ಶಿವಮೊಗ್ಗ–ರೇಣಿಗುಂಟಾ –ಚನ್ನೈ ರೈಲಿನ ಮರುಚಾಲನೆಗೊಳಿಸಲು ✤ ಶಿವಮೊಗ್ಗ ರೈಲ್ವೇ ನಿಲ್ದಾಣದಲ್ಲಿ ಎಕ್ಸಲೇಟರ್ ನಿರ್ಮಾಣ ಮಾಡಲು ✤ ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ನಡುವಿನ ನೂತನ ರೈಲು ಮಾರ್ಗದ ಕಾಮಗಾರಿಯನ್ನು ತ್ವರಿತಗೊಳಿಸಲು ✤ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಶ್ರೀ ಭೂಪೇಂದ್ರ ಯಾದವ್‌ರವರಿಗೆ ಭೇಟಿಯಾಗಿ ಭದ್ರಾವತಿ ಎಂ.ಪಿ.ಎಂ. ಕಾರ್ಖಾನೆಯ ನಿರ್ವಹಣೆ ಮತ್ತು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಎಂ.ಪಿ.ಎಂ. ಕಾರ್ಖಾನೆಯ ಬಂದಿತ ತಿರುಳಿನ ತೋಟಗಳನ್ನು ಬೆಳಸುವ ಹಾಗು ನಿರ್ವಹಣೆಯ ಯೋಜನೆಗೆ ಅನುಮೋದನೆ ನೀಡಲು ಕೋರಿದ್ದು ಮಾನ್ಯಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಮಂಜೂರಾತಿಯ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ. ✤ ಕೇಂದ್ರ ರಕ್ಷಣಾ ಮಂತ್ರಾಲಯದ ಸಚಿವರಾದ ಶ್ರೀ ರಾಜನಾಥ ಸಿಂಗ್ ರವರಿಗೆ ಭೇಟಿಯಾಗಿ ಶಿವಮೊಗ್ಗ ನಗರದ ಯುವಜನತೆಗೆ ವಾಯು ಸೇನೆಯ ಬಗ್ಗೆ ಅರಿವು ಮೂಡಿಸಿ ಸೇನೆ ಸೇರಲು ಪ್ರೇರೇಪಣೆ ನೀಡಲು ನಗರಕ್ಕೆ ಸ್ಥಗಿತಗೊಳಿಸಲಾದ ವಿಮಾನವನ್ನು ಮಂಜೂರುಮಾಡಿ ಸಾಗಿಸಿಕೊಡಲು

ಕೋರಿದ್ದು ಶಿವಮೊಗ್ಗ ನಗರಕ್ಕೆ ಸ್ಥಗಿತಗೊಳಿಸಲಾದ ವಿಮಾನವನ್ನು ಮಂಜೂರು ಮಾಡಿದ್ದು ಶಿವಮೊಗ್ಗ ನಗರಕ್ಕೆ ವಾಯು ಸೇನೆಯ ಮೂಲಕ ಸಾಗಿಸಿಕೊಡಲು ಒಪ್ಪಿರುತ್ತಾರೆ.

## ವಿಐಎಸ್‌ಎಲ್ ಪುನಶ್ಚೇತನ

✤ ಕೇಂದ್ರ ಭಾರೀಕೈಗಾರಿಕೆ ಮತ್ತು ಉಕ್ಕು ಮಂತ್ರಾಲಯದ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿರವರಿಗೆ ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಕಾರ್ಖಾನೆಗೆ ಬೇಟಿ ನೀಡಿ ಅದರ ಪುನಶ್ಚೇತನಗೊಳಿಸುವಲ್ಲಿ ನೆರವು ನೀಡಲು ಕೋರಿದ್ದು ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ದಿನಾಂಕ 30.06.2024 ರಂದು ಉಕ್ಕು ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಅಮರೇಂದ್ರ ಪ್ರಕಾಶ್‌ರವರೊಂದಿಗೆ ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಕಾರ್ಖಾನೆಗೆ ಬೇಟಿ ನೀಡಿ ಸಭೆಗಳನ್ನು ನೆಡೆಸಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ. ✤ ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ಹಂಚಿಕೆ ಹಾಗು ನವೀಕರಿಸಬಹುದಾದ ಶಕ್ತಿಯ ಸಚಿವರಾದ ಶ್ರೀ ಪ್ರಹ್ಲಾದ್‌ಜೋಶಿ ರವರಿಗೆ ಭೇಟಿಯಾಗಿ ಶಿವಮೊಗ್ಗ ಕ್ಷೇತ್ರದಲ್ಲಿ ಮಂಜೂರಾದ 7 ಉಗ್ರಾಣಗಳ ನವೀಕರಣದ ಪೈಕಿ ಶೇ 40 ರಷ್ಟು ಪೂರ್ಣಗೊಂಡು ಸ್ತಗಿತಗೊಂಡಿರುವ 6 ಉಗ್ರಾಣಗಳ ನವೀಕರಣ ಕೆಲಸವನ್ನು ಪುನಹ ಪ್ರಾರಂಭಿಸಿ ಶೀಘ್ರ ಪೂರ್ಣಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲು ಕೋರಿದ್ದು ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಮಂಜೂರಾದ ಉಗ್ರಾಣಗಳ ನವೀಕರಣವನ್ನು ಪೂರ್ಣಗೊಳಿಸಲು ನಿರ್ದೇಶಿಸಿರುತ್ತಾರೆ.

## ಪ್ರವಾಸೋದ್ಯಮ

✤ ಕೇಂದ್ರ ಪ್ರವಾಸೋಧ್ಯಮ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಗಜೇಂದ್ರ ಸಿಂಗ್ ಶೇಖಾವತ್ ರವರನ್ನು ಭೇಟಿಯಾಗಿ ಮಲೆನಾಡಿನ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹೆರಿಟೇಜ್ ಹಬ್ ಸ್ಥಾಪಿಸಲು ಮನವಿ ಸಲ್ಲಿಸಲಾಯಿತು. ✤ ಕೇಂದ್ರ ವಿಮಾನಯಾನ ಸಚಿವರಾದ ಶ್ರೀ ಕಿಂಜರಪು ರಾಮಮೋಹನ್ ನಾಯ್ಡುರವರನ್ನು ಭೇಟಿಯಾಗಿ 2023ರ ಫೆಬ್ರುವರಿಯಲ್ಲಿ ಉದ್ಘಾಟನೆಗೊಂಡ ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಈಗಾಗಲೇ ಹಲವು ವಿಮಾನಯಾನ ಸಂಸ್ಥೆಗಳು ವಿಮಾನಯಾನವನ್ನು ಪ್ರಾರಂಭಿಸಿದ್ದು, ನೈಟ್ ಲ್ಯಾಂಡಿಂಗ್ ವ್ಯವಸ್ಥೆಯನ್ನು ಅತ್ಯಂತ ಶೀಘ್ರವಾಗಿ ಕಲ್ಪಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಒತ್ತಾಯಿಸಲಾಯಿತು. ✤ ಕೇಂದ್ರ ಸಂಪರ್ಕ ಸಚಿವರಾದ ಶ್ರೀ ಜೋತಿರಾಧಿತ್ಯ ಸಿಂಧಿಯಾರವರನ್ನು ಬೇಟಿಯಾಗಿ ಈಗಾಗಲೇ ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಜೂರ್ಮಾಡಲಾಗಿರುವ ಬಿ.ಎಸ್.ಎನ್.ಎಲ್ ಮೊಬೈಲ್ ಟವರ್‌ಗಳನ್ನು ತ್ವರಿತಗತಿಯಲ್ಲಿ ಕಾರ್ಯಾರಂಭಗೊಳಿಸಲು ಅಗತ್ಯವಿರುವ ಮೊಬೈಲ್ ಮೈಕ್ರೋ ಸಾಧನ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಕೋರಲಾಯಿತು ಹಾಗೂ ಬದಲಾವಣೆ ಕೋರಿ ಸಲ್ಲಿಸಿರುವ ಸುಮಾರು 100 ಸ್ಥಳಗಳಲ್ಲಿ ಟವರ್ ಸ್ಥಾಪನೆಗೆ ಮಂಜೂರಾತಿ ನೀಡಲು ವಿನಂತಿಸಲಾಯಿತು.

## ಕ್ರೀಡೆ ಮತ್ತು ಕೈಗಾರಿಕೆ

✤ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರಾದ ಶ್ರೀ ಮನ್ಸುಖ್ ಮಾಂಡವೀಯರವರನ್ನು ಬೇಟಿಯಾಗಿ 2023ರಲ್ಲಿ ಶಿವಮೊಗ್ಗದಲ್ಲಿ ಖೇಲೋ ಇಂಡಿಯಾ ಯೋಜನೆಯಡಿ ಮಲ್ಟಿ ಪರ್ಪಸ್ ಒಳಾಂಗಣ ಕ್ರೀಡಾಂಗಣವನ್ನು ತಾಂತ್ರಿಕ ಕಾರಣದಿಂದ ಹಿಂಪಡೆದಿರುವುದನ್ನು ಪುನ: ಮಂಜೂರ್ಮಾಡಲು ವಿನಂತಿಸಲಾಯಿತು. ✤ ಕೇಂದ್ರ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ವರ್ಗದ ಉದ್ದಿಮೆಗಳು ಮತ್ತು ಕಾರ್ಮಿಕ ರಾಜ್ಯ ಸಚಿವರಾದ ಶ್ರೀಮತಿ ಶೋಭಾ ಕರಂದ್ಲಾಜೆ ರವರನ್ನು ಭೇಟಿಯಾಗಿ ಶಿವಮೊಗ್ಗ ಜಿಲ್ಲೆಯಷ್ಟೇ ಅಲ್ಲದೇ ಸುತ್ತಮುತ್ತಲ ಜಿಲ್ಲೆಗಳ ಸಾವಿರಾರು ಕಾರ್ಮಿಕ ಕುಟುಂಬಗಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಅನುಷ್ಠಾನಗೊಳ್ಳಿಸುತ್ತಿರುವ 100 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಇ.ಎಸ್.ಐ. ಆಸ್ಪತ್ರೆ ಕಟ್ಟಡವನ್ನು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ಕೋರಲಾಯಿತು. ಹಾಗೂ ಕೇಂದ್ರದ ಮಹತ್ವಾಕಾಂಕ್ಷೆಯ ವಿಶ್ವಕರ್ಮ ಯೋಜನೆಯಡಿಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿರುವ ಟೈಲರಿಂಗ್ ಮತ್ತು ಗಾರೆ ಕೆಲಸದವರಿಗೆ ವಿಧಿಸಲಾಗಿರುವ ನಿಬಂಧನೆಗಳನ್ನು ಸಡಿಲಗೊಳಿಸಲು ವಿನಂತಿಸಲಾಯಿತು.

## ಉದ್ಘಾಟನೆಯಾಗಿ ಸಾರ್ವಜನಿಕ ಸೇವೆಗೆ ಮುಕ್ತವಾಗಿರುವ ಯೋಜನೆಗಳು :

✤ ಸೋಮಿನಕೊಪ್ಪ ರೈಲ್ವೆ ಮೇಲ್ಸೇತುವೆ & ಪಿ.ಅಂಡ್ ಟಿ. ಕಾಲೋನಿ ರೈಲ್ವೆ ಕೆಳ ಸೇತುವೆ ✤ ಸವಳಂಗ ರಸ್ತೆಯ ರೈಲ್ವೆ ಮೇಲ್ಸೇತುವೆ & ಸವಳಂಗ ರಸ್ತೆಯ ರೈಲ್ವೆ ಕೆಳಸೇತುವೆ ✤ ವಿದ್ಯಾನಗರ ರೈಲ್ವೆ ಮೇಲ್ಸೇತುವೆ ✤ ಶಿವಮೊಗ್ಗದಿಂದ ಚೆನ್ನೈಗೆ ನೇರ ರೈಲು ಸಂಪರ್ಕ ಪ್ರಾರಂಭ.

## ಮಂಜೂರಾತಿಯಾಗಿ ಪ್ರಗತಿಯಲ್ಲಿರುವ ಕಾಮಗಾರಿಗಳು :

✤ ಶಿವಮೊಗ್ಗ ರೈಲ್ವೆ ನಿಲ್ದಾಣವನ್ನು ಅಮೃತ್ ಭಾರತ್ ಯೋಜನೆಯಡಿ ಅಭಿವೃದ್ಧಿಗೊಳಿಸುತ್ತಿರುವುದು ✤ ಸಾಗರ ರೈಲ್ವೆ ನಿಲ್ದಾಣವನ್ನು ಅಮೃತ್ ಭಾರತ್ ಯೋಜನೆಯಡಿ ಅಭಿವೃದ್ಧಿಗೊಳಿಸುತ್ತಿರುವುದು ✤ ತಾಳಗುಪ್ಪ ರೈಲ್ವೆ ನಿಲ್ದಾಣವನ್ನು ಅಮೃತ್ ಭಾರತ್ ಯೋಜನೆಯಡಿ ಅಭಿವೃದ್ಧಿಗೊಳಿಸುತ್ತಿರುವುದು ✤ ತುಮಕೂರು–ಶಿವಮೊಗ್ಗ ರಸ್ತೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಗತಿಯಲ್ಲಿದೆ ✤ ಚಿತ್ರದುರ್ಗ– ಶಿವಮೊಗ್ಗ ರಾ.ಹೆ–13 ರ 101 ಕಿ.ಮೀ ಉದ್ದದ ರಸ್ತೆಯಲ್ಲಿ ಬಾಕಿ ಉಳಿದ ಕಾಮಗಾರಿ ಅಭಿವೃದ್ಧಿ. – (2021 ರಲ್ಲಿ ಮಂಜೂರಾತಿ) ✤ 2019 ರಲ್ಲಿ (ರಾ. ಹೆ 369 ಇ) ಮಂಜೂರಾದ ಸಿಗಂಧೂರು ಸೇತುವೆ ನಿರ್ಮಾಣ ಶೇಕಡ 90 ರಷ್ಟು ಪೂರ್ಣಗೊಂಡಿದ್ದು, ಮುಂದಿನ ವರ್ಷದಲ್ಲಿ ಸಾರ್ವಜನಿಕ ಸೇವೆಗೆ ಅನುವು ಮಾಡಿಕೊಡಲಾಗುವುದು ✤ ರಾ.ಹೆ 206ರಲ್ಲಿ ಸಾಗರ ಪಟ್ಟಣದ ಪರಿಮಿತಿಯಲ್ಲಿ 6 ಕಿ.ಮೀ ಗಳ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದು ✤ ಬಿ.ಎಸ್.ಎನ್.ಎಲ್. ಮೊಬೈಲ್ ಟವರ್‌ಗಳು ✤ ಪಿ.ಎಂ.ಶ್ರೀ ಯೋಜನೆಯಡಿ 8 ಶಾಲೆಗಳ ಸಮಗ್ರ ಅಭಿವೃದ್ಧಿ ✤ ಎಫ್.ಎಂ. ಸ್ಟೇಷನ್ ಕಾಮಗಾರಿ ✤ ಸಂಸದರ ಆದರ್ಶ ಗ್ರಾಮ ಯೋಜನೆಯಡಿ ಶಿವಮೊಗ್ಗ ತಾಲ್ಲೂಕಿನ ಹೊಳಲೂರು ಗ್ರಾಮ ಪಂಚಾಯತಿಯಲ್ಲಿ ಹಾಗೂ ಸಾಗರ ತಾಲ್ಲೂಕಿನ ತ್ಯಾಗರ್ತಿ ಗ್ರಾಮ ಪಂಚಾಯತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ✤ ಸಂಸದರ ಅನುದಾನದಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟಾರೆ ವಿವಿಧ ಅಭಿವೃದ್ಧಿ ಕಾಮಗಾರಿಗಳು ✤ ಜಲ್ ಜೀವನ್ ಮಿಷನ್ ಅಡಿಯಲ್ಲಿ ಶುದ್ದ ಕುಡಿಯವ ನೀರಿನ ಯೋಜನೆಗಳು ✤ ಕೋಟೆಗಂಗೂರು ರೈಲ್ವೆ ಕೋಚಿಂಗ್ ಡಿಪೋ ಮತ್ತು ಟರ್ಮಿನಲ್ ನಿರ್ಮಾಣ ✤ ಭದ್ರಾವತಿ ಕಡದಕಟ್ಟೆ ಬಳಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ✤ 2022 ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ 766 ಸಿ ಹೆದ್ದಾರಿಯಲ್ಲಿ ದ್ವಿಪಥ ರಸ್ತೆಯಲ್ಲಿ 27.78 ಕಿ.ಮೀಗಳ ರಸ್ತೆ ಅಭಿವೃದ್ಧಿ ಕಾಮಗಾರಿ ಶೇಕಡ 95 ರಷ್ಟು ಮುಕ್ತಾಯವಾಗಿದೆ ✤ 2022 ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ 766 ಸಿ ರಲ್ಲಿ 56 ರಿಂದ 86 ಕಿ.ಮೀ ವರಗೆ ದ್ವಿಪಥ ರಸ್ತೆಯ ಪುನರ್ ಅಭಿವೃದ್ಧಿ ಮತ್ತು ಚಿಕ್ಕೋಡಿ ಬಳಿ ಸೇತುವೆ ಒಳಗೊಂಡಂತೆ 2 ಪ್ರಮುಖ ಸೇತುವೆಗಳ ನಿರ್ಮಾಣ ✤ 2022 ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ 169 ರಲ್ಲಿ (ಶಿವಮೊಗ್ಗ–ಮಂಗಳೂರು) ನೆಲ್ಲಿಸರಕ್ಯಾಂಪ್‌ನಿಂದ ತೀರ್ಥಹಳ್ಳಿವರೆಗಿನ 31.55 ಕಿ.ಮೀ ದ್ವಿಪಥ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದು ✤ 2022ನೇ ಸಾಲಿನಲ್ಲಿ ರಾ.ಹೆದ್ದಾರಿ 766 ಸಿ ಬೈಂದೂರು ರಾಣೆಬೆನ್ನೂರು ಭಾಗದಲ್ಲಿ 37.850 ಕಿ.ಮೀ ದ್ವಿಪಥ ರಸ್ತೆ ಅಭಿವೃದ್ಧಿ ✤ 2023ನೇ ಸಾಲಿನಲ್ಲಿ ರಾ.ಹೆದ್ದಾರಿ 69 ಹೊನ್ನಾವರ–ಚಿತ್ತೂರು ಭಾಗದಲ್ಲಿ 36.588 ಕಿ.ಮೀ ಚತುಷ್ಪಥ ರಸ್ತೆ ಅಭಿವೃದ್ಧಿ ✤ 2023 ನೇ ಸಾಲಿನಲ್ಲಿ ಹೊಸೂರು ಬಳಿ ಎಲ್.ಸಿ 110 ಕ್ಕೆ ಹಾಗೂ ತಾಳಗುಪ್ಪ ಬಳಿ ಎಲ್.ಸಿ 152 ರಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ.

ಪ್ರಕಟಣೆ : ಬಿ.ವೈ.ಆರ್. ಅಭಿಮಾನಿ ಬಳಗ, ಶಿವಮೊಗ್ಗ